ಸಂಪಾದಕರು :
ಎಂ.ಎಸ್. ವಿಕಾಸ್

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಬುಧವಾರ, ಮಾರ್ಚ್ 5, 2025

ಸಂಪುಟ : 51 ಸಂಚಿಕೆ : 292 ☎ 08192-254736 91642 99999 RNI No: 27369 ಪುಟ : 6 ರೂ : 5.00 www.janathavani.com janathavani@mac.com


## ಖಾಸಗಿ ಬಡಾವಣೆ ನಿರ್ಮಾಣಕ್ಕೆ ಸರ್ಕಾರದ ಅನುಮತಿ ಕಡ್ಡಾಯ

### ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ್ ಆದೇಶ

ಬೆಂಗಳೂರು,ಮಾ.4- ರಾಜ್ಯದ ಯಾವುದೇ ಮೂಲೆಯಲ್ಲಿ ಖಾಸಗಿಯವರು ವಸತಿ ಬಡಾವಣೆ ನಿರ್ಮಾಣ ಮಾಡುವು ದಾದರೆ ಇನ್ನು ಮುಂದೆ ಸರ್ಕಾರದ ಅನುಮತಿ ಕಡ್ಡಾಯ ಎಂದು ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ಆದೇಶ ಮಾಡಿದ್ದಾರೆ.

ನಗರಾಭಿವೃದ್ಧಿ ಪ್ರಾಧಿಕಾರ ಹಾಗೂ ನಗರ ಯೋಜನಾ ಪ್ರಾಧಿಕಾರಗಳ ವ್ಯಾಪ್ತಿಯಲ್ಲಿ ಯಾರೇ ಬಡಾವಣೆ ನಿರ್ಮಿಸಲು ಮುಂದಾದರೆ, ಅಂತಹವರು ಸ್ಥಳಿಯ ಪ್ರಾಧಿಕಾರದ ಜೊತೆಗೆ ಸರ್ಕಾರದ ಅನುಮತಿ ಪಡೆಯುವುದೂ ಅಗತ್ಯ ಎಂದಿದ್ದಾರೆ.

ಖಾಸಗಿಯವರು ಬಡಾವಣೆಗಳನ್ನು ನಿರ್ಮಿಸಿ ಮೂಲಸೌಕರ್ಯ ಕಲ್ಪಿಸದೆ, ನಿವೇಶನ ಪಡೆದವರಿಗೆ ಮತ್ತು ಸರ್ಕಾರಕ್ಕೆ ವಂಚನೆ ಮಾಡುತ್ತಿದ್ದಾರೆ.

ನಿವೇಶನ ಪಡೆದವರು ಮೂಲ ಸೌಕರ್ಯಕ್ಕಾಗಿ ಬಡಾವಣೆ ನಿರ್ಮಾಣ ಮಾಡಿದವರನ್ನು ಕೇಳದೆ, ಸರ್ಕಾರದ ಮೊರೆ ಹೋಗುತ್ತಾರೆ, ಇಂತಹ ಕ್ರಮಗಳಿಂದ ಹೊಸ ಬಡಾವಣೆಗಳು ಅವ್ಯವಸ್ಥೆಯ ಆಗರಗಳಾಗಿವೆ.

ಇದನ್ನು ತಪ್ಪಿಸಲು ಅಕ್ರಮ-ಸಕ್ರಮಕ್ಕೆ ಸರ್ಕಾರ ಮುಂದಾಗಿದೆ, ಇನ್ನು ಮುಂದೆ ಯಾವುದೇ ಖಾಸಗಿ ಬಡಾವಣೆಗಳ ನಿರ್ಮಾಣಕ್ಕೆ ಅನುಮತಿ ಪಡೆಯಬೇಕೆಂಬ ಆದೇಶ ಮಾಡಿದ್ದೇವೆ.

ನಗರಾಭಿವೃದ್ಧಿ ಪ್ರಾಧಿಕಾರ ಹಾಗೂ ನಗರ ಯೋಜನಾ ಪ್ರಾಧಿಕಾರಗಳ ಸಭೆ ಉದ್ದೇಶಿಸಿ ಈ ಆದೇಶ ಮಾಡಿರುವ ಸಚಿವರು, ಭೂಸ್ವಾಧೀನ ಮಾಡಿಕೊಂಡು ಪ್ರಾಧಿಕಾರದ ವತಿಯಿಂದಲೇ ಹೊಸ ಬಡಾವಣೆಗಳನ್ನು ಕೈಗೆತ್ತಿಕೊಳ್ಳಿ ಎಂದರು.

ಭೂಮಿ ಖರೀದಿಸಿ ಬಡಾವಣೆ ನಿರ್ಮಿಸಲು ಖಾಸಗಿಯವರಿಗೆ ಸಾಧ್ಯವಾ ಗುತ್ತಿರುವಾಗ ನಗರಾಭಿವೃದ್ಧಿ ಪ್ರಾಧಿಕಾರ ಗಳಿಂದ ಏಕೆ ಸಾಧ್ಯವಾಗುತ್ತಿಲ್ಲ ಎಂದು ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು. ಕರ್ನಾಟಕ ನಗರಾಭಿವೃದ್ಧಿ ಪ್ರಾಧಿ ಕಾರಗಳ ಕಾಯ್ದೆ ರಚಿಸಿರುವುದು ಪ್ರಾಧಿಕಾರಗಳು ಬಡಾವಣೆ ನಿರ್ಮಿಸಿ ರಾಜ್ಯದ (4ನೇ ಪುಟಕ್ಕೆ)

## ಎಸ್ಸೆಸ್ ಒಡೆತನದ ಮುಧೋಳ ಸಕ್ಕರೆ ಕಾರ್ಖಾನೆ ಪ್ರಥಮ

ದಾವಣಗೆರೆ, ಮಾ.4- ಶಾಮನೂರು ಶಿವಶಂಕರಪ್ಪ ಒಡೆತನದ ಮುಧೋಳದ ಇಂಡಿಯನ್ ಕೇನ್ ಪವರ್ ಕಾರ್ಖಾನೆಯು 17,78,943 ಟನ್ ಕಬ್ಬು ನುರಿಸಿ, 1,72,902 ಟನ್ ಸಕ್ಕರೆ ಉತ್ಪಾದಿಸುವ ಮೂಲಕ ನಂ. 1 ಸ್ಥಾನದಲ್ಲಿದೆ. ಡಾ. ಪ್ರಭಾಕರ್ ಕೋರೆ ಒಡೆತನದಲ್ಲಿರುವ ರಾಯಭಾಗದ ಶಿವಶಕ್ತಿ ಶುಗರ್ಸ್ 15,64,448 ಟನ್ ಕಬ್ಬು ನುರಿಸಿ, 1,72,558 ಟನ್ ಸಕ್ಕರೆ ಉತ್ಪಾದಿಸಿ, 2ನೇ ಸ್ಥಾನದಲ್ಲಿದೆ.

ಸಕ್ಕರೆ ಇಳುವರಿ ಕಾರ್ಖಾನೆಯಿಂದ ಕಾರ್ಖಾನೆಗೆ ಬೇರೆಯಾಗಿ ದ್ದರೂ ಸರಾಸರಿ ಇಳುವರಿ ಶೇ. 9.15 ಇದೆ.

ಚಿಕ್ಕೋಡಿ ತಾಲ್ಲೂಕಿನ ವೆಂಕೇಟಶ್ವ ಪಾವರ್ ಪ್ರಾಜೆಕ್ಟ್ ಕಾರ್ಖಾನೆಯ ಇಳುವರಿ ಜಿಲ್ಲೆಯಲ್ಲಿಯೇ ಅತಿ ಹೆಚ್ಚು ಅಂದರೆ ಶೇ. 1170 ಇದೆ ಎಂದು ಸಕ್ಕರೆ ಇಲಾಖೆಯ ಲಭ್ಯ ಅಂಕಿ-ಅಂಶಗಳಿಂದ ಬೆಳಿಕೆಗ ಬಂದಿದೆ.

## ಕೋಳಿ ಶೀತ ಜ್ವರಕ್ಕೆ ಆತಂಕ ಬೇಡ

### ಮುನ್ನೆಚ್ಚರಿಕೆ ಕ್ರಮವಾಗಿ ಎಸ್‌ಓಪಿ ಅಳವಡಿಕೆ: ಜಿಲ್ಲಾಧಿಕಾರಿ ಗಂಗಾಧರಸ್ವಾಮಿ



ದಾವಣಗೆರೆ, ಮಾ. 4- ಕೋಳಿಶೀತ ಜ್ವರ (ಹಕ್ಕಿ ಜ್ವರ)ವು ಹೆಚ್5ಎನ್1 ವೈರಸ್‌ನಿಂದ ಪಕ್ಷಿಗಳಿಗೆ ಹರಡುವ ಕಾಯಿಲೆಯಾಗಿದ್ದು, ಮನುಷ್ಯರಿಂದ ಮನುಷ್ಯರಿಗೆ ಸಾಂಕ್ರಾಮಿಕವಾಗಿ ಹರಡುವುದಿಲ್ಲ. ಹಾಗಾಗಿ ಸಾರ್ವಜನಿಕರು ಆತಂಕಪಡುವ ಅಗತ್ಯವಿಲ್ಲ, ಆದರೆ ಮುನ್ನೆಚ್ಚರಿಕೆ ಕ್ರಮವಾಗಿ ಎಸ್‌ಓಪಿ ಅಳವಡಿಸಲು ಕ್ರಮವಹಿಸಲಾಗುತ್ತದೆ ಎಂದು ಜಿಲ್ಲಾಧಿಕಾರಿ ಗಂಗಾಧರ ಸ್ವಾಮಿ ಜಿ.ಎಂ ತಿಳಿಸಿದರು.

ಅವರು ಮಂಗಳವಾರ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಕೋಳಿ ಶೀತ ಜ್ವರಕ್ಕೆ ಸಂಬಂಧಿಸಿದಂತೆ ಏರ್ಪಡಿಸಿದ್ದ ಅಧಿಕಾರಿಗಳ ಸಭೆಯಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಸಾಮಾನ್ಯವಾಗಿ ಶೀತಲ ಪ್ರದೇಶದ ವಲಸೆ ಹಕ್ಕಿಗಳು ವಂಶಾಭಿವೃದ್ಧಿಗಾಗಿ ಬಂದಾಗ ಹಿಕ್ಕೆ, ಪುಕ್ಕ ಹಾಗೂ ಬಾಯಿ ಮತ್ತು ಕಣ್ಣಿನಿಂದ ಹೊರ ಬರುವ ಸ್ರವಿಕೆಯಿಂದ ಕಾಯಿಲೆ ಹರಡುವ ಸಂಭವವಿದ್ದು, ಪಕ್ಷಿಗಳಿಗೆ ರೋಗವು ಹರಡುತ್ತದೆ ಎಂದು ತಿಳಿಸಿದರು.

ಇದು ಬಳ್ಳಾರಿ ಜಿಲ್ಲೆಯಲ್ಲಿ ಹಾಗೂ ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿನ ಕುಕ್ಕುಟ ಸಂವರ್ಧನಾ ಕೇಂದ್ರದಲ್ಲಿ ಸಾಕಾಣಿಕೆ ಮಾಡಿದ ಅಸಿಲ್ ಮತ್ತು ಕಾವೇರಿ ತಳಿಯ ಕೋಳಿಗಳಿಗೆ ಫೆಬ್ರವರಿ 23 ರಂದು ಕೋಳಿ ಶೀತ ಜ್ವರ ರೋಗದ ಲಕ್ಷಣ ಕಂಡುಬಂದು ಕೆಲವು ಕೋಳಿಗಳು ಮರಣ ಹೊಂದಿದ್ದವು. ಪರೀಕ್ಷೆಗಾಗಿ ಭೋಪಾಲ್‌ನ ರಾಷ್ಟ್ರೀಯ ಹೈ ಸೆಕ್ಯುರಿಟಿ ಪ್ರಾಣಿ ರೋಗಗಳ ಪ್ರಯೋಗಾಲಯಕ್ಕೆ ಕಳುಹಿಸಿದ್ದು ಸಂಸ್ಥೆಯು ಕೋಳಿ ಶೀತ ಜ್ವರವೆಂದು ದೃಢೀಕರಿಸಿರುತ್ತದೆ. ಇದಕ್ಕಾಗಿ (4ನೇ ಪುಟಕ್ಕೆ)

**ಬಳ್ಳಾರಿ, ಚಿಕ್ಕಬಳ್ಳಾಪುರದಿಂದ ಸಾಗಾಣಿಕೆಯಾಗುವ ಕೋಳಿಗಳನ್ನು ನಿರ್ಬಂಧಿಸಲು ಚೆಕ್ ಪೋಸ್ಟ್ ಸ್ಥಾಪನೆ**

**ಹಕ್ಕಿಗಳು ಮರಣ ಹೊಂದಿದರೆ ಮಾಹಿತಿ ನೀಡಲು ಸಹಾಯವಾಣಿ ಸ್ಥಾಪನೆ**

**ಬೇಯಿಸಿ ನಂತರ ಸೇವಿಸಿ**

**ಸಾರ್ವಜನಿಕರು ಮಾಂಸ ಮತ್ತು ಮೊಟ್ಟೆಗಳನ್ನು 70 ಡಿಗ್ರಿ ಅಧಿಕ ಉಷ್ಣಾಂಶದಲ್ಲಿ ಕನಿಷ್ಠ 30 ನಿಮಿಷ ಬೇಯಿಸಿದಾಗ ವೈರಾಣು ನಾಶಗೊಳ್ಳುತ್ತದೆ. ಹಾಗಾಗಿ ಸಾರ್ವಜನಿಕರು ಮಾಂಸ ಮತ್ತು ಮೊಟ್ಟೆಗಳನ್ನು ಚೆನ್ನಾಗಿ ಬೇಯಿಸಿದ ನಂತರ ಸೇವನೆ ಮಾಡಬೇಕು ಎಂದು ಜಿಲ್ಲಾಧಿಕಾರಿ ಹೇಳಿದರು.**

## 'ಅಪರಾಧ ಪ್ರಕರಣ ಕಡಿಮೆ ಆಗಿವೆ' ಹರೀಶ್ ಪ್ರಶ್ನೆಗೆ ಗೃಹ ಸಚಿವರ ಉತ್ತರ



ಬೆಂಗಳೂರು,ಮಾ.4- ಸೈಬರ್ ಕ್ರೈಂ ಘಟನೆಗಳನ್ನು ಹೊರತುಪಡಿಸಿ ರಾಜ್ಯದಲ್ಲಿ ಕಳೆದ ಒಂದು ವರ್ಷದಲ್ಲಿ ಅಪರಾಧ ಪ್ರಕರಣಗಳು ಕಡಿಮೆಯಾಗಿವೆ ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ್ ವಿಧಾನ ಸಭೆಗಿಂದು ತಿಳಿಸಿದ್ದಾರೆ.

ಪ್ರಶ್ನೋತ್ತರ ವೇಳೆಯಲ್ಲಿ ಹರಿಹರ ಶಾಸಕ ಬಿ.ಪಿ. ಹರೀಶ್ ಪ್ರಸ್ತಾವಕ್ಕೆ ಉತ್ತರಿಸಿದ ಅವರು, ಮಾದಕ ವಸ್ತುಗಳ ದುಷ್ಪರಿಣಾಮ ಕುರಿತು ಶಾಲಾ-ಕಾಲೇಜು ವಿದ್ಯಾರ್ಥಿಗಳಲ್ಲಿ ಜಾಗೃತಿ ಮೂಡಿಸಲಾಗುತ್ತಿದೆ. ಗಾಂಜಾ, ಅಫೀಮು, ಮಟ್ಕಾ ದಂಧೆ, ಕಳ್ಳಭಟ್ಟಿ, ಸರಗಳ್ಳತನ, ವಾಹನ ಕಳವು ಹಾಗೂ ಮಾದಕ ವಸ್ತುಗಳ ಮಾರಾಟದ ಮೇಲೆ ನಿರಂತರ ನಿಗಾ ವಹಿಸಿ ಕ್ರಮ ಕೈಗೊಳ್ಳಲಾಗುತ್ತಿದೆ. ರಾತ್ರಿ ಪಾಳಿ ಗಸ್ತು ಹೆಚ್ಚಿಸಲಾಗಿದೆ, ಹರಿಹರದಲ್ಲಿ 2023 ರಿಂದ ಫೆಬ್ರವರಿ 24 ರವರೆಗೆ 123 ಪ್ರಕರಣಗಳು ದಾಖಲಾಗಿವೆ ಎಂದರು.

## ನಾಮಿನಿಗಳಿಗೆ ವಿಮೆ ಲಾಭದ ಸಂಪೂರ್ಣ ಅಧಿಕಾರ ಇರುವುದಿಲ್ಲ



ಬೆಂಗಳೂರು, ಮಾ. 4 - ವಿಮೆಗಳ ನಾಮಿನಿಗಳಿಗೆ ವಿಮೆ ಲಾಭದ ಮೇಲೆ ಸಂಪೂರ್ಣ ಅಧಿಕಾರ ಇರುವುದಿಲ್ಲ ಎಂದು ಕರ್ನಾಟಕ ಹೈಕೋರ್ಟ್ ಮಹತ್ವದ ತೀರ್ಪು ನೀಡಿದೆ.

ವಿಮಾ ಕಾಯ್ದೆ, 1938ರ ಸೆಕ್ಷನ್ 39ಯು ಹಿಂದೂ ಉತ್ತರಾಧಿತ್ವ ಕಾಯ್ದೆ, 1956 ಸೇರಿದಂತೆ ವೈಯಕ್ತಿಕ ಉತ್ತರಾಧಿಕಾರ ಕಾಯ್ದೆಗಳನ್ನು ಮೀರಲಾಗದು ಎಂದು ಹೈಕೋರ್ಟ್ ತಿಳಿಸಿದೆ.

ವಿಮಾ ಕಂಪನಿಯ ಪಾವತಿಗೆ ಸಂಬಂಧಿಸಿದಂತೆ ನೀಲಮ್ಮ ಹಾಗೂ ಚಂದ್ರವ್ವ ಮತ್ತಿತರರು ದಾಖಲಿಸಿದ್ದ ಅರ್ಜಿಯ ಕುರಿತು ತೀರ್ಪು ನೀಡುವಾಗ ಹೈಕೋರ್ಟ್ ಈ ನಿಲುವು ತಳೆದಿದೆ. ನಾಮಿನಿಗಳು ಉತ್ತರಾ ಧಿತ್ವ ಕಾಯ್ದೆಗಳಿಗೆ ಬದ್ಧವಾಗಿ ಇರಬೇಕಾಗುತ್ತದೆ. (2ನೇ ಪುಟಕ್ಕೆ)

## ಕೃಷಿ ವಿದ್ಯುತ್ ಪೂರೈಕೆಯಲ್ಲಿ ಕಡಿತವಿಲ್ಲ

### ವಿಧಾನಸಭೆಯಲ್ಲಿ ಇಂಧನ ಸಚಿವ ಕೆ.ಜೆ.ಜಾರ್ಜ್ ಸ್ಪಷ್ಟನೆ

ಬೆಂಗಳೂರು,ಮಾ.4- ಪ್ರಸಕ್ತ ಬೇಸಿಗೆಯಲ್ಲಿ ಕೃಷಿ ಪಂಪ್‌ಸೆಟ್‌ಗಳಿಗೆ ಏಳು ಗಂಟೆ ವಿದ್ಯುತ್ ಪೂರೈಕೆಯಲ್ಲಿ ಕಡಿತವಿಲ್ಲ, ಗ್ರಾಮೀಣ ಭಾಗದಲ್ಲಿ ನಿರಂತರ 24 ಗಂಟೆ ಸಿಂಗಲ್ ಫೇಸ್ ವಿದ್ಯುತ್ ಪೂರೈಕೆ ಮಾಡಲಾಗುವುದು ಎಂದು ಇಂಧನ ಸಚಿವ ಕೆ.ಜೆ.ಜಾರ್ಜ್ ವಿಧಾನಸಭೆಯಲ್ಲಿ ಇಂದು ಸ್ಪಷ್ಟಪಡಿಸಿದ್ದಾರೆ.

ಶೂನ್ಯವೇಳೆಯಲ್ಲಿ ಸಿದ್ದು ಸವದಿ ಮಾಡಿದ ಪ್ರಸ್ತಾವಕ್ಕೆ ಉತ್ತರಿಸಿದ ಸಚಿವರು, ಅಗಾಧ ವಿದ್ಯುತ್ ಬೇಡಿಕೆ ಇದ್ದರೂ, ಕೃಷಿ ಹಾಗೂ ಶಿಕ್ಷಣ ಕಲಿಕೆಗೆ ಯಾವುದೇ ಕಾರಣಕ್ಕೂ ಕಡಿತ ಮಾಡುವುದಿಲ್ಲ.

ಏಪ್ರಿಲ್, ಮೇನಲ್ಲಿ ಬೇಡಿಕೆ 19,000 ಮೆಗಾ ವ್ಯಾಟ್ ತಲುಪಬಹುದೆಂಬ ನಿರೀಕ್ಷೆ ಇದೆ, ಅದನ್ನು ಗಮನದಲ್ಲಿ ಇಟ್ಟುಕೊಂಡು ನಾವು ಪೂರೈಕೆಗೆ ಸಿದ್ಧತೆ ಮಾಡಿಕೊಂಡಿದ್ದೇವೆ.

ವಿದ್ಯುತ್ ಪೂರೈಕೆ ಒತ್ತಡದಿಂದ ಕೆಲವು ಬಾರಿ ತಾತ್ಕಾಲಿಕವಾಗಿ ಸರಬರಾಜಿನಲ್ಲಿ ಅಡಚಣೆ ಉಂಟಾಗ ಬಹುದೇ ಹೊರತು, ಉಳಿದ ಯಾವುದೇ ಸಂದರ್ಭದಲ್ಲಿ ವಿದ್ಯುತ್ ಕಡಿತವಾಗಲೀ, (4ನೇ ಪುಟಕ್ಕೆ)

## ಆನ್‌ಲೈನ್ ಸರಕು ಪೂರೈಕೆಗೆ 'ಧರಣಿ ಶುಲ್ಕ'

ಪಂಜಾಬ್ ರೈತರು ನಿತ್ಯ ಧರಣಿಗಳನ್ನು ನಡೆಸುತ್ತಿರುವ ಕಾರಣದಿಂದಾಗಿ ಆನ್ ಲೈನ್ ಮೂಲಕ ಸರಕುಗಳನ್ನು ಪಡೆಯು ವುದು ದುಬಾರಿಯಾಗುತ್ತಿದೆ ಎಂದು ಮುಖ್ಯಮಂತ್ರಿ ಭಗವಂತ್ ಮಾನ್ ಹೇಳಿದ್ದಾರೆ.

ದೆಹಲಿಯಲ್ಲಿ ಅಮೆಜಾನ್ ಮೂಲಕ ಸರಕು ಖರೀದಿಸುವುದಕ್ಕೂ ಹಾಗೂ ಪಂಜಾಬ್‌ನಲ್ಲಿ ಸರಕು ಖರೀದಿಸುವುದಕ್ಕೂ ಬೆಲೆಯಲ್ಲಿ ವ್ಯತ್ಯಾಸವಿದೆ. ರಸ್ತೆ ತಡೆಗಳನ್ನು ನಡೆಸುತ್ತಿರುವ ಕಾರಣ (4ನೇ ಪುಟಕ್ಕೆ)

## ಜಿ. ಬೇವಿನಹಳ್ಳಿಯ ಪಿ. ಲಿಂಗನಗೌಡ್ರು ನಿಧನ



ಹರಿಹರ ತಾಲ್ಲೂಕಿನ ಜಿ.ಬೇವಿನಹಳ್ಳಿ ಗ್ರಾಮದ ಹಿರಿಯರು,
ನೊಳಂಬ ವೀರಶೈವ ಸಮಾಜದ ಮುಖಂಡರೂ, ವಕೀಲರೂ, ಹರಿಹರ ತಾ. ಪಂ. ಮಾಜಿ ಸದಸ್ಯರೂ ಆದ

**ಶ್ರೀ ಪಿ. ಲಿಂಗನಗೌಡ್ರು**

ಅವರು ದಿನಾಂಕ 04.03.2025ರ ಮಂಗಳವಾರ ರಾತ್ರಿ 10 ಗಂಟೆಗೆ ದಾವಣಗೆರೆಯ ಬಾಪೂಜಿ ಆಸ್ಪತ್ರೆಯಲ್ಲಿ ಅನಾರೋಗ್ಯದಿಂದಾಗಿ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 91 ವರ್ಷ ವಯಸ್ಸಾಗಿತ್ತು. ಪತ್ನಿ, ಓರ್ವ ಪುತ್ರ, ಇಬ್ಬರು ಪುತ್ರಿಯರು, ಅಳಿಯಂದಿರು, ಸೊಸೆ, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 05.03.2025ರ ಬುಧವಾರ ಮಧ್ಯಾಹ್ನ 3 ಗಂಟೆಗೆ ಜಿ. ಬೇವಿನಹಳ್ಳಿ ಗ್ರಾಮದ ಮೃತರ ಸ್ವಂತ ಜಮೀನಿನಲ್ಲಿ ನೆರವೇರಿಸಲಾಗುವುದು.

ವಿ. ಸೂ. : ದಾವಣಗೆರೆ ನಗರದ ಎಸ್.ಎಸ್. ಬಡಾವಣೆಯ 'ಎ' ಬ್ಲಾಕ್, ಒಳಾಂಗಣ ಕ್ರೀಡಾಂಗಣದ ಹತ್ತಿರ, ಕುಂದುವಾಡ ಕೆರೆ ರಸ್ತೆಯಲ್ಲಿರುವ 'ಅನುದೀಪ' ನಿವಾಸದಲ್ಲಿ ಬುಧವಾರ ಬೆಳಿಗ್ಗೆ 10 ಗಂಟೆಯವರೆಗೆ ಮೃತರ ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಿದ್ದು, ನಂತರ ಹರಿಹರ ತಾಲ್ಲೂಕು ಜಿ. ಬೇವಿನಹಳ್ಳಿ ಗ್ರಾಮಕ್ಕೆ ತರಲಾಗುವುದು.

ದುಃಖತಪ್ತರು : ಮೃತರ ಪತ್ನಿ: ಶ್ರೀಮತಿ ದೇವಿಕಾ ಲಿಂಗನಗೌಡ್ರು
ಪುತ್ರ: ಕಿರಣ್ ಎಲ್.ಪಾಟೀಲ್ ಚಾರ್ಟರ್ಡ್ ಅಕೌಂಟೆಂಟ್, ದಾವಣಗೆರೆ
ಸೊಸೆ: ಡಾ. ಲತಾ ಕಿರಣ್ ಪಾಟೀಲ್
ಪುತ್ರಿಯರಾದ: ಶ್ರೀಮತಿ ಪೂರ್ಣಿಮಾ ಶ್ರೀ ಆರ್ ಎಂ. ಬಾಣದ್, ದಾವಣಗೆರೆ
ಶ್ರೀಮತಿ ಇಂದುಮತಿ ಶ್ರೀ ಪ್ರಮತೇಶ್, ಅರಸೀಕೆರೆ
ಮೊಮ್ಮಕ್ಕಳು ಹಾಗೂ ಗೌಡ್ರ ವಂಶಸ್ಥರು, ಜಿ.ಬೇವಿನಹಳ್ಳಿ ಗ್ರಾಮಸ್ಥರು ಮತ್ತು ಬಂಧು-ಮಿತ್ರರು.




# ಸರಳ, ಕಾಯಕ ಜೀವಿ ಡಾ. ಸದ್ಯೋಜಾತ ಶ್ರೀ




## ಸದ್ಯೋಜಾತ ಶ್ರೀಗಳ ಬಗ್ಗೆ ಪಂಚ ಪೀಠಾಧಿಪತಿಗಳು ತಪ್ಪು ಕಲ್ಪನೆ ಹೊಂದಿದ್ದರು : ಉಮಾಪತಿ

**ವೀರಶೈವ ಲಿಂಗಾಯತ ಧರ್ಮವನ್ನು ಜನರು ಆಚರಿಸುತ್ತಿಲ್ಲ. ಧಾರ್ಮಿಕ ಪರಂಪರೆಯಿಂದ ಜನರು ದೂರವಾಗುತ್ತಿದ್ದಾರೆ ಎಂಬ ನೋವು ಶ್ರೀಗಳಿಗಿತ್ತು. ವಿರಕ್ತ ಪರಂಪರೆಯವರು ಬಸವಣ್ಣನನ್ನು ಆರಾಧಿಸುತ್ತಿದ್ದರಾದರೂ, ಬಸವ ತತ್ವಗಳನ್ನು ಪಾಲಿಸುತ್ತಿರಲಿಲ್ಲ. ಆದರೆ ಸದ್ಯೋಜಾತ ಶ್ರೀಗಳು ಬಸವ ತತ್ವ ಪಾಲಕರೂ ಆಗಿದ್ದರು. ಹೀಗಾಗಿ ಪಂಚ ಪೀಠಾಧೀಶ್ವರರು ಅವರ ಬಗ್ಗೆ ತಪ್ಪು ಕಲ್ಪನೆ ಹೊಂದಿದ್ದರು. ಇದರ ಬಗ್ಗೆ ನೋವಿದ್ದರೂ ತಮ್ಮ ಕರ್ತವ್ಯ, ಧರ್ಮಪಾಲನೆ, ವಿಚಾರಗಳನ್ನು ಸದ್ಯೋಜಾತ ಶ್ರೀಗಳು ಕೈ ಬಿಡಲಿಲ್ಲ. ಇಂತಹ ಸ್ವಾಮಿಗಳನ್ನು ಪಡೆದದ್ದು ನಮ್ಮ ಪುಣ್ಯ ಎಂದು ಬಿ.ಸಿ. ಉಮಾಪತಿ ಹೇಳಿದರು.**

ದಾವಣಗೆರೆ, ಮಾ.4- ಡಾ.ಸದ್ಯೋಜಾತ ಶಿವಾಚಾರ್ಯ ಮಹಾಸ್ವಾಮೀಜಿ ಅವರು ಸರಳ ಜೀವಿಗಳು, ಕಾಯಕ ಜೀವಿಗಳೂ ಆಗಿದ್ದರು ಎಂದು ಜವಳಿ ವರ್ತಕ ಬಿ.ಸಿ. ಉಮಾಪತಿ ಹೇಳಿದರು.

ಅಖಿಲ ಭಾರತ ಶಿವಾಚಾರ್ಯ ಸಂಸ್ಥೆ ಸಂಸ್ಥಾಪಕ ಅಧ್ಯಕ್ಷರೂ, ದಾವಣಗೆರೆ ಹಿರೇಮಠದ ಸ್ಥಿರ ಪಟ್ಟಾಧ್ಯಕ್ಷರೂ ಆಗಿದ್ದ ಶ್ರೀ ಡಾ.ಸದ್ಯೋಜಾತ ಶಿವಾಚಾರ್ಯ ಸ್ವಾಮೀಜಿಯವರ 17ನೇ ಸಂಸ್ಮರಣೋತ್ಸವ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಅವರು ಮಾತನಾಡಿದರು.

ಶ್ರೀಗಳು ಯಾವ ಕಾರ್ಯಕ್ರಮದಲ್ಲೂ ಗುರು ಕಾಣಿಕೆ ಪಡೆಯುತ್ತಿರಲಿಲ್ಲ. ಇಂತಹ ನಿಸ್ವಾರ್ಥ, ಧರ್ಮಾಭಿಮಾನ ಇರುವ, ಭಕ್ತರ ಮೇಲೆ ಕಾಳಜಿ ವಹಿಸುವ ಸ್ವಾಮೀಜಿಗಳನ್ನು ನಾನು ಎಲ್ಲಿಯೂ ನೋಡಿಲ್ಲ ಎಂದು ಹೇಳಿದರು.

ಮಠದಲ್ಲಿ ಕಸಗುಡಿಸುವ ಕೆಲಸದಿಂದ ಅಡುಗೆ ಮಾಡುವ ಕೆಲಸದವರೆಗೆ ಎಲ್ಲವನ್ನೂ ತಾವೇ ಮಾಡಿಕೊಳ್ಳುತ್ತಿದ್ದರು. ಮಠಕ್ಕೆ ಬಂದವರಿಗೆ ತಾಯಿಯ ವಾತ್ಸಲ್ಯ ತೋರಿಸುತ್ತಿದ್ದರು. ಬಡವರಿಗೆ ತಾವೇ ಹಣ ಕೊಡುತ್ತಿದ್ದರೇ ಹೊರತು, ಯಾರಿಂದಲೂ ಏನನ್ನೂ ಬಯಸುತ್ತಿರಲಿಲ್ಲ. ಸದ್ಯೋಜಾತ ಮಠ ಶಿವಾಚಾರ್ಯರ ತವರಾಗಿತ್ತು ಎಂದು ಹೇಳಿದರು.

ಸದ್ಯೋಜಾತ ಮಠದ ಕಟ್ಟಡ ನಿರ್ಮಾಣಕ್ಕೆ ಹಣ ಬೇಕಿತ್ತು. ನಾವೆಲ್ಲಾ ಸೇರಿ ಒಂದಿಷ್ಟು ಹಣ ಜೋಡಿಸಿದ್ದೆವು. ಶ್ರೀಗಳು ಅಮೆರಿಕಾಕ್ಕೆ ಹೊರಟಿದ್ದರು. ಆಗ ನಾವು ಒಂದು ರಶೀದಿ ಪುಸ್ತಕ ಮುದ್ರಿಸಿ, ಅಲ್ಲಿನ ಭಕ್ತರಿಂದ ಹಣ ಸ್ವೀಕರಿಸುವಂತೆ ಕೋರಿಕೊಂಡೆವು. ಶ್ರೀಗಳು ಮರಳಿ ಬಂದಾಗ ನಾವೆಲ್ಲಾ ಏನಾಯಿತು ಎಂದಾಗ, ರಶೀದಿ ಪುಸ್ತಕವನ್ನು ಅವರು ತೆಗೆದುಕೊಂಡೇ ಹೋಗಿರಲಿಲ್ಲ.

ಮಠದ ಕಟ್ಟಡಕ್ಕೆ ಅಲ್ಲಿನ ಭಕ್ತರಿಂದ ಹಣ ಕೇಳುವುದು ಸರಿಯಲ್ಲ ಎಂದು ಹೇಳಿದರು. ಅಲ್ಲದೇ ಕಟ್ಟಡ ನಿರ್ಮಾಣಕ್ಕೆ ಯಾರಿಗೂ ಒತ್ತಾಯ ಮಾಡಲಿಲ್ಲ ಎಂದು ಬಿ.ಸಿ. ಉಮಾಪತಿಯವರು ನೆನಪಿಸಿಕೊಂಡರು.

ವೀರಶೈವ ಲಿಂಗಾಯತ ಧರ್ಮದ ಆಚರಣೆಗಳು ವೈಜ್ಞಾನಿಕವಾಗಿವೆ. ವಿಭೂತಿ, ಗಂಧ, ಕುಂಕುಮ ಧಾರಣೆ, ಲಿಂಗಪೂಜೆ ಇವೆಲ್ಲವಕ್ಕೂ ವೈಜ್ಞಾನಿಕ ಕಾರಣಗಳಿವೆ. ಆದರೆ ಜನತೆಗೆ ಸರಿಯಾದ ಅರಿವಿಲ್ಲ. ತಿಳಿದವರು ಆಚರಿಸುತ್ತಿಲ್ಲ. ಈ ಹಿನ್ನೆಲೆಯಲ್ಲಿ ಜನರು ಧಾರ್ಮಿಕ ಆಚರಣೆಗಳಿಂದ ದೂರ ಸರಿಯುತ್ತಿದ್ದಾರೆ ಎಂದು ಹೇಳಿದರು.

ಇಂದಿನ ಯುವ ಜನತೆ ದುಶ್ಚಟಗಳಿಗೆ ಬಲಿಯಾಗುತ್ತಿದ್ದಾರೆ. ಮೊಬೈಲ್, ಟಿವಿ ನೋಡುವ ಅಭ್ಯಾಸ ಹೆಚ್ಚಾಗಿದೆ. ಮನೆಗಳಲ್ಲಿ ಹಿರಿಯರು ಧರ್ಮಾಚರಣೆ ಮಾಡಿದರೆ ಮಕ್ಕಳೂ ಅನುಸರಿಸುತ್ತಾರೆ. ಶ್ರೀಗಳ ಮನದಾಸೆಯಂತೆ ಜನರು ಅವರ ಆಚಾರ-ವಿಚಾರ ಪಾಲಿಸಿದರೆ ಈ ಸಂಸ್ಮರಣೋತ್ಸವ ಸಾರ್ಥಕವಾಗುತ್ತದೆ ಎಂದು ಉಮಾಪತಿ ಹೇಳಿದರು.

ರಟ್ಟಿಹಳ್ಳಿ ಕಬ್ಬಿಣಕಂತಿ ಮಠದ ಶ್ರೀ ಶಿವಲಿಂಗ ಶಿವಾಚಾರ್ಯ ಮಹಾಸ್ವಾಮೀಜಿ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು.

ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರೂ, ಜನಪದ ಚಿಂತಕರೂ ಆದ ಜನಪದಶ್ರೀ ಡಾ.ಅಪ್ಪಗೆರೆ ತಿಮ್ಮರಾಜು 'ಜನಪದ ಸಾಹಿತ್ಯದಲ್ಲಿ ಬದುಕಿನ ಮೌಲ್ಯಗಳು' ಕುರಿತು ಉಪನ್ಯಾಸ ನೀಡಿದರು.

ಕೈಗಾರಿಕೋದ್ಯಮಿ ಐ.ಪಿ. ಮಲ್ಲೋಕಾರಾಧ್ಯ, ಸ್ವಾಮಿ ತ್ರಿಭುವಾನಂದ ಉಪಸ್ಥಿತರಿದ್ದರು. ಶ್ರೀಮತಿ ವಿಜಯ ಹಿರೇಮಠ ಪ್ರಾರ್ಥಿಸಿದರು. ಭ್ರಮರಾಂಭಿಕಾ ದೇವಿ ನಿರೂಪಿಸಿದರು.

# ಅಂತರ್ಜಲ ಹೆಚ್ಚಿಸಲು ಕೆರೆ ಹೂಳೆತ್ತುವುದು ಅತ್ಯವಶ್ಯಕ



ಹರಪನಹಳ್ಳಿ, ಮಾ. 4 - ಭೂಮಿಯ ಅಂತರ್ಜಲ ಹೆಚ್ಚಿಸಲು ಕೆರೆ ಹೂಳೆತ್ತುವುದು ಅತ್ಯವಶ್ಯಕವಾಗಿದೆ ಎಂದು ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸಂಸ್ಥೆಯ ಯೋಜನಾಧಿಕಾರಿ ಬಾಬು ಹೇಳಿದರು.

ತಾಲ್ಲೂಕಿನ ಚಟ್ನಿಹಳ್ಳಿ ಗ್ರಾಮ ಪಂಚಾಯತಿ ವ್ಯಾಪ್ತಿಯ ಕೆಂಚಾಪುರ ಗ್ರಾಮದಲ್ಲಿ ಶ್ರೀ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸಂಸ್ಥೆಯ ವತಿಯಿಂದ ಕೆರೆ ಹೂಳು ತೆಗೆಯುವ ಕೆಲಸಕ್ಕೆ ಚಾಲನೆ ನೀಡಿ ಮಾತನಾಡಿದರು.

ಕೆರೆಗಳಿಗೆ ನೀರು ಹರಿದರೆ ರೈತರು ಬದುಕುವಂತೆ ಆಗುತ್ತದೆ. ಕೆರೆಗಳನ್ನು ಅಭಿವೃದ್ಧಿ ಪಡಿಸುವ ನಿಟ್ಟಿನಲ್ಲಿ ಹೂಳೆತ್ತುವ ಕಾಮಗಾರಿ ನಡೆದರೆ, ನೀರು ಸಂಗ್ರಹಣೆಗೆ ಅನುಕೂಲ ಆಗುತ್ತದೆ ಎಂದರು.

ಈ ಸಂದರ್ಭದಲ್ಲಿ ರೈತ ಮುಖಂಡ ಲಿಂಗರಾಜ ಫಣಿಯಾಪುರ ಮಾತನಾಡಿ ಇಂತಹ ಸಣ್ಣ ಸಣ್ಣ ಗ್ರಾಮಗಳನ್ನು ಗುರುತಿಸಿ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿಯ ಸಂಸ್ಥೆಯವರ ಕೆಲಸ ನಿಜಕ್ಕೂ ಶ್ಲಾಘನೀಯ ಹಾಗೂ ಸರ್ಕಾರ ಬಂದು ಎರಡು ವರ್ಷ ಆಗುತ್ತಾ ಬಂದಿದೆ. ಎಲ್ಲೂ ಅಭಿವೃದ್ಧಿ ಕಾರ್ಯಗಳು ನಡೆಯು ತ್ತಿಲ್ಲ, ಇಂತಹ ಕೆಲಸಗಳಿಂದ ಗ್ರಾಮ ಗಳ ಜಾನುವಾರುಗಳಿಗೆ, ರೈತರ ಪಂಪಸೆಟ್‌ಗಳಿಗೆ, ನೀರು ಸಂಗ್ರಹಣವಾಗುವುದು, ರೈತರಿಗೆ ಆನುಕೂಲವಾಗುತ್ತದೆ ಮತ್ತು ಇಂತಹ ಹೂಳು ಎತ್ತುವ ಕೆಲಸಗಳಿಗೆ ಸರ್ಕಾರಗಳು ಎಚ್ಚೆತ್ತು ಅನುದಾನ ಹಾಕಬೇಕೆಂದು ಒತ್ತಾಯಿಸಿದರು.

**ಹರಪನಹಳ್ಳಿ**

ಈ ಸಂದರ್ಭದಲ್ಲಿ ಗ್ರಾ.ಪಂ. ಅಧ್ಯಕ್ಷರಾದ ಆಶಾ, ಸಂಸ್ಥೆಯ ವಲಯಾಧಿಕಾರಿಗಳಾದ ಮಮತ, ಸೇವಾ ಪ್ರತಿನಿಧಿ ಅಶೋಕ, ಗ್ರಾಮ ಪಂಚಾಯಿತಿ ಸದಸ್ಯರಾದ ರೇಣುಕಮ್ಮ ಫಣಿಯಾಪುರ, ಪರಮೇಶಪ್ಪ, ಮಂಜಮ್ಮ ಕಲ್ಲಹಳ್ಳಿ ಸುರೇಶ್, ಕೆರೆ ಸಮಿತಿಯ ರೇವಣ್ಣ, ಚಂದ್ರಪ್ಪ, ಬಸವರಾಜ, ಎನ್.ಆರ್. ದ್ಯಾಮಣ್ಣ, ಕೆ.ಹೆಚ್. ಏಕಾಂತಪ್ಪ, ಬಣಕಾರ ಬಸವರಾಜ, ಗಿರೀಶ್, ಪ್ರಭು ಸೇರಿದಂತೆ ಇತರರು ಉಪಸ್ಥಿತರಿದ್ದರು.

## ಪಾಕ್ ಸೈನಿಕ ನೆಲೆ ಮೇಲೆ ಉಗ್ರವಾದಿ ದಾಳಿ, 9 ಜನರ ಸಾವು

ಪೇಷಾವರ, ಮಾ. 4- ಪಾಕಿಸ್ತಾನದ ವಾಯುವ್ಯ ಭಾಗದಲ್ಲಿರುವ ಬನ್ನು ಸೈನಿಕ ನೆಲೆ ಮೇಲೆ ಉಗ್ರವಾದಿ ದಾಳಿ ನಡೆಸಲಾಗಿದ್ದು, 9 ಜನ ಸಾವನ್ನಪ್ಪಿದ್ದಾರೆ ಹಾಗೂ 16 ಜನ ಗಾಯಗೊಂಡಿದ್ದಾರೆ. ದಾಳಿ ನಡೆಸಿದ ಆರು ಉಗ್ರರನ್ನು ಹೊಡೆದುರುಳಿಸಿರುವುದಾಗಿ ಸೈನ್ಯ ತಿಳಿಸಿದೆ. ಬನ್ನು ಕಂಟೋನ್‌ಮೆಂಟ್ ಮೇಲೆ ಸಂಜೆ ವೇಳೆ ಉಗ್ರವಾದಿ ದಾಳಿ ನಡೆಸಲಾಗಿತ್ತು. ಜೈಶ್ ಅಲ್ ಫುರ್ಸನ್ ಎಂಬ ಉಗ್ರವಾದಿ ಸಂಘಟನೆ ಈ ದಾಳಿಯಲ್ಲಿ ಭಾಗಿಯಾಗಿದೆ.

## ಕಡ್ಲೇಬಾಳು : ಶ್ರೀ ನಾಗ ಸುಬ್ರಹ್ಮಣ್ಯೇಶ್ವರ ದೇವಾಲಯದ ವಾರ್ಷಿಕೋತ್ಸವ



ದಾವಣಗೆರೆ ತಾಲ್ಲೂಕು ಶ್ರೀ ಕ್ಷೇತ್ರ ಕಡ್ಲೇಬಾಳು ಗ್ರಾಮದ ಶ್ರೀ ನಾಗ ಸುಬ್ರಹ್ಮಣ್ಯೇಶ್ವರ ದೇವಾಲಯದ ವಾರ್ಷಿಕೋತ್ಸವ ಕಾರ್ಯಕ್ರಮವು ಇಂದು ನಡೆಯಲಿದೆ.

ಇಂದು ಪ್ರಾತಃ ಕಾಲ ಶ್ರೀ ನಾಗ ಸುಬ್ರಹ್ಮಣ್ಯೇಶ್ವರ ಸ್ವಾಮಿಗೆ ಅಭಿಷೇಕ, ವಿಶೇಷ ಅಲಂಕಾರ, ಹೋಮ, ಸಾಮೂಹಿಕ ಆಶ್ಲೇಷ ಬಲಿಪೂಜೆ, ರಥೋತ್ಸವ, ತೀರ್ಥ ಪ್ರಸಾದ ವಿನಿಯೋಗ, ಅನ್ನ ಸಂತರ್ಪಣೆ ಕಾರ್ಯಕ್ರಮಗಳು ಏರ್ಪಾಡಾಗಿವೆ.

## ಲಾಭದ ಸಂಪೂರ್ಣ ಅಧಿಕಾರ ಇರುವುದಿಲ್ಲ

**(1ನೇ ಪುಟದಿಂದ)** ಉತ್ತರಾಧಿಕಾರಿಗಳು ವಿಮೆ ಹಣದ ಮೇಲೆ ಅಧಿಕಾರ ಕೇಳದೇ ಇದ್ದಾಗ ಮಾತ್ರ ನಾಮಿನಿಗಳು ವಿಮಾ ಹಣ ಪಡೆಯಬಹುದು ಎಂದು ನ್ಯಾಯಮೂರ್ತಿ ಅನಂತ ರಾಮನಾಥ ಹೆಗಡೆ ತೀರ್ಪು ನೀಡಿದ್ದಾರೆ.

ವ್ಯಕ್ತಿಯೊಬ್ಬರು ತಮ್ಮ ಎರಡು ವಿಮಾ ಪಾಲಿಸಿಗಳಿಗೆ ತಾಯಿಯನ್ನು ನಾಮಿನಿ ಮಾಡಿದ್ದರು. ನಂತರ ಅವರಿಗೆ ಮದುವೆಯಾಗಿ ಮಗುವೊಂದು ಜನಿಸಿತು. ಆದರೆ ನಾಮಿನಿಯಲ್ಲಿ ಬದಲಾವಣೆ ಮಾಡಿರಲಿಲ್ಲ. 2019ರಲ್ಲಿ ವ್ಯಕ್ತಿಯ ನಿಧನದ ನಂತರ ವಿಮಾ ಹಣಕ್ಕೆ ಸಂಬಂಧಿಸಿದಂತೆ ತಾಯಿ ಹಾಗೂ ಪತ್ನಿ ನಡುವೆ ವಿವಾದ ಉಂಟಾಗಿತ್ತು.

ವಿಮಾ ಹಣವನ್ನು ತಾಯಿ, ಪತ್ನಿ ಹಾಗೂ ಮಗುವಿನ ನಡುವೆ ಸಮನಾಗಿ ಹಂಚಬೇಕು ಎಂದು ವಿಚಾರಣಾ ನ್ಯಾಯಾಲಯ ತೀರ್ಪು ನೀಡಿತ್ತು. ತಾಯಿ ಈ ತೀರ್ಪನ್ನು ಪ್ರಶ್ನಿಸಿ ಹೈಕೋರ್ಟ್ ಮೊರೆ ಹೋಗಿದ್ದರು. ಆದರೆ ವಿಚಾರಣಾ ನ್ಯಾಯಾಲಯದ ತೀರ್ಪನ್ನು ಹೈಕೋರ್ಟ್ ಎತ್ತಿ ಹಿಡಿದಿದೆ. ನಾಮಿನಿಗಳು ಉತ್ತರಾಧಿತ್ವ ಕಾಯ್ದೆಗಳನ್ನು ಮೀರಲಾಗದು ಎಂದು ಹೈಕೋರ್ಟ್ ತಿಳಿಸಿದೆ .

ಕಂಪನಿಗಳ ಷೇರುಗಳ ಹಂಚಿಕೆಗೆ ಸಂಬಂಧಿಸಿದಂತೆ ಶಕ್ತಿ ಎಜ್ಞಾನಿ ಹಾಗೂ ಜಯಾನಂದ ಜಯಂತ್ ಸಲಗೊಂಕಾ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ನೀಡಿರುವ ತೀರ್ಪನ್ನು ಹೈಕೋರ್ಟ್ ಉಲ್ಲೇಖಿಸಿದೆ. ಈ ತೀರ್ಪಿನ ಪ್ರಕಾರ ನಾಮಿನಿಗಳು ಉತ್ತರಾಧಿತ್ವ ಕಾಯ್ದೆಗಳನ್ನು ಮೀರುವಂತಿಲ್ಲ.

ವಿಮಾ ಕಾಯ್ದೆಯ ಮೂಲಕ ಉತ್ತರಾಧಿಕಾರಕ್ಕೆ ಸಂಬಂಧಿಸಿದಂತೆ ಸಮಾನಾಂತರ ವ್ಯವಸ್ಥೆಯ ರೂಪಿಸಲು ಸಂಸತ್ತು ಎಂದು ಉದ್ದೇಶಿಸಿರಲಿಲ್ಲ. ಉತ್ತರಾಧಿತ್ವ ಕಾಯ್ದೆಗಳನ್ನು ಕಡೆಗಣಿಸಿದರೆ ಕಾನೂನಿನಲ್ಲಿ ಗೊಂದಲ ಉಂಟಾಗುತ್ತದೆ ಹಾಗೂ ದುರ್ಬಳಕೆಗೆ ಅವಕಾಶ ಮಾಡಿಕೊಟ್ಟಂತಾಗುತ್ತದೆ ಎಂದು ನ್ಯಾಯಮೂರ್ತಿ ಹೆಗಡೆ ಹೇಳಿದ್ದಾರೆ.

ಫಲಾನುಭವಿ ನಾಮಿನಿ ಹಾಗೂ ಸಂಗ್ರಾಹಕ ನಾಮಿನಿಗಳ ನಡುವೆ ವ್ಯತ್ಯಾಸ ಮಾಡಬೇಕು. ಫಲಾನುಭವಿ ನಾಮಿನಿ ತನ್ನ ಪಾಲು ಪಡೆಯಲು ಅವಕಾಶ ಇರಬೇಕು. ಸಂಗ್ರಾಹಕ ನಾಮಿನಿ ಕೇವಲ ಪಾಲುಗಾರಿಕೆಯನ್ನು ಕಾನೂನು ಬದ್ಧ ಉತ್ತರಾಧಿಕಾರಿಗಳಿಗೆ ಹಂಚಬೇಕು ಎಂದು ಕಾನೂನು ಆಯೋಗ ಈ ಹಿಂದೆ ಶಿಫಾರಸ್ಸು ಮಾಡಿತ್ತು. ಆದರೆ ಸಂಸತ್ತು ಈ ಸಲಹೆಗಳನ್ನು ಕಾಯ್ದೆ ರೂಪದಲ್ಲಿ ಜಾರಿಗೆ ತಂದಿಲ್ಲ ಎಂದು ಹೈಕೋರ್ಟ್ ಉಲ್ಲೇಖಿಸಿದೆ. ಅಲ್ಲದೇ ಕಾನೂನುಗಳನ್ನು ರಚಿಸುವಾಗ ಅವು ಸರಳ ಸ್ಪಷ್ಟ ಹಾಗೂ ಜನಸಾಮಾನ್ಯರಿಗೆ ಅರ್ಥವಾಗುವಂತೆ ಇರಬೇಕು ಎಂದು ಹೈಕೋರ್ಟ್ ಟಿಪ್ಪಣಿ ಮಾಡಿದೆ.

ಕಾನೂನುಗಳು ಗೋಜಲಿನಿಂದ ಕೂಡಿರಬಾರದು. ಕೇವಲ ಕಾನೂನು ವಲಯದವರಿಗೆ ಅಷ್ಟೇ ತಿಳಿಯುವಂತೆ ಇರಬಾರದು. ಸಂಕ್ಷಿಪ್ತ ಹಾಗೂ ಸ್ಪಷ್ಟ ಸಾಲುಗಳಲ್ಲಿ ಕಾನೂನುಗಳ ಇರಬೇಕು ಎಂದು ಹೈಕೋರ್ಟ್ ಹೇಳಿದೆ.

2018ರಲ್ಲಿ ವಿಮಾ ಕಾಯ್ದೆಯ ಸೆಕ್ಷನ್ 39ಕ್ಕೆ ತಿದ್ದುಪಡಿ ತಂದ ನಂತರ ವ್ಯಾಖ್ಯಾನದಲ್ಲಿ ಗೊಂದಲ ಉಂಟಾಗಿದೆ ಎಂದು ನ್ಯಾಯಮೂರ್ತಿ ಹೆಗಡೆ ಟೀಕಿಸಿದ್ದಾರೆ.

## 111ನೇ ಪುಟ್ಟರಾಜ ಜಯಂತ್ಯುತ್ಸವ



ದಾವಣಗೆರೆ, ಮಾ.4- ಬಾಡಾ ಕ್ರಾಸ್ ಬಳಿ ಇರುವ ಶ್ರೀ ವೀರೇಶ್ವರ ಪುಣ್ಯಾಶ್ರಮದಲ್ಲಿ ಸೋಮವಾರ ಡಾ. ಪಂಡಿತ ಪುಟ್ಟರಾಜ ಗವಾಯಿಗಳ 111ನೇ ಜಯಂತ್ಯುತ್ಸವ ನೆರವೇರಿತು.

ಸೌಮ್ಯ ಸತೀಶ್ ಅವರ ಅಧ್ಯಕ್ಷತೆಯಲ್ಲಿ ಕಾರ್ಯಕ್ರಮ ನಡೆದಿದ್ದು, ಮಕ್ಕಳಿಗೆ ಗಾಯನ ಸ್ಪರ್ಧೆ ಏರ್ಪಡಿಸಿ, ವಿಜೇತರಿಗೆ ಬಹುಮಾನ ವಿತರಿಸಲಾಯಿತು.

ಈ ವೇಳೆ ಮಮತಾ ನಾಗರಾಜ್, ಶಾಂತ ಶಿವಶಂಕರ್, ದೀಪಾ ಕಿರಣ್, ಸುಧಾ ಮಲ್ಲಪ್ಪ, ನಿವೇದಿತಾ, ಶಶಿಕಲಾ, ಸೌಮ್ಯ ಶಿವಕುಮಾರ್, ಸುರೇಖ, ಲತಾ, ಕವಿತಾ ಇತರರು ಇದ್ದರು.

# ವಿದ್ಯಾರ್ಥಿಗಳೊಂದಿಗೆ ಸಂಸದರ ಸಂವಾದ



ದಾವಣಗೆರೆ, ಮಾ. 4- ನಗರದ ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜಿನಲ್ಲಿ ಕಟ್ಟಡ ನಿರ್ಮಾಣ ಹಾಗೂ ಮೂಲಸೌಕರ್ಯ ನವೀಕರಣಕ್ಕೆ ಸಂಬಂಧಿಸಿದಂತೆ ರಾಜ್ಯ ಸರ್ಕಾರದಿಂದ ಸಾಮಾನ್ಯ ಯೋಜನೆ ಅಡಿಯಲ್ಲಿ ಬಿಡುಗಡೆಯಾದ ಒಟ್ಟು 1.5 ಕೋಟಿ ರೂ ಮೊತ್ತದ ಕಾಮಗಾರಿಗೆ ಸಂಸದರಾದ ಡಾ.ಪ್ರಭಾ ಮಲ್ಲಿಕಾರ್ಜುನ್ ಅವರು ಇಂದು ಭೂಮಿ ಪೂಜೆ ನೆರವೇರಿಸಿದರು.

ಕಾರ್ಯಕ್ರಮಕ್ಕೂ ಮುನ್ನ ವಿದ್ಯಾರ್ಥಿನಿಯರೊಂದಿಗೆ ಸಂವಾದ ನಡೆಸಿದ ಸಂಸದರು ವಿದ್ಯಾರ್ಥಿನಿಯರ ಪರೀಕ್ಷಾ ತಯಾರಿ ಹಾಗೂ ಅವರ ಅಭಿರುಚಿಗಳು ಹಾಗೂ ಕಾರ್ಯಕ್ರಮದ ಮಾಹಿತಿ ಹೀಗೆ ವಿವಿಧ ಪ್ರಶ್ನೆಗಳನ್ನು ಹಾಕಿದಾಗ ವಿದ್ಯಾರ್ಥಿಗಳು ಸಮರ್ಪಕ ಉತ್ತರ ನೀಡಿದರು ಹಾಗೂ ತಮ್ಮ ಆಸಕ್ತಿ, ಅಭಿರುಚಿಯ ಬಗ್ಗೆ ಅನಿಸಿಕೆ ಹಂಚಿಕೊಂಡರು.

ನಂತರ ಮಾತನಾಡಿದ ಸಂಸದರು ಎಲ್ಲರೂ ಸರ್ಕಾರಿ ಕಾಲೇಜಿಗೆ ಉತ್ತಮ ಫಲಿತಾಂಶ ತರಬೇಕೆಂದು ಸಲಹೆ ನೀಡಿದರು. ಜೊತೆಗೆ ಐಎಎಸ್ ಹಾಗೂ ಕೆಎಎಸ್ ಪರೀಕ್ಷೆ ತೆಗೆದುಕೊಳ್ಳಲು ಇಚ್ಚಿಸುವ ವಿದ್ಯಾರ್ಥಿಗಳಿಗೆ ಎಸ್ ಎಸ್ ಕೇರ್ ಟ್ರಸ್ಟ್ ಹಾಗೂ ಜಿಲ್ಲಾಡಳಿತದ ಸಹಯೋಗದೊಂದಿಗೆ ಮುಂದಿನ ದಿನಗಳಲ್ಲಿ ತರಬೇತಿ ನೀಡುವ ಅವಕಾಶ ಕಲ್ಪಿಸಲಾಗಿದೆ.

ಅತ್ಯುತ್ತಮ ಅಂಕ ಪಡೆದ ವಿದ್ಯಾರ್ಥಿಗಳು ಹಾಗೂ ಆಸಕ್ತರು ಇಂತಹ ಅವಕಾಶ ಪಡೆದುಕೊಂಡು ದಾವಣಗೆರೆ ಜಿಲ್ಲೆಗೆ ಕೀರ್ತಿ ತರಬೇಕೆಂದು ಅವರು ಕರೆ ನೀಡಿದರು.

ಈ ಸಂದರ್ಭದಲ್ಲಿ ಕಾಲೇಜಿನ ಪ್ರಾಂಶುಪಾಲರಾದ ಮಂಜುನಾಥ್, ಕಾವ್ಯಶ್ರೀ, ಕಾಲೇಜು ಅಭಿವೃದ್ಧಿ ಸಮಿತಿಯ ಸದಸ್ಯರಾದ ರಂಗನಾಥ್ ಸ್ವಾಮಿ, ಕೆ.ಎಸ್. ಈಶ್ವರಪ್ಪ, ಕೆ.ಶಿವಪ್ಪ, ಲೋಹಿತ್, ಎಂ.ಎಸ್. ಮಲ್ಲಿಕಾರ್ಜುನ್, ಆರ್. ಜಿ. ರುದ್ರೇಶ್, ಪ್ರಭುದೇವ್, ಅನಿಲ್ ಗೌಡ ಮತ್ತಿತರರಿದ್ದರು.

## ಚಿತ್ರದುರ್ಗ : ಸಿಬಾರದ ದನಗಳ ಜಾತ್ರೆಯಲ್ಲಿ ರಾಸುಗಳ ಸೇರುವಿಕೆ



ಚಿತ್ರದುರ್ಗ, ಮಾ. 4 - ಇಲ್ಲಿನ ಶ್ರೀ ಜಗದ್ಗುರು ಮುರುಘ ರಾಜೇಂದ್ರ ಬೃಹನ್ಮಠದ ವತಿಯಿಂದ ರಾಷ್ಟ್ರೀಯ ಹೆದ್ದಾರಿ 48ರ ಸಿಬಾರ, ಗುತ್ತಿನಾಡಿನ ಶ್ರೀಮಠದ ಜಾಗದಲ್ಲಿ ಕಳೆದ 69 ವರ್ಷಗಳಿಂದ ಹಿಂದಿನ ಪೀಠಾಧಿಪತಿಗಳಾಗಿದ್ದ ಶ್ರೀ ಗುರುಪಾದ ಮುರುಘರಾಜೇಂದ್ರ ಮಹಾಸ್ವಾಮಿಗಳ ಹೆಸರಿನಲ್ಲಿ, ಶ್ರೀ ಮೈಲಾರಲಿಂಗ ಸ್ವಾಮಿಗಳ ಸ್ಮಾರಕವಾಗಿ ನಡೆಯುವ ಭಾರೀ ದನಗಳ ಜಾತ್ರೆಗೆ ಈ ಬಾರಿ ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳ 150ನೇ ವರ್ಷದ ಜಯಂತ್ಯೋತ್ಸವವೂ ಬಂದಿರುವ ಕಾರಣ ಅವರ ಹೆಸರಿನಲ್ಲಿ 70ನೇ ಜಾತ್ರೆಯು ಕಳೆದ ವಾರ ಆರಂಭವಾಗಿದೆ.

ಇದೀಗ ನಿಧಾನವಾಗಿ ಜಿಲ್ಲೆಯ ಮತ್ತು ಹೊರ ಜಿಲ್ಲೆಯ ಕೃಷಿಕರು, ವ್ಯಾಪಾರಸ್ಥರು ತಮ್ಮ ತಮ್ಮ ಹಸುಗಳನ್ನು ಹೊಡೆದುಕೊಂಡು ಬಂದು ಜಾತ್ರೆಯ ಆವರಣದಲ್ಲಿ ಸಾಲಾಗಿ ಕಟ್ಟುತ್ತಿದ್ದಾರೆ. ಇನ್ನೂ ಮೂರು ನಾಲ್ಕು ದಿನಗಳಲ್ಲಿ ಬೇರೆ ಬೇರೆ ಕಡೆಯಿಂದಲೂ ದನಗಳು ಬರುವ ನಿರೀಕ್ಷೆ ಇದೆ ಎಂದು ವ್ಯಾಪಾರಸ್ಥರು, ಕೃಷಿಕರು ಮಾತಾಡಿಕೊಳ್ಳುತ್ತಿದ್ದರು. ಬರುವವರಿಗಾಗಿ ಹಾಗೂ ಹಸುಗಳ ಅನುಕೂಲಕ್ಕಾಗಿ ಸೂಕ್ತ ವ್ಯವಸ್ಥೆಯನ್ನು ಶ್ರೀ ಮಠದ ವತಿಯಿಂದ ನಿರ್ವಹಿಸಲಾಗುತ್ತಿದೆ.

## ವಾಹನಗಳ ಡಿಕ್ಕಿಯಿಂದ ಜಾನುವಾರು ಸಾಗಾಣಿಕೆ ಬೆಳಕಿಗೆ

**ಗೋಶಾಲೆಗಳಿಗೆ ರವಾನೆ**

ದಾವಣಗೆರೆ, ಮಾ.4- ಮಿನಿ ಲಾರಿಯೊಂದರಲ್ಲಿ ಸಾಗಣೆ ಮಾಡಲಾಗುತ್ತಿದ್ದ 19 ಜಾನುವಾರುಗಳನ್ನು ಹಿಂದೂ ಜಾಗರಣ ವೇದಿಕೆ ಕಾರ್ಯಕರ್ತರು ನಗರದಲ್ಲಿ ಸೋಮವಾರ ರಕ್ಷಿಸಿ, ಪೊಲೀಸರಿಗೆ ಒಪ್ಪಿಸಿದರು.

ಚಿತ್ರದುರ್ಗದಿಂದ ದಾವಣಗೆರೆಗೆ ಬಂದ ಮಿನಿ ಲಾರಿಯಲ್ಲಿ 2 ಹಸು, 13 ಕರು, 4 ಎಮ್ಮೆಗಳಿದ್ದವು. ನಗರದ ಎಪಿಎಂಸಿ ಫ್ಲೈಓವರ್ ಬಳಿ ಬಂದಾಗ ಆ ವಾಹನ ಮತ್ತು ಬೊಲೆರೋ ನಡುವೆ ಡಿಕ್ಕಿಯಾಗಿದೆ. ಸ್ವಲ್ಪ ಹೊತ್ತು ಅಲ್ಲಿ ಮಾತಿನ ಚಕಮಕಿಯೂ ನಡೆದಿದೆ. ಆಗ ಮಿನಿ ಲಾರಿಯಲ್ಲಿ ಜಾನುವಾರು ಸಾಗಿಸುತ್ತಿರುವುದು ಬೆಳಕಿಗೆ ಬಂದಿದೆ.

ವಿಷಯ ತಿಳಿದ ಹಿಂದೂ ಜಾಗರಣ ವೇದಿಕೆಯ ಕಾರ್ಯಕರ್ತರಾದ ಸತೀಶ ಪೂಜಾರಿ, ಲಿಂಗರಾಜ್ ಇನ್ನಿತರರು ಸ್ಥಳಕ್ಕೆ ಧಾವಿಸಿ, ಜಾನುವಾರುಗಳನ್ನು ವಾಹನದಲ್ಲಿ ತುಂಬಿಕೊಂಡು ಕಸಾಯಿಖಾನೆಗೆ ಸಾಗಿಸಲಾಗುತ್ತಿದೆ ಎಂದು ಪೊಲೀಸರಿಗೆ ದೂರು ನೀಡಿದರು.

ಆರ್‌ಎಂಸಿ ಯಾರ್ಡ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ವಶಪಡಿಸಿಕೊಂಡ ಜಾನುವಾರುಗಳನ್ನು ಹೆಬ್ಬಾಳದ ಗೋಶಾಲೆಗೆ ಕಳಿಸಿಕೊಡಲಾಯಿತು.

## ಕೈದಾಳೆಯಲ್ಲಿ ಇಂದು ನಾಟಕ ಪ್ರದರ್ಶನ

ದಾವಣಗೆರೆ ತಾಲ್ಲೂಕಿನ ಕೈದಾಳೆ ಗ್ರಾಮದ ಕೈದಾಳೆ ಶ್ರೀ ಮಲ್ಲಿಕಾರ್ಜುನ ಸ್ವಾಮಿಯ ಮಹಾ ರಥೋತ್ಸವದ ಅಂಗವಾಗಿ ಇಂದು ಸಂಜೆ 5 ಗಂಟೆಗೆ ದಿಬ್ಬಣ ಕಾರ್ಯಕ್ರಮವಿರುತ್ತದೆ. ರಾತ್ರಿ 9-30ಕ್ಕೆ ಶ್ರೀ ಮಲ್ಲಿಕಾರ್ಜುನ ಸ್ವಾಮಿ ನಾಟ್ಯ ಕಲಾಸಂಘ' ಕೈದಾಳೆ ಇವರಿಂದ ಸಾಮಾಜಿಕ ನಾಟಕ 'ಸಾವು ತಂದ ಸೌಭಾಗ್ಯ' ಅರ್ಥಾತ್ 'ಅರಿಶಿಣ ತಂದ ಆಮಂತ್ರಣ' ಪ್ರದರ್ಶನಗೊಳ್ಳಲಿದೆ.

## ಮಲೇಬೆನ್ನೂರಿನಲ್ಲಿ ಇಂದು ಓಕುಳಿ

ಶ್ರೀ ಬಸವೇಶ್ವರ ದೇವರ ರಥೋತ್ಸವದ ಅಂಗವಾಗಿ ಇಂದು ಬೆಳಿಗ್ಗೆ 10 ಗಂಟೆಯಿಂದ ಜವಳ, ದಿಂಡು ಉರುಳು ಸೇರಿದಂತೆ ಇತ್ಯಾದಿ ಸೇವೆಗಳು ನಡೆಯಲಿದ್ದು, ರಾತ್ರಿ 8 ಗಂಟೆಗೆ ಓಕುಳಿ ಬಳಿಕ ಎಲ್ಲಾ ದೇವರಗಳನ್ನು ಬೀಳ್ಕೊಡಲಾಗುವುದು.

## ಜಿಗಳಿ : ಬಾಯ್ಲರ್ ಬಿದ್ದು ಸಾವಿಗೀಡಾಗಿದ್ದ ವಿದ್ಯಾರ್ಥಿ ಮನೆಗೆ ಸಂಸದರ ಭೇಟಿ



ಮಲೇಬೆನ್ನೂರು, ಮಾ.4- ದಾವಣಗೆರೆಯ ಶಿವಕುಮಾರ ಸ್ವಾಮಿ ಬಡಾವಣೆಯಲ್ಲಿರುವ ಶ್ರೀ ಮಂಜುನಾಥ ವಸತಿಯುತ ಶಾಲೆಯಲ್ಲಿ ನೀರು ಕಾಯಿಸುವ ಬಾಯ್ಲರ್ ಬಿದ್ದು ಸಾವಿಗೀಡಾಗಿದ್ದ 5ನೇ ತರಗತಿ ವಿದ್ಯಾರ್ಥಿ ಜಿಗಳಿಯ ಕೆ.ಆರ್.ರಂಗಸ್ವಾಮಿ ಅವರ ಮನೆಗೆ ಸಂಸದೆ ಡಾ. ಪ್ರಭಾಮಲ್ಲಿಕಾರ್ಜುನ್ ಅವರು ಶನಿವಾರ ಭೇಟಿ ನೀಡಿ, ತಂದೆ-ತಾಯಿಗೆ ಸಾಂತ್ವನ ಹೇಳಿದರು.

ಘಟನೆಯ ಸಂಪೂರ್ಣ ಮಾಹಿತಿ ಪಡೆದ ಸಂಸದರು, ಜಿಲ್ಲಾಧಿಕಾರಿಗಳಿಗೆ ಫೋನ್ ಮಾಡಿ, ತಪ್ಪಿತಸ್ಥರ ಮೇಲೆ ಕಾನೂನು ಕ್ರಮ ಕೈಗೊಳ್ಳಬೇಕು, ಇಂತಹ ಘಟನೆಗಳು ಮರುಕಳಿಸಿದಂತೆ ಎಲ್ಲಾ ಹಾಸ್ಟೆಲ್‌ಗಳಿಗೆ ಸೂಚನೆ ನೀಡಬೇಕೆಂದರು. ಅಲ್ಲದೇ, ಜಿಲ್ಲಾಡಳಿತದಿಂದ ಮೃತ ಬಾಲಕನ ಕುಟುಂಬಕ್ಕೆ ನೆರವು ನೀಡುವಂತೆಯೂ ಪ್ರಭಾ ಮಲ್ಲಿಕಾರ್ಜುನ್ ಸೂಚಿಸಿ, ಮೃತ ವಿದ್ಯಾರ್ಥಿ ರಂಗಸ್ವಾಮಿಯ ಅಕ್ಕನ ವಿದ್ಯಾಭ್ಯಾಸಕ್ಕೆ ಅಗತ್ಯ ನೆರವು ನೀಡುವ ಭರವಸೆ ನೀಡಿದರು.

ಮೃತ ವಿದ್ಯಾರ್ಥಿ ರಂಗಸ್ವಾಮಿಯ ತಂದೆ ಕೆ.ಆರ್.ರಾಮಪ್ಪ, ದೊಡ್ಡಪ್ಪ ಕೆ.ಆರ್.ರಂಗಪ್ಪ, ಗ್ರಾಮದ ಮುಖಂಡ ಜಿ.ಆನಂದಪ್ಪ, ಕುಂಬಳೂರು ವಿರೂಪಾಕ್ಷಪ್ಪ, ಹನಗವಾಣಿ ವಿರೂಪಾಕ್ಷಪ್ಪ, ಹನಗವಾಡಿ ಕುಮಾರ್, ಕೊಮಾರನಹಳ್ಳಿಯ ಜಿ.ಮಂಜುನಾಥ್ ಪಟೇಲ್, ಕುಂಬಳೂರಿನ ಎಂ. ಹೆಚ್.ಮಹೇಂದ್ರ, ಮಲೇಬೆನ್ನೂರಿನ ಪಿ.ಹೆಚ್. ಶಿವಕುಮಾರ್, ಜಿಗಳಿ ಗ್ರಾ.ಪಂ. ಸದಸ್ಯ ಕೆ.ಜಿ. ಬಸವರಾಜ್ ಮತ್ತಿತರರು ಈ ವೇಳೆ ಹಾಜರಿದ್ದರು.

**ಮೈಸೂರ್ ಕಿರ್ಲೋಸ್ಕರ್ ಕಂಪನಿ ನಿವೃತ್ತ ನೌಕರರಾದ**

## ಬಿ. ಚಂದ್ರಚಾರ್ ನಿಧನ



ದಾವಣಗೆರೆ ಜಿಲ್ಲೆ, ತಾಲ್ಲೂಕು, ದೊಡ್ಡಬಾತಿ ಚನ್ನಪ್ಪಚಾರ್ ಇವರ 3ನೇ ಮಗನಾದ

**ಬಿ. ಚಂದ್ರಾಚಾರ್**

(ಮೈಸೂರು ಕಿರ್ಲೋಸ್ಕರ್ ಕಂಪನಿ ನಿವೃತ್ತ ನೌಕರರು)

ಇವರು ದಿನಾಂಕ : 4.03.2025 ಮಧ್ಯಾಹ್ನ 2.15ಕ್ಕೆ ನಿಧನರಾದರು. ಮೃತರಿಗೆ 80 ವರ್ಷ ವಯಸ್ಸಾಗಿತ್ತು. ಇಬ್ಬರು ಪುತ್ರರು, ಇಬ್ಬರು ಪುತ್ರಿಯರು, ಪತ್ನಿ ಹಾಗೂ ಸೊಸೆಯಂದಿರು ಮೊಮ್ಮಕ್ಕಳು ಹಾಗೂ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ : 5.03.2025ರ ಬುಧವಾರ ಮಧ್ಯಾಹ್ನ 1 ಗಂಟೆಗೆ ದಾವಣಗೆರೆ ಪಿಬಿ ರೋಡ್ ವೈಕುಂಠಧಾಮದಲ್ಲಿ ನೆರವೇರಿಸಲಾಗುತ್ತದೆ.

ದುಃಖತಪ್ತ ಕುಟುಂಬ ವರ್ಗ : **ಕಾಳಮ್ಮ ಮತ್ತು ಮಕ್ಕಳು**

**ದೊಡ್ಡಬಾತಿ ವಂಶಸ್ಥರು ಹಾಗೂ ಬಂಧು-ಮಿತ್ರರು**

**ಫೋ. : 98454 62464, 99006 38484**

## ನಜೀರ್ ಅಹಮ್ಮದ್ ನಿಧನ



ದಾವಣಗೆರೆ ಜುಬಿಲಿ ಬಾವಿ ರಸ್ತೆ ವಾಸಿ ನಜೀರ್ ಅಹಮ್ಮದ್ ಸಾಬ್ (ನಗರ ಸಭಾ ಮಾಜಿ ಉಪಾಧ್ಯಕ್ಷರು ಹಿರಿಯ ಸ್ವಾತಂತ್ರ್ಯ ಹೋರಾಟಗಾರರಾದ ದಿ. ಎಂ.ಎನ್. ಘನಿಸಾಬ್ ಅವರ ಪುತ್ರ) ಅವರು ದಿನಾಂಕ 4.3.2025ರಂದು ರಾತ್ರಿ 10.15ರ ಸಮಯದಲ್ಲಿ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು-ವರ್ಗವನ್ನು ಅಗಲಿದ್ದಾರೆ, ದಿನಾಂಕ 5.3.2025 ರಂದು ಮಧ್ಯಾಹ್ನ 1.45ಕ್ಕೆ ಪಿ.ಬಿ. ರಸ್ತೆ ಹಳೇ ಖಬರಸ್ಥಾನದಲ್ಲಿ ಅಂತ್ಯಕ್ರಿಯೆ (ದಫನ್ ) ನೆರವೇರಲಿದೆ.

# ವಿಧಾನಸೌಧಕ್ಕೆ ಮೆರಗು ನೀಡಿದ ಐತಿಹಾಸಿಕ ಭಾವಚಿತ್ರಗಳು.!

ಬೆಂಗಳೂರು,ಮಾ.4- ಪಶ್ಚಿಮ ದ್ವಾರದಿಂದ ವಿಧಾನಸಭೆಯ ಸಭಾಂಗಣಕ್ಕೆ ಹೋಗುವ ಇಕ್ಕೆಲಗಳಲ್ಲಿ 1881 ರಿಂದ ಈವರೆಗಿನ ವಿಧಾನಮಂಡಲದ ಐತಿಹಾಸಿಕ ಘಟನೆಗಳನ್ನು ಬಿಂಬಿಸುವ ಭಾವಚಿತ್ರಗಳನ್ನು ಅಳವಡಿಸಿರುವುದು ಆಕರ್ಷಣೆಯಾಗಿದೆ.

ವಿಧಾನಸಭಾಧ್ಯಕ್ಷ ಯು.ಟಿ.ಖಾದರ್, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಇಂದು ಬೆಳಗ್ಗೆ ಐತಿಹಾಸಿಕ ಘಟನೆಗಳ ಭಾವಚಿತ್ರಗಳ ಪ್ರದರ್ಶನ ಉದ್ಘಾಟಿಸಿದರು.

ನಾಡಿನ ಸಂಸದೀಯ ಆಡಳಿತ ವ್ಯವಸ್ಥೆಯ ಐತಿಹಾಸಿಕ ಘಟನೆಗಳ ಉಲ್ಲೇಖ ಕಂಡುಬರುತ್ತಿದ್ದು, ಮೈಸೂರಿನ ಸಾರ್ವಜನಿಕರ ಕಚೇರಿ ಕಟ್ಟಡ, ಹಳೆಯ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ 1881 ರಿಂದ 1923 ರವರೆಗೆ ಪ್ರಜಾಪ್ರತಿನಿಧಿ ಅಧಿವೇಶನಗಳು ನಡೆದಿದ್ದವು.

ಆಗಿನ 10ನೇ ಚಾಮರಾಜ ಒಡೆಯರ್, 1881ರ ಆಗಸ್ಟ್ 25 ರಂದು ಪ್ರಜಾಪ್ರತಿನಿಧಿ ಸಭೆ ಆರಂಭಿಸಿದರು ಹಾಗೂ ರೈತರ ಮತ್ತು ವರ್ತಕರ 144 ಪ್ರತಿನಿಧಿಗಳನ್ನು ಒಳಗೊಂಡ ಅಧಿವೇಶನ ಅಂದಿನ ದಿವಾನರಾಗಿದ್ದ ರಂಗಾಚಾರ್ಯಲು ಅಧ್ಯಕ್ಷತೆಯಲ್ಲಿ 7ನೇ ಅಕ್ಟೋಬರ್ 1881 ರಂದು ನಡೆದ ಭಾವಚಿತ್ರವಿದೆ.

ಮೈಸೂರು ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ್ ಪಟ್ಟಾಭಿಷೇಕ ನಡೆದ ಮೈಸೂರಿನ ಜಗನ್ಮೋಹನ ಅರಮನೆಯಲ್ಲಿ ಪ್ರಜಾಪ್ರತಿನಿಧಿ ಅಧಿವೇಶನಗಳು 1924 ರಿಂದ 1948 ರವರೆಗೆ ಸಮಾವೇಶಗೊಂಡಿವೆ. ಬೆಂಗಳೂರಿನಲ್ಲಿ 1942 ರ ಜೂನ್ 1 ರಂದು ಪ್ರಥಮ ಪ್ರಜಾಪ್ರತಿನಿಧಿ ಅಧಿವೇಶನ ಸರ್. ಕೆ.ಪಿ.ಪುಟ್ಟಣ್ಣಚೆಟ್ಟಿ ಪುರಭವನದಲ್ಲಿ ನಡೆದಿದ್ದು, 1942 ರಿಂದ 1952ರ ಅವಧಿಯಲ್ಲಿ ಪ್ರಜಾಪ್ರತಿನಿಧಿ ಸಭೆಗಳು ಇದೇ ಕಟ್ಟಡದಲ್ಲಿ ನಡೆದಿದ್ದವು.

ಬೆಂಗಳೂರಿನ ಹಳೇ ಪಬ್ಲಿಕ್ ಆಫೀಸ್ ಕಟ್ಟಡದಲ್ಲಿ 1950 ರಿಂದ 1955 ರವರೆಗೆ ಅಧಿವೇಶನಗಳು ನಡೆದಿದ್ದು, ಈ ಕಟ್ಟಡ ಮೈಸೂರು ರಾಜ್ಯದ ಆಡಳಿತ ಕಚೇರಿಯಾಗಿದ್ದು, 1951 ರಿಂದ 1955ರಲ್ಲಿ ಮೈಸೂರು ವಿವಿ ಆಡಳಿತ ಕಚೇರಿಯಾಗಿದ್ದ ಕ್ರಾಫರ್ಡ್‌ಹಾಲ್‌ನಲ್ಲಿ ವಿಧಾನಸಭೆ ಅಧಿವೇಶನಗಳು ನಡೆದಿದ್ದವು.

ಆಗಿನ ಅಠಾರ ಕಚೇರಿಯಲ್ಲಿ 1955ರಿಂದ 1956 ರವರೆಗೆ ವಿಧಾನಸಭಾ ಅಧಿವೇಶನಗಳು ಜರುಗಿದ್ದು, ಈ ಕಟ್ಟಡದಲ್ಲಿ ಸ್ವತಂತ್ರ್ಯ ಮೈಸೂರು ರಾಜ್ಯದ ಪ್ರಥಮ ಸರ್ಕಾರದ ಸಚಿವ ಸಂಪುಟ ಸದಸ್ಯರ ಪ್ರಮಾಣ ವಚನ ಸಮಾರಂಭವೂ ನಡೆದಿದೆ. ರಾಷ್ಟ್ರದ ಪ್ರಥಮ ಪ್ರಧಾನಿ ಜವಾಹರಲಾಲ್ ನೆಹರೂ 1951ರ ಜುಲೈ 13 ರಂದು ವಿಧಾನಸೌಧ ನಿರ್ಮಾಣಕ್ಕೆ ಶಂಕುಸ್ಥಾಪನೆ ನೆರವೇರಿಸಿದರು.

ಮೈಸೂರು ರಾಜ್ಯದ ಪ್ರಮುಖರಾಗಿದ್ದ ಜಯಚಾಮರಾಜ ಒಡೆಯರ್ ಅಂದಿನ ಮುಖ್ಯಮಂತ್ರಿ ಕೆಂಗಲ್ ಹನುಮಂತಯ್ಯ ಮೇಲುಸ್ತುವಾರಿಯಲ್ಲಿ ವಿಧಾನಸೌಧದ ಕಟ್ಟಡ ನಿರ್ಮಾಣವಾಗಿದ್ದು, 1956ರ ಡಿಸೆಂಬರ್ 19ರಿಂದ ವಿಧಾನಸಭೆಯ ಕಾರ್ಯಕಲಾಪಗಳು ಆರಂಭಗೊಂಡ ಚಿತ್ರಗಳಿವೆ.

ವಿಧಾನಸಭೆಯ ಸಭಾಂಗಣದಲ್ಲಿ ಅಂದಿನ ರಾಜ್ಯಪಾಲ ಜಯಚಾಮರಾಜ ಒಡೆಯರ್, ಸದನಗಳ ಸದಸ್ಯರನ್ನುದ್ದೇಶಿಸಿ ಭಾಷಣ ಮಾಡಿದ ಹಾಗೂ ಮುಖ್ಯಮಂತ್ರಿ ಕೆಂಗಲ್ ಹನುಮಂತಯ್ಯ ಕುರಿತ ಎಲ್ಲಾ ಮಾಹಿತಿ ಪ್ರದರ್ಶಿಸುವ ಭಾವಚಿತ್ರಗಳನ್ನು ಅಳವಡಿಸಲಾಗಿದೆ.

ಈ ಸಂದರ್ಭದಲ್ಲಿ ಮಾತನಾಡಿದ ಸ್ಪೀಕರ್ ಯು.ಟಿ.ಖಾದರ್, ವಿಧಾನಸೌಧದಲ್ಲಿ ಸ್ಥಳಾವಕಾಶ ಲಭ್ಯವಿರುವ ಕಡೆಗಳಲ್ಲಿ ಐತಿಹಾಸಿಕ ಭಾವಚಿತ್ರಗಳನ್ನು ಅಳವಡಿಸುವ ಮೂಲಕ ಸಾರ್ವಜನಿಕರಿಗೆ ಅಗತ್ಯ ಮಾಹಿತಿ ನೀಡಲಾಗಿದೆ ಎಂದರು.

## ದಾವಣಗೆರೆ ಹಳೆ ಊರಿನ ಶಿವರಾತ್ರಿ ಸ್ವಾರಸ್ಯಗಳು...

# ಶಂಕ್ರಮ್ಮನ ಶಿವ, ಜಾನಕಮ್ಮನ ವಿಷ್ಣು

ನಮ್ಮ ಬಾಲ್ಯದಲ್ಲಿ ಹಳೆ ಊರಿನ ಅಡಿವೆಯ್ಯನ ಗಲ್ಲಿಯಲ್ಲಿ ಹುಂಡೇಕಾರ್ ಕುಂಬಿ ವೀರಭದ್ರಪ್ಪನವರ ಸಾಲು ಮನೆಗಳಲ್ಲಿ ಬಾಡಿಗೆದಾರರಾಗಿ ವಾಸವಾಗಿದ್ದ ಶಂಕ್ರಮ್ಮ ಮತ್ತು ಜಾನಕಮ್ಮರ ನಡುವೆ ಶಿವ-ವಿಷ್ಣು ಕುರಿತಾಗಿ ಆಗಾಗ ಮಾತಿನ ಸಂಘರ್ಷ ನಡೆಯುತ್ತಿತ್ತು. ಅಕ್ಕ ಪಕ್ಕದ ಮನೆಗಳ ಅವರೀರ್ವರಲ್ಲೂ ಸ್ನೇಹ ಬಾಂಧವ್ಯ ಇತ್ತಾದರೂ ಶಿವ-ವಿಷ್ಣು ವಿಚಾರ ಬಂದಾಗ ಮಾತ್ರ ಅಭಿಪ್ರಾಯ ಭೇದ ಬರುತ್ತಿತ್ತು. ಬಹುಶಃ ಎರೆ ಸೀಮೆ ಕಡೆಯಿಂದ ಬಂದು ನೆಲೆಸಿದ ಶಂಕ್ರಮ್ಮನವರದು ಸಾತ್ವಿಕ ವೀರಶೈವ ಲಿಂಗಾಯತ ಕುಟುಂಬ.



ಉಡುಪಿಯಿಂದ ಬಂದು ನೆಲೆಸಿದ ಜಾನಕಮ್ಮನವರದ್ದು ಸಾತ್ವಿಕವಾದ ವೈಷ್ಣವ ಬ್ರಾಹ್ಮಣ ಕುಟುಂಬ. ಶಂಕ್ರಮ್ಮನವರ ಗಂಡ ಏನು ಉದ್ಯೋಗ ಮಾಡುತ್ತಿದ್ದರೋ ನನಗೆ ತಿಳಿಯದು. ಇವರ ಒಬ್ಬ ಮಗನ ಹೆಸರು ಮಹೇಶ. ಜಾನಕಮ್ಮನವರ ಗಂಡ ರಾಮಚಂದ್ರ ಆಚಾರ್ಯರು ಚಿಕ್ಕ ಕ್ಯಾಂಟೀನ್ ಒಂದನ್ನು ನಡೆಸುತ್ತಿದ್ದರು. ಇವರಿಗೆ ಬಹುಷಃ ರಾಜಗೋಪಾಲ ಆಚಾರ್ಯ 'ರಾಜು' ಎಂದು ಕರೆಯುತ್ತಿದ್ದರು ಓರ್ವ ಮಗ. ರಾಮಚಂದ್ರ ಆಚಾರ್ಯರ ಅಣ್ಣ ಸೀತಾರಾಮಾಚಾರ್ಯರು ಒಳ್ಳೆಯ ಬಾಣಸಿಗರಾಗಿದ್ದರು. ಮಂಡಿಪೇಟೆ ಬಳಿ ಚಾಮರಾಜಪೇಟೆಯಲ್ಲಿರುವ ಕಾಸಲ ಶ್ರೀನಿವಾಸ ಶೆಟ್ಟರ ಶ್ರೀ ಕೋದಂಡರಾಮ ದೇವಸ್ಥಾನದಲ್ಲಿ ಶ್ರೀ ರಾಮನವಮಿ ಹಾಗೂ ಶ್ರೀ ರಾಘವೇಂದ್ರ ಗುರುಗಳ ಆರಾಧನೆ ಅಲ್ಲದೆ ದಾವಣಗೆರೆಯ ಮಾಧ್ವ ಪರಂಪರೆಯ ಬಹುತೇಕ ಕುಟುಂಬಗಳ ವಿಶೇಷ ಸಮಾರಂಭದ ಅಡುಗೆಗಳನ್ನು ಸೀತಾರಾಮಾಚಾರ್ಯರೇ ರುಚಿಯಾಗಿ ಶುಚಿಯಾಗಿ ಮಾಡುತ್ತಿದ್ದರು. ಹಳೆ ಅಂಡರ್ ಬ್ರಿಡ್ಜ್ ಸಮೀಪ ಎಲ್ಲೋ ಅವರ ಮನೆಯಿತ್ತು.

ಜಾನಕಮ್ಮನವರನ್ನು ನಾವೆಲ್ಲ 'ಜಾನಕಿ ಅಕ್ಕ' ಎಂದೇ ಕರೆಯುತ್ತಿದ್ದೆವು. ಅವರ ತವರು ಮನೆಯವರು ಮೂಲತಹ ಉಡುಪಿಯ ಗುಂಡಿಬೈಲು ಪ್ರದೇಶದವರಾಗಿದ್ದು ಉಡುಪಿಯ ಶ್ರೀ ಅನಂತೇಶ್ವರ ದೇವಸ್ಥಾನದ ಅರ್ಚಕ ವೃತ್ತಿಯು ಈ ಐತಾಳರ ಕುಟುಂಬಕ್ಕೂ ಇತ್ತು.

ಸೋಮವಾರ ಹಾಗೂ ಅಮಾವಾಸ್ಯೆಗಳು ಬಂದಾಗ ಶಂಕ್ರಮ್ಮನ ಶಿವ ಭಕ್ತಿಯನ್ನು ಜಾನಕಮ್ಮ ಬೆರಗಿನಿಂದ ನೋಡುತ್ತಿದ್ದರೆ, ಏಕಾದಶಿ ದ್ವಾದಶಿಗಳು ಬಂದಾಗ ಜಾನಕಮ್ಮನ ವಿಷ್ಣು ಭಕ್ತಿಯನ್ನು ಶಂಕರಮ್ಮ ಬೆರಗಿನಿಂದ ನೋಡುತ್ತಿದ್ದರು. ಶಂಕ್ರಮ್ಮ ಜಾನಕಮ್ಮನವರ ನಡುವೆ ಶಿವ ವಿಷ್ಣು ಕುರಿತಾಗಿ ಅಭಿಪ್ರಾಯ ಭೇದಗಳು ಬಂದಾಗ "ಲಕ್ಷ್ಮೀದೇವಮ್ಮ ನೀವೇ ಹೇಳ್ರಿ, ಯಾವುದು ಸರಿ" ಎಂದು ನಮ್ಮ ತಾಯಿಯವರ ಬಳಿ ಕೇಳುತ್ತಿದ್ದರು. ನನ್ನ ಹಿರಿ ಸಹೋದರಿ ಕವಯತ್ರಿ ಹೆಚ್.ಬಿ. ಮುಕ್ತಾರವರ ಬಳಿಯೂ ಜಾನಕಮ್ಮನವರು ಒಮ್ಮೊಮ್ಮೆ ಶಿವ ವಿಷ್ಣು ಭೇದ ಕುರಿತಾಗಿ ಜೋರಾಗೇ ಚರ್ಚಿಸುತ್ತಿದ್ದುದು ಉಂಟು. ನಮ್ಮ ತಾಯಿಯವರಾದರೋ ಪರಮ ವೈಷ್ಣವ ಬ್ರಾಹ್ಮಣ ಕುಟುಂಬದಿಂದ ಬಂದವರು, ನಮ್ಮ ತಂದೆಯವರು ಶೈವ ಬ್ರಾಹ್ಮಣ ಕುಟುಂಬದವರು, ಅನ್ಯೋನ್ಯತೆ ಅಪಾರವಾಗಿತ್ತು. ಇದನ್ನೇ ಉದಾಹರಿಸಿ 'ಶಿವ ವಿಷ್ಣುವಿನ ನಡುವೆ ಭೇದ ಸಲ್ಲದು' ಎಂದು ಶಂಕ್ರಮ್ಮ ಜಾನಕಮ್ಮರಿಗೆ ನಮ್ಮಮ್ಮ ಹೇಳುತ್ತಿದ್ದರು. ಇದಾವುದೂ ಶಂಕ್ರಮ್ಮನ ಮಗ ಮಹೇಶಗಾಗಲೀ ಜಾನಕಮ್ಮನ ಮಗ ರಾಜುಗಾಗಲೀ ಅರ್ಥವಾಗುತ್ತಿರಲಿಲ್ಲ.

ಒಮ್ಮೆ ಶಿವರಾತ್ರಿಯಂದು ಶಂಕ್ರಮ್ಮನ ಮಗ ಮಹೇಶ ಎರೇಮಣ್ಣು ಕಲಸಿ ಪುಟ್ಟ ಶಿವಲಿಂಗ ಒಂದನ್ನು ಮಾಡಿ ರಾಜುಗೆ ತೋರಿಸಿದ. ರಾಜು ಅದಕ್ಕೆ 'ಪೂಜೆ ಮಾಡೋಣ' ಎಂದು ಮನೆಯಿಂದ ಗೋಪಿಚಂದನ ತಂದು ಈಶ್ವರ ಲಿಂಗಕ್ಕೆ ಅಂಗಾರ ಅಕ್ಷತೆಯ ನಾಮ ಬರೆದ, ಇಬ್ಬರೂ ಕೈಮುಗಿದರು. 'ಮಕ್ಕಳು ಮಾಡಿದ್ದು ಅಪಚಾರವಾಯಿತೆ??' ಎಂದು ಶಂಕ್ರಮ್ಮ ಜಾನಕಮ್ಮ ಇಬ್ಬರಿಂದಲೂ ಅಹವಾಲು ನಮ್ಮ ತಾಯಿ ಬಳಿ ಬಂದಿತು. 'ಅಪಚಾರವಲ್ಲ ಸದಾಚಾರ, ಶಿವ ವಿಷ್ಣುವನ್ನು ಧರಿಸಿದ್ದೀರಿ, ವಿಷ್ಣು ಶಿವನನ್ನು ಕೂಡಿದ್ದಾನೆ, ಬದುಕು ಬೇಕೆಂದಾಗ ಸ್ಥಿತಿಕಾರಕ ವಿಷ್ಣು ಎಲ್ಲರಿಗೂ ಬೇಕೇ ಬೇಕು, ಬದುಕು ಸಾಕೆಂದಾಗ ಲಯಕಾರಕ ಶಿವ ಎಲ್ಲರಿಗೂ ಬೇಕೇ ಬೇಕು, ಒಂದನ್ನು ಬಿಟ್ಟು ಇನ್ನೊಂದಿಲ್ಲ, ಒಬ್ಬರನ್ನು ಬಿಟ್ಟು ಇನ್ನೊಬ್ಬರಿಲ್ಲ, ಇಲ್ಲೇ ಸಮೀಪದ ಹರಿಹರಕ್ಕೆ ಹೋಗಿನೋಡಿ ಶಂಕರ ಮತ್ತು ನಾರಾಯಣ ಕೂಡಿಕೊಂಡು 'ಹರಿಹರೇಶ್ವರರಾಗಿದ್ದಾರೆ, ಮಕ್ಕಳಿಗೆ ಅರ್ಥವಾಗುವ ಈ ತತ್ವ ನಿಮಗೇಕೆ ಅರ್ಥವಾಗುತ್ತಿಲ್ಲ!!?' ಎಂದು ನಮ್ಮಮ್ಮ ಮುಸಿ ನಕ್ಕರು. 'ಹೌದಲ್ಲವೇ' ಎಂದು ಶಂಕ್ರಮ್ಮ ಜಾನಕಮ್ಮ ಪರಸ್ಪರ ಮುಖ ನೋಡಿಕೊಂಡು ನಕ್ಕರು.

**- ಹೆಚ್.ಬಿ. ಮಂಜುನಾಥ್**
ಹಿರಿಯ ಪತ್ರಕರ್ತ, ದಾವಣಗೆರೆ.

# ಪಂಜಾಬ್ ಧರಣಿಗಳ ರಾಜ್ಯವಾಗುತ್ತಿದೆ

## ರೈತ ಸಂಘಟನೆಗಳಿಗೆ ಪಂಜಾಬ್ ಮುಖ್ಯಮಂತ್ರಿ ಮಾನ್ ತರಾಟೆ

ಚಂಡಿಘಡ, ಮಾ. 4 - ಪ್ರತಿದಿನ ಧರಣಿಗಳನ್ನು ನಡೆಸುತ್ತಿರುವ ರೈತ ಸಂಘಟನೆಗಳನ್ನು ತರಾಟೆಗೆ ತೆಗೆದುಕೊಂಡಿರುವ ಪಂಜಾಬ್ ಮುಖ್ಯಮಂತ್ರಿ ಭಗವಂತ್ ಮಾನ್, ಪಂಜಾಬ್ ಧರಣಿಗಳ ರಾಜ್ಯವಾಗುತ್ತಿದೆ ಎಂದು ವಿಷಾದಿಸಿದ್ದಾರೆ.

ರೈತ ಸಂಘಟನೆಗಳು ಗ್ರಾಮಸ್ಥರ ಸಮಸ್ಯೆಗಳನ್ನು ಬಗೆಹರಿಸುವುದಾಗಿ ಹೇಳುತ್ತಾ, ಸಮಾನಾಂತರ ಸರ್ಕಾರ ನಡೆಸುವ ಪ್ರಯತ್ನ ನಡೆಸುತ್ತಿವೆ ಎಂದು ಮುಖ್ಯಮಂತ್ರಿ ಆರೋಪಿಸಿದ್ದಾರೆ.

ಪಂಜಾಬ್ ಸರ್ಕಾರ ಹಾಗೂ ಸಂಯುಕ್ತ ಕಿಸಾನ್ ಮೋರ್ಚಾ ನಾಯಕರ ನಡುವಿನ ಸಭೆಯಿಂದ ಭಗವಂತ ಮಾನ್ ಅರ್ಧದಲ್ಲೇ ಎದ್ದು ಬಂದಿದ್ದರು. ಯಾವುದೇ ಪ್ರಚೋದನೆ ಇಲ್ಲದೆ ಮುಖ್ಯಮಂತ್ರಿ ಸಭೆಯಿಂದ ಹೊರ ನಡೆದಿದ್ದಾರೆ ಎಂದು ರೈತ ನಾಯಕರು ಆರೋಪಿಸಿದ್ದರು.

ಮೊಹಾಲಿಯಲ್ಲಿ ಪತ್ರಕರ್ತರೊಂದಿಗೆ ಮಾತನಾಡಿರುವ ಮುಖ್ಯಮಂತ್ರಿ ಮಾನ್, ನಾನು ಕ್ರಮ ತೆಗೆದುಕೊಳ್ಳಲು ಸಾಧ್ಯವಿಲ್ಲ ಎಂಬ ತಪ್ಪು ಕಲ್ಪನೆ ರೈತ ಸಂಘಟನೆಗಳಿಗೆ ಇರಬಾರದು ಎಂದಿದ್ದಾರೆ. ಪ್ರತಿಭಟನೆಗಾಗಿ ಚಂಡಿಘಡಕ್ಕೆ ತೆರಳಲು ಉದ್ದೇಶಿಸಿದ್ದ ರೈತ ಮುಖಂಡರನ್ನು ಪೊಲೀಸರು ವಶಕ್ಕೆ ತೆಗೆದುಕೊಳ್ಳಲಾಗಿದೆ ಎಂದು ಆರೋಪಿಸಲಾಗಿತ್ತು.

### ಧರಣಿಗಳಿಂದ ಸಾವಿರಾರು ಕೋಟಿ ರೂ. ನಷ್ಟ

ರೈತ ಸಂಘಟನೆಗಳು ರಸ್ತೆ ತಡೆ ನಡೆಸುತ್ತಿರುವ ಕಾರಣ ಕೈಗಾರಿಕೆಗಳಿಗೆ ನಷ್ಟವಾಗುತ್ತಿದೆ. ಪರೋಕ್ಷವಾಗಿ ಸಾವಿರಾರು ಕೋಟಿ ರೂ. ನಷ್ಟವಾಗಿದೆ ಎಂದು ಮುಖ್ಯಮಂತ್ರಿ ಭಗವಂತ್ ಮಾನ್ ಹೇಳಿದ್ದಾರೆ.

ಪಂಜಾಬ್‌ನಲ್ಲಿ ರಸ್ತೆ ತಡೆಗಳು ನಡೆಯುತ್ತಿರುವ ಕಾರಣ ಕೈಗಾರಿಕೋದ್ಯಮಿಗಳು ದೆಹಲಿಯಲ್ಲಿ ಸಭೆ ಕರೆಯುತ್ತಿದ್ದಾರೆ ಎಂದೂ ಅವರು ಹೇಳಿದ್ದಾರೆ.

ರೈತರ ಜೊತೆ ನಡೆಸಲಾದ ಸಭೆಯ ಕುರಿತು ಕೇಳಿದ ಪ್ರಶ್ನೆಗೆ ಉತ್ತರಿಸಿದ ಮಾನ್, ಪ್ರತಿದಿನ ರೈಲು ತಡೆ, ರಸ್ತೆ ತಡೆ ನಡೆಸಲಾಗುತ್ತಿದೆ. ಇದರಿಂದಾಗಿ ಪಂಜಾಬ್ ಆರ್ಥಿಕತೆಗೆ ಭಾರೀ ನಷ್ಟವಾಗುತ್ತಿದೆ ಹಾಗೂ ಪಂಜಾಬ್ ಧರಣಿಗಳ ರಾಜ್ಯವಾಗುತ್ತಿದೆ ಎಂದು ರೈತರಿಗೆ ತಿಳಿಸಿದ್ದೇನೆ ಎಂದಿದ್ದಾರೆ.

ರೈತ ಮುಖಂಡರನ್ನು ವಶಕ್ಕೆ ತೆಗೆದುಕೊಂಡಿರುವುದನ್ನು ಸಮರ್ಥಿಸಿಕೊಂಡಿರುವ ಮಾನ್, ಪಂಜಾಬ್ ಕಾರ್ಯನಿರ್ವಹಿಸಬೇಕಿದೆ. ನಾನು 3 ಕೋಟಿ ಜನರ ಹೊಣೆ ಹೊಂದಿದ್ದೇನೆ. ನಾನು ಎಲ್ಲರ ಹಿತ ಪರಿಗಣಿಸಬೇಕಿದೆ ಎಂದಿದ್ದಾರೆ.

ರೈತ ಮುಖಂಡರು ಕೆಲವೊಮ್ಮೆ ರೈಲು ತಡೆ ನಡೆಸುತ್ತಾರೆ, ರಸ್ತೆ ತಡೆ ನಡೆಸುತ್ತಾರೆ, ಕೆಲವೊಮ್ಮೆ ರಾಷ್ಟ್ರೀಯ ಹೆದ್ದಾರಿ ತಡೆಯುತ್ತಾರೆ. ಕೆಲವೊಮ್ಮೆ ವಲಸೆ ಕಚೇರಿಗಳ ಎದುರು ಧರಣಿ ನಡೆಸುತ್ತಾರೆ. ಈಗ ಅವರು ಅತ್ತೆ ಸೊಸೆ ನಡುವಿನ ಜಗಳ ಬಗೆಹರಿಸಲು ಮುಂದಾಗಿದ್ದಾರೆ. ಅವರೇನು ಸಮಾನಾಂತರ ಸರ್ಕಾರ ನಡೆಸಲು ಮುಂದಾಗಿದ್ದಾರೆಯೇ? ಎಂದು ಮಾನ್ ಪ್ರಶ್ನಿಸಿದ್ದಾರೆ.

ಅವರ ಬೇಡಿಕೆಗಳು ಕೇಂದ್ರ ಸರ್ಕಾರಕ್ಕೆ ಸಂಬಂಧಿಸಿದ್ದಾಗಿವೆ. ಆದರೂ ರೈತರು ಪಂಜಾಬ್‌ನಲ್ಲಿ ಧರಣಿ ನಡೆಸುತ್ತಿದ್ದಾರೆ. ಒಂದು ಸಂಘಟನೆ ಧರಣಿ ನಡೆಸಿದ ತಕ್ಷಣ ಇನ್ನೊಂದು ಸಂಘಟನೆ ಹೋರಾಟಕ್ಕೆ ಸೇರಿಕೊಳ್ಳುತ್ತದೆ. ಸಂಘಟನೆಗಳು ಧರಣಿಯಲ್ಲಿ ಪರಸ್ಪರ ಸ್ಪರ್ಧೆ ನಡೆಸುತ್ತಿವೆ. ಹೋರಾಟದ ಶ್ರೇಯ ಪಡೆಯಲು ಸಂಘರ್ಷ ನಡೆಸುತ್ತಿವೆ ಎಂದು ಮುಖ್ಯಮಂತ್ರಿ ಆರೋಪಿಸಿದ್ದಾರೆ.

# ನಗರದಲ್ಲಿ ಇಂದು ಚಿತ್ರಕಲಾ ಶಿಬಿರದ ಉದ್ಘಾಟನೆ

ವೃತ್ತಿ ರಂಗಭೂಮಿ ರಂಗಾಯಣ (ದಾವಣಗೆರೆ) ಇವರ ವತಿಯಿಂದ ರಾಷ್ಟ್ರೀಯ ವೃತ್ತಿ ರಂಗೋತ್ಸವ-2025 ರ ಅಂಗವಾಗಿ ಲಾಂಛನ ಬಿಡುಗಡೆ ಮತ್ತು ಚಿತ್ರಕಲಾ ಶಿಬಿರದ ಉದ್ಘಾಟನಾ ಸಮಾರಂಭವನ್ನು ಇಂದು ಬೆಳಿಗ್ಗೆ 10.30 ಕ್ಕೆ ವಿಶ್ವವಿದ್ಯಾನಿಲಯ ದೃಶ್ಯಕಲಾ ಮಹಾವಿದ್ಯಾಲಯದ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ.

ದಾವಣಗೆರೆ ವೃತ್ತಿ ರಂಗಭೂಮಿ ರಂಗಾಯಣದ ನಿರ್ದೇಶಕ ಮಲ್ಲಿಕಾರ್ಜುನ ಕಡಕೋಳ ಕಾರ್ಯಕ್ರಮ ಉದ್ಘಾಟಿಸುವರು. ಅಪರ ಜಿಲ್ಲಾಧಿಕಾರಿ ಪಿ.ಎನ್. ಲೋಕೇಶ್, ವಿಶ್ವವಿದ್ಯಾನಿಲಯ ದೃಶ್ಯಕಲಾ ಮಹಾವಿದ್ಯಾಲಯದ ಪ್ರಾಚಾರ್ಯ ಡಾ. ಜಯರಾಜ್ ಎಂ. ಚಿಕ್ಕಪಾಟೀಲ್ ಅಧ್ಯಕ್ಷತೆ ವಹಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ದಾವಣಗೆರೆ ವಿವಿ ಸಿಂಡಿಕೇಟ್ ಸದಸ್ಯ ಡಾ. ಎನ್.ಸಿ. ಪ್ರಶಾಂತ್, ಶಿಬಿರದ ಸಂಚಾಲಕ ಶಿವಶಂಕರ ಸುತಾರ, ಉಪನ್ಯಾಸಕ ದತ್ತಾತ್ರೇಯ ಎನ್.ಭಟ್, ವೃತ್ತಿ ರಂಗಭೂಮಿ ರಂಗಾಯಣದ ವಿಶೇಷಾಧಿಕಾರಿ ರವಿಚಂದ್ರ ಭಾಗವಹಿಸಲಿದ್ದಾರೆ.

## ಪಾಕಿಸ್ತಾನಿ ಎನ್ನುವುದು ಧಾರ್ಮಿಕ ಭಾವನೆಗಳಿಗೆ ಧಕ್ಕೆ ತಂದಂತಲ್ಲ

ನವದೆಹಲಿ, ಮಾ. 4 - 'ಮಿಯಾ - ಟಿಯಾ' ಹಾಗೂ 'ಪಾಕಿಸ್ತಾನಿ' ಎಂಬ ಪದಗಳನ್ನು ಬಳಸುವುದು ಧಾರ್ಮಿಕ ಭಾವನೆಗಳಿಗೆ ಧಕ್ಕೆ ತಂದಂತೆ ಅಲ್ಲ ಎಂದು ಸುಪ್ರೀಂ ಕೋರ್ಟ್ ತಿಳಿಸಿದೆ.

**ಸುಪ್ರೀಂ ಕೋರ್ಟ್**

ನ್ಯಾಯಮೂರ್ತಿಗಳಾದ ಬಿ.ವಿ. ನಾಗರತ್ನ ಹಾಗೂ ಸತೀಶ್ ಚಂದ್ರ ಶರ್ಮ ಅವರನ್ನು ಒಳಗೊಂಡ ಪೀಠ ಈ ನಿಲುವು ಕಳೆದಿದೆ.

ಜಾರ್ಖಂಡ್‌ನ ಚಾಸ್ ಎಂಬಲ್ಲಿನ ಉಪ ವಿಭಾಗೀಯ ಕಚೇರಿ ಮಾಹಿತಿ ಹಕ್ಕು ಹಂಗಾಮಿ ಗುಮಾಸ್ತ ಹಾಗೂ ಉರ್ದು ಅನುವಾದಕ, ವ್ಯಕ್ತಿಯೊಬ್ಬರ ವಿರುದ್ಧ ದಾಖಲಿಸಿದ್ದ ಅಪರಾಧಿಕ ಪ್ರಕರಣವನ್ನು ಸುಪ್ರೀಂ ಕೋರ್ಟ್ ರದ್ದುಗೊಳಿಸಿದೆ. ಇಂತಹ ಹೇಳಿಕೆಗಳು ಕೀಳು ಅಭಿರುಚಿಯವಾಗಿವೆ. ಆದರೆ ಧಾರ್ಮಿಕ ಭಾವನೆಗಳಿಗೆ ಧಕ್ಕೆ ತರುವ ವ್ಯಾಪ್ತಿಗೆ ಬರುವುದಿಲ್ಲ ಎಂದು ತಿಳಿಸಿದೆ.

ಹರಿ ನಂದನ್ ಸಿಂಗ್ ಎಂಬುವವರು ಉಪವಿಭಾಗೀಯ ಕಚೇರಿಯಿಂದ ಮಾಹಿತಿ ಕೋರಿ ಅರ್ಜಿ ದಾಖಲಿಸಿದ್ದರು. ಅದರಂತೆ ಅವರಿಗೆ ಅಂಚೆ ಮೂಲಕ ಮಾಹಿತಿ ರವಾನಿಸಲಾಗಿತ್ತು.

ನೋಂದಾಯಿತ ಅಂಚೆ ಮೂಲಕ ತಮಗೆ ಕಳಿಸಲಾದ ದಾಖಲೆಗಳನ್ನು ತಿರುಚಲಾಗಿದೆ ಎಂದು ಆರೋಪಿಸಿದ್ದ ಅರ್ಜಿದಾರ ಈ ಬಗ್ಗೆ ಮೇಲ್ಮನವಿ ಸಲ್ಲಿಸಿದರು.

ಆರೋಪಿಯ ಮನೆಗೆ ತೆರಳಿ ದಾಖಲೆಗಳನ್ನು ಹಸ್ತಾಂತರಿಸುವಂತೆ ಉಪ ವಿಭಾಗಿಯ ಕಚೇರಿಯಿಂದ ಪ್ರತಿನಿಧಿಯೊಬ್ಬರನ್ನು ಕಳಿಸಲಾಗಿತ್ತು. ಈ ಪ್ರತಿನಿಧಿಯನ್ನು ಆರೋಪಿ ನಿಂದಿಸಿದ್ದಾರೆ ಎಂದು ಆಕ್ಷೇಪಿಸಲಾಗಿತ್ತು. ನಂತರ ಈ ಬಗ್ಗೆ ಎಫ್‌ಐಆರ್ ದಾಖಲಿಸಲಾಗಿತ್ತು.

ತಮ್ಮ ವಿರುದ್ಧದ ಪ್ರಕರಣವನ್ನು ರದ್ದುಗೊಳಿಸಬೇಕು ಎಂದು ಆರೋಪಿ ಸಲ್ಲಿಸಿದ ಮನವಿಯನ್ನು ಜಾರ್ಖಂಡ್ ಹೈಕೋರ್ಟ್ ತಳ್ಳಿ ಹಾಕಿತ್ತು. ನಂತರ ಪ್ರಕರಣ ಸುಪ್ರೀಂ ಕೋರ್ಟ್ ಮೆಟ್ಟಿಲೇರಿತ್ತು.

# ಅಂಬೇಡ್ಕರ್ ಸ್ಮರಿಸುವ ಜಾಗರಣೆ ಆಚರಿಸಿ

## ಅಂಬೇಡ್ಕರ್ ಮಹಾರಾತ್ರಿ ಜಾಗರಣೆ ಕಾರ್ಯಕ್ರಮದಲ್ಲಿ ಜಿ.ಪಂ ಸದಸ್ಯ ಕೆ.ಪಿ.ಪಾಲಯ್ಯ ಅಭಿಮತ

ಜಗಳೂರು, ಮಾ.4- ಸಮಾನತೆ ಸಾರುವ ಶ್ರೇಷ್ಠ ಸಂವಿಧಾನ ರಚಿಸಿದ ಅಂಬೇಡ್ಕರ್ ಅವರನ್ನು ಸ್ಮರಿಸುವ ಜಾಗರಣೆ ಪ್ರಸ್ತುತ ದಿನಗಳಲ್ಲಿ ಅವಶ್ಯಕವಾಗಿದೆ ಎಂದು ಜಿ.ಪಂ ಮಾಜಿ ಸದಸ್ಯ ಕೆ.ಪಿ. ಪಾಲಯ್ಯ ಅಭಿಪ್ರಾಯ ವ್ಯಕ್ತಪಡಿಸಿದರು.



ಪ್ರಗತಿ ಪರ ಸಂಘಟನೆ ವತಿಯಿಂದ ಪಟ್ಟಣದ ಅಂಬೇಡ್ಕರ್ ವೃತ್ತದಲ್ಲಿ ಬುಧವಾರ ಮಹಾ ಶಿವರಾತ್ರಿ ನಿಮಿತ್ತ ಹಮ್ಮಿಕೊಂಡಿದ್ದ 'ಅಂಬೇಡ್ಕರ್ ಮಹಾರಾತ್ರಿ ಜಾಗರಣೆ' ವಿಶೇಷ ಕಾರ್ಯಕ್ರಮದಲ್ಲಿ ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಅವರು ಮಾತನಾಡಿದರು.

ಭಾರತವು ಬಹು ಸಂಸ್ಕೃತಿಯ ನೆಲೆ ಬೀಡಾಗಿದೆ. ಇಲ್ಲಿ ಜಾತ್ಯತೀತ ಮತ್ತು ಧರ್ಮಾತೀತವಾಗಿ ಶಾಂತಿ, ಸಾಮರಸ್ಯದಿಂದ ಧಾರ್ಮಿಕ ಹಬ್ಬಗಳು ಜರುಗಬೇಕು ಎಂದರು.

ದೇವರು, ಧರ್ಮದ ಹೆಸರಿನಲ್ಲಿ ಜನರ ಮೇಲಾಗುವ ಭಾವನಾತ್ಮಕ ಹಲ್ಲೆಗಳು, ಮೌಢ್ಯತೆ ಹಾಗೂ ಕಂದಾಚಾರಗಳು ಕೊನೆಯಾಗಬೇಕು. ಮಹಿಳೆಯರು ಮತ್ತು ಶೋಷಿತ ವರ್ಗಗಳು ಸಮಾಜದ ಮುಖ್ಯವಾಹಿನಿಗೆ ಬರಲಿ ಎಂದು ಹೇಳಿದರು.

ವಕೀಲರ ಸಂಘದ ತಾಲ್ಲೂಕು ಘಟಕದ ಅಧ್ಯಕ್ಷ ಟಿ. ಬಸವರಾಜ್ ಮಾತನಾಡಿ, ಜನರು ವೈಜ್ಞಾನಿಕ ಮತ್ತು ವೈಚಾರಿಕ ಚಿಂತನೆ ಮೈಗೂಡಿಸಿಕೊಳ್ಳಬೇಕು ಎಂದು ಹೇಳಿದರು.

**ಜಗಳೂರು**

ದೇಶದಲ್ಲಿ ಮನುಸ್ಮೃತಿ ವಿಜೃಂಭಿಸುತ್ತಿದ್ದ ವೇಳೆ ಅತ್ಯಂತ ಶೋಷಣೆಗೊಳಗಾಗಿದ್ದ ಮಹಿಳೆಯರಿಗೆ ಸಂವಿಧಾನಬದ್ಧ ಧಾರ್ಮಿಕ ಹಕ್ಕು ನೀಡಿ, ದೇವಾಲಯಗಳಿಗೆ ಪ್ರವೇಶ ನೀಡಿದ ಡಾ.ಬಿ.ಆರ್ ಅಂಬೇಡ್ಕರ್ ಅವರನ್ನು ಸ್ಮರಿಸದೇ ದೇವಾಲಯಗಳ ಮುಂದೆ ಸಾಲಾಗಿ ನಿಂತು, ಮೌಢ್ಯಕ್ಕೆ ಬಲಿಯಾಗುತ್ತಿರುವುದು ಆತಂಕಕಾರಿ ಬೆಳವಣಿಗೆ ಎಂದು ಹೇಳಿದರು.

ದಲಿತ ಮುಖಂಡ ಬಿ. ಶಂಭುಲಿಂಗಪ್ಪ ಮಾತನಾಡಿ, ಅಂಬೇಡ್ಕರ್ ಅವರನ್ನು ಒಂದು ಜಾತಿಗೆ ಸೀಮಿತಗೊಳಿಸದೆ, ಮೀಸಲಾತಿ ಅನುಭವಿಸುವ ಎಲ್ಲಾ ವರ್ಗದವರು ಇಂತಹ ವಿನೂತನ ಕಾರ್ಯಕ್ರಮಗಳಲ್ಲಿ ಭಾಗವಹಿಸಬೇಕು. ಈ ಬಗ್ಗೆ ಸಂಘಟನೆಗಳು ಜನಜಾಗೃತಿ ಮೂಡಿಸಬೇಕು ಎಂದು ಹೇಳಿದರು.

ಈ ವೇಳೆ ಪ್ರಾಚಾರ್ಯ ನಾಗಲಿಂಗಪ್ಪ, ವಕೀಲ ಸಣ್ಣ ಓಬಯ್ಯ, ನಾಗೇಶ್, ದೊಣೆಹಳ್ಳಿ ಗ್ರಾ.ಪಂ ಅಧ್ಯಕ್ಷ ತಿಪ್ಪೇಸ್ವಾಮಿ, ಸಂಘಟನೆಯ ಮುಖಂಡರಾದ ಚಿಕ್ಕಮ್ಮನಹಟ್ಟಿ ಮಂಜಣ್ಣ, ಕುಬೇಂದ್ರಪ್ಪ, ಗುತ್ತಿದುರ್ಗ ರುದ್ರೇಶ್, ಅಹಮ್ಮದ್ ಅಲಿ, ಎಂ.ರಾಜಪ್ಪ, ಮಾದಿಹಳ್ಳಿ ಮಂಜಪ್ಪ, ಸತೀಶ್ ಮಲೆಮಾಚಿಕೆರೆ, ಸಿದ್ದಮ್ಮನಹಳ್ಳಿ ಬಸವರಾಜ್, ವಕೀಲ ಅಂಜಿನಪ್ಪ, ಕುಮಾರ್ ಇದ್ದರು.

## ರೈಲಿನಿಂದ ಬಿದ್ದು ಪ್ರಾಣ ಕಳೆದುಕೊಳ್ಳುತ್ತಿದ್ದ ಅಂಗವಿಕಲನ ರಕ್ಷಿಸಿದ ಆರ್‌ಪಿಎಫ್ ಸತೀಶ್



ದಾವಣಗೆರೆ, ಮಾ.4- ಕಣ್ಣೆದುರಿಗೇ ರೈಲಿನ ಚಕ್ರಕ್ಕೆ ಸಿಲುಕಿ ಪ್ರಾಣ ಕಳೆದುಕೊಳ್ಳುತ್ತಿದ್ದ ಅಂಗವಿಕಲ ಪ್ರಯಾಣಿಕನನ್ನು ಕರ್ತವ್ಯ ನಿರತ ಆರ್‌ಪಿಎಫ್ ಮುಖ್ಯ ಪೇದೆ ಸತೀಶ್ ಪ್ರಯಾಣಿಕನ ಪ್ರಾಣ ರಕ್ಷಿಸಿರುವ ಘಟನೆ ಭಾನುವಾರ ರಾತ್ರಿ 11.32ರ ವೇಳೆ ನಡೆದಿದೆ.

ವಿಜಯಪುರ ಜಿಲ್ಲೆ ಹಿಟ್ಟಿನಹಳ್ಳಿ ಗ್ರಾಮದ ಹೆಚ್.ಎನ್. ಪ್ರಶಾಂತ್ (25) ಪ್ರಾಣಾಪಾಯದಿಂದ ಪಾರಾದ ವ್ಯಕ್ತಿ. ಇವರು ಬೆಂಗಳೂರಿನ ಆಸ್ಪತ್ರೆಗೆ ಹೋಗಿ ಬಲಗಾಲಿನ ಅಳವಡಿಕೆಗೆ ಮಾಪನ ಮಾಡಿಸಿಕೊಳ್ಳಲು ಹೊಸಪೇಟೆಯಿಂದ ಯಶವಂತಪುರಕ್ಕೆ ಹೋಗುವ ವಿಶೇಷ ರೈಲಿನಲ್ಲಿ ಪ್ರಯಾಣ ಬೆಳೆಸಿದ್ದರು.

ಕಾರಣಾಂತರದಿಂದ ವೈದ್ಯರು ಇಲ್ಲದಿರುವುದನ್ನು ಖಚಿತಪಡಿಸಿಕೊಂಡ ಇವರು, ಊರಿಗೆ ವಾಪಸ್ ಹೋಗಲು ನಿರ್ಧರಿಸಿ, ದಾವಣಗೆರೆ ರೈಲ್ವೆ ನಿಲ್ದಾಣದಲ್ಲಿ ರಾತ್ರಿ 11.32ರ ವೇಳೆ ಬೆಂಗಳೂರಿಗೆ ಹೋಗುತ್ತಿದ್ದ ರೈಲಿನಿಂದ ಇಳಿಯಲು ಯತ್ನಿಸಿದ ವೇಳೆ ಅನಾಹುತ ಸಂಭವಿಸುತ್ತಿತ್ತು. ಸ್ಥಳದಲ್ಲೇ ಇದ್ದ ಆರ್‌ಪಿಎಫ್ ಮುಖ್ಯ ಪೇದೆ ಬಿ.ಎಸ್.ಸತೀಶ್ ಚಲಿಸುತ್ತಿರುವ ರೈಲಿನಿಂದ ಕೆಳಗೆ ಬೀಳುತ್ತಿರುವುದನ್ನು ಗಮನಿಸಿ ಪ್ರಾಣದ ಹಂಗು ತೊರೆದು 2ನೇ ಪ್ಲಾಟ್‌ಫಾರ್ಮ್ ಬದಿಗೆ ಎಳೆದುಕೊಂಡು ವಿಕಲಾಂಗ ಪ್ರಯಾಣಿಕನ ಜೀವ ಉಳಿಸಿದ್ದಾರೆ.

## ಒಳ ಮೀಸಲಾತಿ ಹೋರಾಟದ ಪಾದಯಾತ್ರೆಗೆ ರಕ್ಷಣೆ ಒದಗಿಸುವಂತೆ ಹೋರಾಟ ಸಮಿತಿ ಮನವಿ

ದಾವಣಗೆರೆ, ಮಾ.4- ಒಳ ಮೀಸಲಾತಿ ಹಕ್ಕಿನ ಹೋರಾಟದ ಪಾದಯಾತ್ರೆಗೆ ಮತ್ತು ಅಂಬೇಡ್ಕರ್ ಪುತ್ಥಳಿ ಹಾಗೂ ಧ್ವನಿವರ್ಧಕ ಅಳವಡಿಸಿದ ವಾಹನಕ್ಕೆ ರಕ್ಷಣೆ ಮತ್ತು ಅನುಮತಿಯನ್ನು ನೀಡಬೇಕೆಂದು ಪೊಲೀಸ್ ಇಲಾಖೆಗೆ ಮನವಿ ಮಾಡಿದ್ದಾರೆ.

ಒಳ ಮೀಸಲಾತಿ ಜಾರಿ ಮಾಡಲು ವಿಳಂಬ ಮಾಡುತ್ತಿರುವ ಹಿನ್ನೆಲೆಯಲ್ಲಿ ಮಾ.5ರ ಇಂದಿನಿಂದ ಪ್ರೊ.ಬಿ. ಕೃಷ್ಣಪ್ಪನವರ ಸಮಾಧಿ ಸ್ಥಳದಿಂದ ಬೆಂಗಳೂರಿನ ಫ್ರೀಡಂ ಪಾರ್ಕ್ ವರೆಗೆ ಪಾದಯಾತ್ರೆ ಹಮ್ಮಿಕೊಂಡಿದ್ದು, ನಮ್ಮ ಒಳ ಮೀಸಲಾತಿ ಹೋರಾಟಕ್ಕೆ ಸೂಕ್ತ ರಕ್ಷಣೆ ನೀಡಬೇಕೆಂದು ಮಾದಿಗ ಒಳ ಮೀಸಲಾತಿ ಹೋರಾಟ ಸಮಿತಿ ಕೋರಿದೆ.

ಪಾದಯಾತ್ರೆ ವೇಳೆ ಒಳ ಮೀಸಲಾತಿ ವಿರೋಧಿಗಳು ನಮ್ಮ ಹೋರಾಟಕ್ಕೆ ಅಡ್ಡಿ ಪಡಿಸುವುದು, ಕಾರ್ಯಕ್ರಮದ ಉದ್ದೇಶಕ್ಕೆ ಧಕ್ಕೆ ತರುವುದು ಹಾಗೂ ನಮ್ಮ ಮೇಲೆ ದಾಳಿ ನಡೆಯದಂತೆ ಆಯಾ ಪೊಲೀಸ್ ಠಾಣೆಗಳು ರಕ್ಷಣೆ ಒದಗಿಸಬೇಕೆಂದು ವಿನಂತಿಸಿದ್ದಾರೆ.

# ಬೊಫೋರ್ಸ್ ಪ್ರಕರಣದಿಂದ ರಾಜೀವ್ ಗಾಂಧಿ ಕೈ ಬಿಡಲು ಅಧಿಕಾರಿಗಳಿಗೆ 'ಗಿಳಿ ಪಾಠ'

ನವದೆಹಲಿ, ಮಾ. 4 - ಮಾಜಿ ಪ್ರಧಾನಿ ರಾಜೀವ್ ಗಾಂಧಿ ಅವರನ್ನು ಬೋಫೋರ್ಸ್ ಪ್ರಕರಣದಿಂದ ಕೈ ಬಿಡುವುದು ಹೇಗೆ ಎಂಬ ಬಗ್ಗೆ ಕೇಂದ್ರ ಸರ್ಕಾರದ ಹಿರಿಯ ಅಧಿಕಾರಿಗಳು ಬೋಫೋರ್ಸ್ ಅಧಿಕಾರಿಗಳ ಜೊತೆ ಗುಪ್ತ ಸಭೆ ನಡೆಸಿ, ಅವರಿಗೆ ಹೇಳಿಕೆ ನೀಡುವ ಕುರಿತು ಗಿಳಿ ಪಾಠ ಮಾಡಿದ್ದರು ಎಂದು ಪತ್ರಕರ್ತೆ ಚಿತ್ರಾ ಸುಬ್ರಹ್ಮಣ್ಯಂ ಬರೆದಿರುವ ಪುಸ್ತಕದಲ್ಲಿ ತಿಳಿಸಲಾಗಿದೆ.

1987ರ ಸಮಯದಲ್ಲಿ ಭುಗಿಲೆದ್ದಿದ್ದ ಬೋಫೋರ್ಸ್ ಹಗರಣ, ಆಗಿನ ಕಾಂಗ್ರೆಸ್ ಸರ್ಕಾರಕ್ಕೆ ದೊಡ್ಡ ಸಮಸ್ಯೆಯಾಗಿತ್ತು.

ಬೋಫೋರ್ಸ್ ಹಗರಣಕ್ಕೆ ಸಂಬಂಧಿಸಿದಂತೆ ಸ್ವಿಟ್ಜರ್‌ಲ್ಯಾಂಡ್‌ನಲ್ಲಿ ತನಿಖೆ ನಡೆಸಿದ್ದ ಟೆನ್ ಲಿಂಡ್‌ಸ್ಟ್ರಾಮ್ ಅವರು ನೀಡಿರುವ ಮಾಹಿತಿ ಆಧರಿಸಿ ಸುಬ್ರಹ್ಮಣ್ಯಂ ಅವರು ತಮ್ಮ ಪುಸ್ತಕದಲ್ಲಿ ಈ ಬಗ್ಗೆ ವಿವರ ನೀಡಿದ್ದಾರೆ.

ಸ್ವಿಸ್ ಉದ್ಯಮವಾದ ಬೋಫೋರ್ಸ್‌ನಿಂದ 1,437 ಕೋಟಿ ರೂ.ಗಳ ಫಿರಂಗಿ ಖರೀದಿಸುವಾಗ 64 ಕೋಟಿ ರೂ.ಗಳ ಲಂಚ ನೀಡಲಾಗಿದೆ ಎಂದು ಆರೋಪಿಸಲಾಗಿತ್ತು. ಈ ಹಗರಣಕ್ಕೆ ಸಂಬಂಧಿಸಿದಂತೆ ಸುಬ್ರಹ್ಮಣ್ಯಂ ಅವರು 320 ಪುಟಗಳ 'ಬೋಫೋರ್ಸ್‌ಗೇಟ್' ಎಂಬ ಪುಸ್ತಕ ಬರೆದಿದ್ದು, ಇದು ಶೀಘ್ರದಲ್ಲೇ ಬಿಡುಗಡೆಯಾಗಲಿದೆ.

ಈ ಹಗರಣದಿಂದ ರಾಜೀವ್ ಗಾಂಧಿ ಅವರನ್ನು ರಕ್ಷಿಸುವ ಕುರಿತು ಬೋಫೋರ್ಸ್ ಹಾಗೂ ಭಾರತೀಯ ಅಧಿಕಾರಿಗಳ ಸಭೆ ನಡೆದಿತ್ತು. ಈ ಸಭೆಯು ಮುಂದಿನ ಹಂತದಲ್ಲಿ ಹಗರಣವನ್ನು ಮುಚ್ಚಿ ಹಾಕುವುದಕ್ಕೆ ಆಧಾರವಾಗಿತ್ತು ಎಂದು ಪುಸ್ತಕದಲ್ಲಿ ಹೇಳಲಾಗಿದೆ. ಭ್ರಷ್ಟಾಚಾರವನ್ನು ಮುಚ್ಚಿಡುವುದು ಹೇಗೆ, ತನಿಖೆಯನ್ನು ಎದುರಿಸುವುದು ಹೇಗೆ ಹಾಗೂ ಎಲ್ಲಕ್ಕಿಂತ ಹೆಚ್ಚಾಗಿ ಪ್ರಧಾನ ಮಂತ್ರಿ ರಾಜೀವ್ ಗಾಂಧಿ ಅವರನ್ನು ಪ್ರಕರಣದಿಂದ ಮುಕ್ತಗೊಳಿಸುವುದು ಹೇಗೆ ಎಂಬ ಬಗ್ಗೆ 15 ಪುಟಗಳ ಮಾಹಿತಿ ರೂಪಿಸಲಾಗಿತ್ತು. ಈ ಬಗ್ಗೆ 1987ರ ಸೆಪ್ಟೆಂಬರ್ 15 ರಿಂದ 17 ರ ನಡುವೆ ಚರ್ಚೆಗಳು ನಡೆದಿದ್ದವು ಎಂದು ಪುಸ್ತಕದಲ್ಲಿ ತಿಳಿಸಲಾಗಿದೆ.

# ಒಂದು ವರ್ಷ ಪೂರೈಸಿದ ಸಂಭ್ರಮದಲ್ಲಿ ಬಾಪೂಜಿ ಎದೆಹಾಲಿನ ಭಂಡಾರ

ದಾವಣಗೆರೆ ನಗರದಲ್ಲಿ ಆರೋಗ್ಯ ಎಂಬ ಮಾತು ಬಂದರೆ ತಕ್ಷಣ ನೆನಪಾಗುವುದು ಬಾಪೂಜಿ ಸಂಸ್ಥೆ. ಏಕೆಂದರೆ ಆರೋಗ್ಯದಲ್ಲಿ ಯಾವುದೇ ತುರ್ತು ಸಂದರ್ಭಗಳು ಬಂದರೂ ತಕ್ಷಣ ನೆನಪಾಗುವುದು ಬಾಪೂಜಿ ಆಸ್ಪತ್ರೆಗಳು. ಅದು ಮಕ್ಕಳ ವಿಷಯಕ್ಕೆ ಆಗಿರಬಹುದು ಅಥವಾ ದೊಡ್ಡವರ ವಿಷಯವೇ ಆಗಿರಬಹುದು.

ಅದೇ ರೀತಿ ಬಾಪೂಜಿ ಮಕ್ಕಳ ಆರೋಗ್ಯ ಸಂಸ್ಥೆ ಮತ್ತು ಸಂಶೋಧನಾ ಕೇಂದ್ರ ಮಧ್ಯ ಕರ್ನಾಟಕದಲ್ಲಿ ಚಿರಪರಿಚಿತ. ಎಷ್ಟೋ ನವಜಾತ ಶಿಶುಗಳ ಸಂಜೀವಿನಿಯಂತೆ ಈ ಕೇಂದ್ರ. ಯಾವುದೇ ತೀವ್ರತರ ತೊಂದರೆಯಿಂದ ಮಗು ಬಂದರೂ ಕೂಡಾ ಇಲ್ಲಿನ ವೈದ್ಯರು, ದಾದಿಯರು ಮಗುವಿನ ಆರೋಗ್ಯ ಸ್ಥಿತಿ ಸುಧಾರಣೆಗೆ ಟೊಂಕಕಟ್ಟಿ ನಿಂತು ಶ್ರಮ ವಹಿಸುತ್ತಾರೆ.

ಈವರೆಗೆ 134 ತಾಯಂದಿರು ಎದೆಹಾಲನ್ನು ನೀಡಿದ ದಾನಿಗಳಾಗಿದ್ದು, ದಿನಕ್ಕೆ 3 ಸಾರಿಯಂತೆ ಒಂದು ವಾರ- ಹದಿನೈದು ದಿನ ಹೀಗೆ ದಿನವೂ ಹಾಲನ್ನು ದಾನವಾಗಿ ನೀಡಿದ್ದಾರೆ. ಇಲ್ಲಿರುವ ಎನ್‌ಐಸಿಯುನ ಒಟ್ಟು 118 ಮಕ್ಕಳಿಗೆ ಇದನ್ನು ನೀಡಲಾಗಿದ್ದು, ಒಂದು ದಿನದಿಂದ 1 ತಿಂಗಳ ವರೆಗೆ ಅವಶ್ಯಕತೆ ಇರುವ ಮಕ್ಕಳಿಗೆ ಈ ಹಾಲನ್ನು ನೀಡಲಾಗುತ್ತಿದ್ದು,

**ಒಂದು ದಿನದಿಂದ 1 ತಿಂಗಳವರೆಗೆ ಅವಶ್ಯಕತೆ ಇರುವ ಮಕ್ಕಳಿಗೆ ಈ ಹಾಲನ್ನು ನೀಡಲಾಗುತ್ತಿದ್ದು, ಈವರೆಗೂ ಬಾಪೂಜಿ ಎದೆಹಾಲಿನ ಭಂಡಾರದಲ್ಲಿ ಪಡೆದ ಹಾಲಿನ ಪ್ರಮಾಣ 32 ಸಾವಿರ ಎಂ.ಎಲ್.**

ಈವರೆಗೂ ಬಾಪೂಜಿ ಎದೆಹಾಲಿನ ಭಂಡಾರದಲ್ಲಿ ಪಡೆದ ಹಾಲಿನ ಪ್ರಮಾಣ 32 ಸಾವಿರ ಎಂ.ಎಲ್. ಆಸ್ಪತ್ರೆಯನ್ನು ಹೊರತುಪಡಿಸಿ ಹೊರಗಿನ ಅವಶ್ಯಕತೆ ಇರುವ ಮಕ್ಕಳಿಗೆ ಎದೆಹಾಲನ್ನು ವಿತರಿಸಬೇಕೆಂದರೆ ಹೊರಗಿನಿಂದ ತಾಯಂದಿರುವ ಬರಬೇಕಿದೆ. ನಮಗೆ ಹೆಚ್ಚಾದ ಆಹಾರ ಹೇಗೆ ಬೇರೆಯವರ ಸ್ವತ್ತು ಎಂದು ಹೇಳುತ್ತೇವೆಯೋ ಹಾಗೆಯೇ ಹೆಚ್ಚಾದ ಎದೆಹಾಲಿನ ಮಹತ್ವವನ್ನು ಅರಿತು ತಾಯಂದಿರು ದಾನವಾಗಿ ಎದೆಹಾಲನ್ನು ನೀಡಿದರೆ, ಅವಶ್ಯಕತೆ ಇರುವಂತಹ ಮಕ್ಕಳಿಗೆ ತುಂಬಾ ಅನುಕೂಲವಾಗುತ್ತದೆ.

ಕಳೆದ ವರ್ಷ ಆರಂಭದಲ್ಲಿ ಎನ್‌ಐಸಿಯುನಲ್ಲಿ ದಾಖಲಾದ ಮಕ್ಕಳ ತಾಯಂದಿರಿಗೆ ಎದೆ ಹಾಲನ್ನು ತೆಗೆದುಕೊಡಲು ಇಲ್ಲಿರುವ ಬ್ರೆಸ್ಟ್ ಪಂಪ್ ಬಹಳ ಅನುಕೂಲವಾಗಿದ್ದು, ಅದರೊಂದಿಗೆ ಎದೆಹಾಲು ಹೆಚ್ಚಾಗಿರುವ ತಾಯಂದಿರುವ ತಮ್ಮ ಹಾಲನ್ನು ಕೊಡಲು ಅನುಕೂಲವಾಗಿದೆ. ಅದೇ ಹಾಲನ್ನು ಶೀತಲೀಕರಣ ಮಾಡಿ, ಪರೀಕ್ಷಿಸಿ ಬೇರೆ ಮಕ್ಕಳಿಗೆ ಕೊಡಲಾಗುತ್ತಿದೆ.

ಎದೆಹಾಲು ನವಜಾತ ಶಿಶುಗಳಿಗೆ ಅಮೃತಕ್ಕಿಂತಲೂ ಹೆಚ್ಚಾಗಿದ್ದು, ಇಂತಹ ಸೇವೆಯನ್ನು ಉಚಿತವಾಗಿ ಮಾಡುತ್ತಿರುವುದು ಶ್ಲಾಘನೀಯ. ಈ ಸಂಸ್ಥೆಯಲ್ಲಿ ಮಿಲ್ಕ್ ಬ್ಯಾಂಕ್‌ನೊಂದಿಗೆ ಸ್ತನ್ಯಪಾನ ನಿರ್ವಹಣೆಯ ಬಗ್ಗೆ ಆಪ್ತ ಸಮಾಲೋಚನಾ ಕೇಂದ್ರವನ್ನು ತೆರೆಯಲಾಗಿದ್ದು, ಆರಂಭದಲ್ಲಿ 3 ದಿನಗಳು ತಾಯಂದಿರಿಗೆ ಕೊಲೋಸ್ಟ್ರಮ್ (ಗೀಬಿನ ಹಾಲು) ಉತ್ಪತ್ತಿಯಾಗುತ್ತದೆ. ಇದು ಮಗುವಿನ ಬೆಳವಣಿಗೆಗೆ ಅತಿ ಅವಶ್ಯಕ. ಇದೊಂದು ರೀತಿ ಪ್ರಥಮ ಲಸಿಕೆಯಂತೆ. ಮುಂದೆ ಬರುವ ಎಷ್ಟೋ ಕಾಯಿಲೆಗಳಿಗೆ ರಾಮಬಾಣವಿದ್ದಂತೆ. ಮಗುವಿನ ಸರ್ವತೋಮುಖ ಬೆಳವಣಿಗೆಗೆ ಅತಿ ಪ್ರಮುಖವಾಗಿರುವ ಕೊಲೋಸ್ಟ್ರಮ್ ಬಗ್ಗೆ ತಿಳುವಳಿಕೆ ನೀಡಿ ಅದರ ಬಗ್ಗೆ ಆಪ್ತ ಸಮಾಲೋಚನೆ ಮಾಡಲಾಗುತ್ತದೆ.

**- ಡಾ. ಜಿ. ಗುರುಪ್ರಸಾದ್,**
ಬಾಪೂಜಿ ಮಕ್ಕಳ ಆರೋಗ್ಯ ಸಂಸ್ಥೆ ಮತ್ತು ಸಂಶೋಧನಾ ಕೇಂದ್ರ,
**- ಶ್ರೀಮತಿ ಅನಿತಾ ಬಿ.,**
ಆಪ್ತ ಸಮಾಲೋಚಕರು, ಬಾಪೂಜಿ ಹ್ಯೂಮನ್ ಮಿಲ್ಕ್ ಬ್ಯಾಂಕ್, ದಾವಣಗೆರೆ.

**ಶಬರಿಗಿರಿ ರಿಯಲ್ ಎಸ್ಟೇಟ್**

ದಾವಣಗೆರೆ ನಗರದ ವ್ಯಾಪ್ತಿಯಲ್ಲಿ
30x40 ಅಳತೆಯ 25 ಅನುಮೋದಿತ,
E-swathu ready ಇರುವ ಸೈಟ್‌ಗಳು
(Final Approved) ಲಭ್ಯವಿವೆ.
ಇದಕ್ಕಾಗಿ Investor ಬೇಕಾಗಿದ್ದಾರೆ.
ಆಸಕ್ತರು ಸಂಪರ್ಕಿಸಿ. : 8971499575

**REQUIRED**
**X-RAY TECHNICIANS**
**Hi-Tech Clinical Laboratories (HCL)**
S S Speciality Clinic, Modi Compound,
MCC 'A' Block, Davangere - 577002.
Interested Candidates can Contact :
91646 28481, 95381 14262, 90609 13169

## ಸಾರ್ವಜನಿಕರಿಗೆ ಪ್ರಕಟಣೆ

ನನ್ನ ಕಕ್ಷಿದಾರರಾದ 1. ಶ್ರೀಮತಿ ಲಲತಮ್ಮ ಎಂ.ಕೆ ಕೋಂ. ಲೇಟ್ ಕೊಟ್ರಬಸಪ್ಪ ಎಂ.ಬಿ ವಯಸ್ಸು: 65 ವರ್ಷ, ಗೃಹಿಣಿ, ವಾಸ: # 914, ವಿರಕ್ತ ಮಠ ಗಲ್ಲಿ, ದೊಡ್ಡಪೇಟೆ, ದಾವಣಗೆರೆ. 2. ಶ್ರೀಮತಿ ಭಾಗ್ಯಶ್ರೀ ಹೆಚ್.ಪಿ ಕೋಂ ಹೆಚ್.ಪಿ. ವಿಜಯಕುಮಾರ್ ವಯಸ್ಸು: ಸುಮಾರು 48 ವರ್ಷ, ಗೃಹಿಣಿ, ವಾಸ: 1ನೇ ಮಹಡಿ, ಸೇಂಟ್ ಮೇರಿ ಕಾನ್ವೆಂಟ್ ಎದುರು, ಹೊನ್ನಾಳಿ. 3. ಶ್ರೀ ಎಂ.ಕೆ ಪ್ರಶಾಂತ್ ಬಿನ್ ಲೇಟ್ ಕೊಟ್ರಪ್ಪ ಎಂ.ಬಿ ವಯಸ್ಸು: ಸುಮಾರು 46 ವರ್ಷ, ವ್ಯವಹಾರ, ವಾಸ: #914, ವಿರಕ್ತ ಮಠ ಗಲ್ಲಿ, ದೊಡ್ಡಪೇಟೆ, ದಾವಣಗೆರೆ, 4. ಶ್ರೀ ಎಂ.ಕೆ. ಸಂತೋಷ್ ಬಿನ್ ಲೇಟ್ ಕೊಟ್ರಪ್ಪ ಎಂ.ಬಿ. ವಯಸ್ಸು: ಸುಮಾರು 44 ವರ್ಷ, ಶಿಕ್ಷಕ, ವಾಸ: # 914, ವಿರಕ್ತ ಮಠ ಗಲ್ಲಿ, ದೊಡ್ಡಪೇಟೆ, ದಾವಣಗೆರೆ, ಇವರ ಪರವಾಗಿ ಸಾರ್ವಜನಿಕರಿಗೆ ನೀಡಲಾದ ಪತ್ರಿಕಾ ಪ್ರಕಟಣೆ ಏನೆಂದರೆ,

ನನ್ನ ಕಕ್ಷಿದಾರರು 1. ಎ. ಜೆ. ಅಬ್ದುಲ್ ರವೂಫ್ ಅನ್ ಆಸುಂಡಿ ಜಮಾಲ್ ಸಾಬ್, ವಯಸ್ಸು: 58 ವರ್ಷ, ವ್ಯವಹಾರ, ವಾಸ: 4ನೇ ಕ್ರಾಸ್, ಅಹ್ಮದ್ ನಗರ್, ದಾವಣಗೆರೆ, 2. ಶ್ರೀ ಬಾಬುಸಾಬ್ ಬಿನ್ ಬಾಷಾ ಸಾಬ್, ವಯಸ್ಸು: 55 ವರ್ಷ, ವ್ಯವಹಾರ, ವಾಸ: 1ನೇ ಕ್ರಾಸ್. ಮಿಲ್ಲತ್ ಕಾಲೋನಿ, ದಾವಣಗೆರೆ, 3. ಸಾಧಿಕ್‌ಉಲ್ಲಾ ಬಿನ್ ಅಬ್ದುಲ್ಲಾ ಸಾಹೇಬ್ ವಯಸ್ಸು: ಸುಮಾರು 35 ವರ್ಷ, ವ್ಯವಹಾರ, ವಾಸ: # 119. ಪೋಲಿಸ್ ಠಾಣೆ ಎದುರು, ತೆಲಗಿ ಗ್ರಾಮ, ಹರಪನಹಳ್ಳಿ (ತಾ), ವಿಜಯನಗರ (ಜಿಲ್ಲೆ), 4. ಶ್ರೀಮತಿ ಫೈರೋಜಾ ಬಾನು ಕೋಂ ಟಿಪ್ಪು ಸಾಬ್, ವಯಸ್ಸು: ಸುಮಾರು 55 ವರ್ಷ, ಗೃಹಿಣಿ, ವಾಸ: 4ನೇ ಕ್ರಾಸ್, ಅಹ್ಮದ್ ನಗರ, ದಾವಣಗೆರೆ, ಇವರ ವಿರುದ್ಧ ದಾವಣಗೆರೆಯ 4ನೇ ಹೆಚ್ಚುವರಿ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ ಯಲ್ಲಿ ಅಸಲು ದಾವೆ ಸಂಖ್ಯೆ: 65/2024 ಯನ್ನು ದಾವಣಗೆರೆ ತಾಲ್ಲೂಕು ಕಸಬಾ ಹೋಬಳಿ ದೊಡ್ಡ ಬೂವಿಹಾಳ್ ಗ್ರಾಮದ ಸರ್ವೆ ನಂ. 34, ವಿಸ್ತೀರ್ಣ 3 ಎಕರೆ 19 ಗುಂಟೆ ಜಮೀನು, ಸದಲಿ ಜಮೀನಿನಲ್ಲಿ 5 ಗುಂಟೆ ಖರಾಬ್ ಸೇರಿದ್ದು, ಸದರಿ ಜಮೀನಿನಲ್ಲಿ ನಿರ್ಮಿಸಿರುವ 140 ನಿವೇಶನಗಳ ವಿರುದ್ಧ ಸಲ್ಲಿಸಿದ್ದು, ಸಾರ್ವಜನಿಕರು ಈ ಮೇಲೆ ತಿಳಿಸಿದ ಸರ್ವೆ ನಂಬರ್‌ನಲ್ಲಿರುವ ಸೈಟ್ ನಂ. 1ರಿಂದ 140 ರ ವರೆಗಿನ ಸೈಟ್‌ಗಳಿಗೆ ಸಂಬಂಧಿಸಿದಂತೆ ಯಾವುದೇ ವ್ಯವಹಾರವನ್ನು ಮಾಡಬಾರದೆಂದು, ಒಂದು ವೇಳೆ ಸಾರ್ವಜನಿಕರು ಸದರಿ ನಿವೇಶನಗಳನ್ನು ಖರೀದಿಸಿದ್ದಲ್ಲಿ ಅದಕ್ಕೆ ನನ್ನ ಕಕ್ಷಿದಾರರು ಹೊಣೆಯಾಗಿರುವುದಿಲ್ಲ ಮತ್ತು ನನ್ನ ಕಕ್ಷಿದಾರರು ಈ ಮೇಲೆ ತಿಳಿಸಿದ ಸೈಟುಗಳಗೆ ಸಂಬಂಧಿಸಿದಂತೆ ಬೇರೆ ಯಾರಿಗೂ ಯಾವ ವಿಧದಿಂದಲೂ ಅಧಿಕಾರವನ್ನು ನೀಡಿರುವುದಿಲ್ಲ ಎಂದು ನನ್ನ ಕಕ್ಷಿದಾರರ ಪರವಾಗಿ ನಾನು ಸಾರ್ವಜನಿಕರಿಗೆ ಈ ಪತ್ರಿಕಾ ಪ್ರಕಟಣೆ ಮೂಲಕ ಎಚ್ಚರಿಕೆಯನ್ನು ನೀಡುತ್ತಿದ್ದೇನೆ.

**ಸಹಿ/-ಇಳಕಲ್ ಶೇಖ್ ಇಸ್ಮಾಯಿಲ್**, ಬಿ.ಎ., ಎಲ್‌ಎಲ್‌ಬಿ., ವಕೀಲರು
10ನೇ ಕ್ರಾಸ್, ಎ ಬ್ಲಾಕ್, ದೇವರಾಜ ಅರಸು ಲೇಔಟ್
ದಾವಣಗೆರೆ. **ಫೋನ್ : 98444 24443**

# ಒಂದೆಡೆ ಕಳೆ.....ಇನ್ನೊಂದೆಡೆ ನಾಟಿಗೆ ಸಿದ್ಧತೆ ....






ಮಲೇಬೆನ್ನೂರು ಸುತ್ತ ಮುತ್ತ ಭದ್ರಾ ಅಚ್ಚುಕಟ್ಟು ಪ್ರದೇಶದಲ್ಲಿ ಮುಂಗಡ ಭತ್ತದ ನಾಟಿ ಮಾಡಿರುವ ರೈತರು ಈಗಾಗಲೇ ಮೊದಲ ಹಂತದ ಕಳೆ ತೆಗೆದು ಗೊಬ್ಬರ ಹಾಕುತ್ತಿದ್ದರೆ, ಅಚ್ಚುಕಟ್ಟಿನ ಕೊನೆ ಭಾಗದ ಕೆ.ಎನ್. ಹಳ್ಳಿ, ಕೊಕ್ಕನೂರು, ಸಿರಿಗೆರೆ, ಭಾನುವಳ್ಳಿ, ಕಮಲಾಪುರ, ಲಕ್ಕಶೆಟ್ಟಿಹಳ್ಳಿ, ಯಲವಟ್ಟಿ, ಜಿಗಳಿ, ನಂದಿತಾವರೆ, ಎಕ್ಕೆಗೊಂದಿ ಸೇರಿದಂತೆ ಮತ್ತಿತರೆ ಗ್ರಾಮಗಳಲ್ಲಿ ಈಗ ಭತ್ತದ ನಾಟಿ ಮಾಡುವ ಸಿದ್ಧತೆಯಲ್ಲಿದ್ದಾರೆ. ಹಿಂಡಸಘಟ್ಟ ಬಳಿ ರೈತನೊಬ್ಬ ನಾಟಿ ಮಾಡಲು ರೊಳ್ಳಿ ಮಾಡಿರುವ ಗದ್ದೆಯನ್ನು ಸಮ ಮಾಡುತ್ತಿರುವ ದೃಶ್ಯ ಮಂಗಳವಾರ ಕ್ಯಾಮರಾ ಕಣ್ಣಿಗೆ ಸೆರೆ ಸಿಕ್ಕಿತು ...

# ಶಾಲಾ ವಾಹನ ಚಾಲಕರಿಗೆ ಮಕ್ಕಳ ಸುರಕ್ಷತೆ, ನಿರ್ವಹಣೆ ಅರಿವು

ದಾವಣಗೆರೆ, ಮಾ.4- ಇಲ್ಲಿನ ಜೈನ್ ಪಬ್ಲಿಕ್ ಶಾಲೆಯಲ್ಲಿ ಸೋಮವಾರ ಶಾಲಾ ವಾಹನ ಚಾಲಕರಿಗೆ ಮಕ್ಕಳ ಸುರಕ್ಷತೆ ಮತ್ತು ನಿರ್ವಹಣೆಯಲ್ಲಿ ಅನುಸರಿಸಬೇಕಾದ ನಿಯಮಗಳ ಬಗ್ಗೆ ಬೆಂಗಳೂರಿನ ಐಷರ್ ಕಂಪನಿ ಪ್ರಾದೇಶಿಕ ತರಬೇತುದಾರ ಹೆಚ್. ಎನ್ ಸತೀಶ್ ಅರಿವು ಮಾಡಿಸಿದರು.

ಈ ವೇಳೆ ಮಾತನಾಡಿದ ಅವರು, ಶಾಲಾ ವಾಹನ ಚಾಲಕರು ರಸ್ತೆ ಸಂಚಾರಿ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸಬೇಕು. ದಿನನಿತ್ಯ ಶಾಲಾ ವಾಹನದ ಸ್ಥಿತಿಗತಿಯ ಬಗ್ಗೆ ಪರಿಶೀಲಿಸಿ ವಾಹನ ಚಾಲನೆಗೆ ಮುಂದಾಗಬೇಕು ಎಂದರು.

ಚಾಲಕರು ವಾಹನ ಚಲಾಯಿಸುವ ವೇಳೆ ಮೊಬೈಲ್ ಬಳಸಬಾರದು. ಸ್ಪರ್ಧೆಗಿಳಿದು ಚಾಲನೆ ಮಾಡಬಾರದು ಮತ್ತು ಅಪರಿಚಿತ ವ್ಯಕ್ತಿಗಳನ್ನು ವಾಹನದಲ್ಲಿ ಕರೆದೊಯ್ಯಬಾರದು ಎಂದು ತಿಳಿಸಿದರು.




ಪ್ರತಿನಿತ್ಯ ಮಕ್ಕಳನ್ನು ಮನೆಯಿಂದ ಶಾಲೆಗೆ ಶಾಲೆಯಿಂದ ಮನೆಗೆ ಕರೆದೊಯ್ಯುವಾಗ ಮಕ್ಕಳ ಸುರಕ್ಷತೆಗೆ ಹೆಚ್ಚಿನ ಕಾಳಜಿ ವಹಿಸಬೇಕು.

ವಾಹನದಿಂದ ಮಕ್ಕಳು ಇಳಿಯುವಾಗ ಮತ್ತು ಹತ್ತುವಾಗ ಚಾಲಕರು ಮಕ್ಕಳನ್ನು ಗಮನಿಸಿ ವಾಹನ ಚಲಾಯಿಸಬೇಕು ಎಂದು ಹೇಳಿದರು.

ಈ ವೇಳೆ ಜೈನ್ ಪಬ್ಲಿಕ್ ಶಾಲೆಯ ಪ್ರಾಚಾರ್ಯ ಎಸ್. ನಟರಾಜ್, ಉಪ ಪ್ರಾಚಾರ್ಯೆ ಯಶೋಧ ಹಾಗೂ ಸಿಬ್ಬಂದಿ ಇದ್ದರು.

# ಹಲೋ...ಹಲೋ..

ಹಲೋ ಯಾರು?
ಯಾರೇಳಿ ನೋಡೋಣ?
ಗೊತ್ತಾಗ್ಲಿಲ್ಲ!!
ಏನ್ರೀ ಆಗ್ಲೇ ಮರೆತುಬಿಟ್ರಾ. ?
ನಿಮ್ಮವಾಯ್ಸ್ ಎಲ್ಲೋ
ಕೇಳ್ದಂಗೆ ಇದೆಯಲ್ಲ

ಹಲೋ... ಹಲೋ
ಓ..ಮತ್ತೆ ಕೇಳ್ತಾ ಇಲ್ವಾ,,?
ಈಗ ಕೇಳುಸ್ತ ಇದೆಯಾ ?
ಹಾಂ.. ಕೇಳುಸ್ತಾ ಇದೆ
ಸ್ವಲ್ಪ ಜೋರಾಗಿ ಮಾತಾಡಿ

ನೀವ್ ಕಟ್ ಮಾಡಿ
ನಾನೇ ಕಾಲ್ ಮಾಡ್ತೀನಿ
ಈ ಹಳೇ ಪೋನೋ!!!
ಒನ್ ವೇ ಆದ್ರೆ ದೇವ್ರೇ ಗತಿ

ಹಲೋ...ಹಲೋ..
ಈಗ ಕೇಳಿಸ್ತಾ ಇದೆಯಾ
ಓಕೆ... ಹೇಳಿ ನಾನ್ಯಾರು
ಸಾರಿ ಸರ್ ಗೊತ್ತಾಗ್ತಾ ಇಲ್ಲ
ನಾನ್ರೀ ...ಅಲೆಕ್ಸಾಂಡರ್
ಅಲೆಗ್ಸಾಂಡರ್ ಗ್ರಹಾಂ ಬೆಲ್
ಸಾರ್ ..ನೀವು. ..ಸಾರಿ ಸರ್
ನಾನು ಗೊತ್ತಿಡಿಲೇ ಇಲ್ಲ ..
ಇವತ್ತು ನನ್ನ ಹುಟ್ಟಿದ ಹಬ್ಬ
ಯಾರು ವಿಶ್ ಮಾಡ್ಲೇ ಇಲ್ಲ
ಅದಕ್ಕೆ ಪೋನ್ ಮಾಡ್ದೆ

ಹಲೋ... ಹಲೋ..
ಈಗ ಕೇಳುಸ್ತಾ ಇದೆಯಾ?
ಚೆನ್ನಾಗಿ ಕೇಳುಸ್ತಾ ಇದೆ ಸರ್,
ನಿಮ್ಮನ್ನ ಮರೆಯೋಕಾಗುತ್ತಾ????

- ನಿಂಗೋಜಿ ರಾವ್ ಗುಜ್ಜರ್,
ದಾವಣಗೆರೆ. 90363 89240

# ಖಾಸಗಿ ಬಡಾವಣೆ ನಿರ್ಮಾಣಕ್ಕೆ ಸರ್ಕಾರದ ಅನುಮತಿ ಕಡ್ಡಾಯ

**(1ನೇ ಪುಟದಿಂದ)** ಜನಸಾಮಾನ್ಯರಿಗೆ ಕೈಗೆಟುಕುವ ಬೆಲೆಯಲ್ಲಿ ನಿವೇಶನಗಳು ಸಿಗುವಂತಾಗಲಿ ಎನ್ನುವ ಉದ್ದೇಶದಿಂದಲೇ ಹೊರತು ಖಾಸಗಿ ಬಡಾವಣೆಗಳ ನಿರ್ಮಾಣ ಮತ್ತು ನಕ್ಷೆಗಳಿಗೆ ಅನುಮೋದನೆ ನೀಡಲು ಅಲ್ಲ.

ಖಾಸಗಿ ಬಡಾವಣೆಗಳ ನಿರ್ಮಾಣಕ್ಕೆ ಒಂದು ರೀತಿ ನಿಯಮಗಳು ಅನ್ವಯಿಸಿದರೆ ಸರ್ಕಾರದ (ನಗರಾಭಿವೃದ್ಧಿ ಪ್ರಾಧಿಕಾರಗಳ) ವತಿಯಿಂದ ನಿರ್ಮಾಣಕ್ಕೆ ಒಂದು ರೀತಿ ನಿಯಮಗಳಿವೆ, ಇದು ತಾರತಮ್ಯದಿಂದ ಕೂಡಿವೆ, ಆದ್ದರಿಂದ ಎಲ್ಲದಕ್ಕೂ ಅನ್ವಯವಾಗುವಂತೆ ನಿಯಮಾವಳಿಗಳಿಗೆ ತಿದ್ದುಪಡಿ ತರಬೇಕು ಎಂದು ಸೂಚಿಸಿದರು. ರೈತರ ಮನವೊಲಿಸಿ, ಜಮೀನು ಪಡೆದು 50:50ರ ಅನುಪಾತದಲ್ಲಿ ಅಭಿವೃದ್ಧಿಪಡಿಸಿ ಸಾಮಾನ್ಯ ಜನರಿಗೆ ಲಭ್ಯವಾಗುವಂತೆ ಪ್ರಾಧಿಕಾರಗಳು ಕೆಲಸ ಮಾಡಬೇಕು.

ಖಾಸಗಿ ಬಡಾವಣೆಗಳ ನಿರ್ಮಾಣ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನೆ ಕಾಯ್ದೆಯನ್ವಯ ನಾಗರಿಕ ಸೌಲಭ್ಯ, ಮೀಸಲು ನಿವೇಶನ, ಒಳಚರಂಡಿ ವ್ಯವಸ್ಥೆ, ಉದ್ಯಾನವನ, ರಸ್ತೆಗಳ ನಿರ್ಮಾಣ ನಿಯಮಾವಳಿಗಳನ್ನು ಖಾಸಗಿ ಬಡಾವಣೆಗಳಲ್ಲಿ ತರಲು ಸಾಧ್ಯವಿದೆ.

ನಗರಾಭಿವೃದ್ಧಿ ಹಾಗೂ ನಗರ ಯೋಜನಾ ಪ್ರಾಧಿಕಾರಗಳಿಂದ ಬಡಾವಣೆಗಳು ನಿರ್ಮಾಣವಾದರೆ, ತಕರಾರು ಇರುವುದಿಲ್ಲ, ನಕ್ಷೆ ಕಾನೂನು ರೀತಿಯಲ್ಲಿ ಇರುತ್ತದೆ, ಜೊತೆಗೆ ಪ್ರಾಧಿಕಾರಗಳ ಮೇಲೆ ಜನರಿಗೆ ಗೌರವ ಹೆಚ್ಚಾಗುತ್ತದೆ.

ಖಾಸಗಿಯವರು ಬಡಾವಣೆಗಳನ್ನು ನಿರ್ಮಿಸಿ ಸಾವಿರಾರು ನಿವೇಶನ ಮಾರಾಟ ಮಾಡಿ ಹೆಚ್ಚಿನ ಹಣ ಗಳಿಸುತ್ತಿರುವಾಗ ಪ್ರಾಧಿಕಾರಗಳ ಆಯುಕ್ತರು ಮತ್ತು ನಗರ ಯೋಜನಾ ಸದಸ್ಯರುಗಳಿಂದ ಏಕೆ ಸಾಧ್ಯವಾಗುತ್ತಿಲ್ಲ ಎಂದರು.

ನಗರಾಭಿವೃದ್ಧಿ ಪ್ರಾಧಿಕಾರಗಳು, ಯೋಜನಾ ಪ್ರಾಧಿಕಾರಗಳ ಹಣ ಸದ್ಬಳಕೆ ಮಾಡಿಕೊಳ್ಳಬೇಕು, ಬಡ್ಡಿಗಾಗಿ ಬ್ಯಾಂಕ್‌ಗಳಲ್ಲಿ ಠೇವಣಿ ಇಡಬಾರದು, ಬಡಾವಣೆ ನಿರ್ಮಿಸಿದರೆ ಸರ್ಕಾರಕ್ಕೆ ಒಳ್ಳೆಯ ಹೆಸರು ಬರುತ್ತದೆ. ಮೂರು ತಿಂಗಳಿಗೊಮ್ಮೆ ಪರಿಶೀಲನಾ ಸಭೆ ನಡೆಸಲಾಗುತ್ತದೆ, ಅಷ್ಟರಲ್ಲಿ ಪಗ್ರತಿ ಸಾಧಿಸಿರಬೇಕು ಎಂದರು.

# ಕೃಷಿ ವಿದ್ಯುತ್ ಪೂರೈಕೆಯಲ್ಲಿ ಕಡಿತವಿಲ್ಲ

**(1ನೇ ಪುಟದಿಂದ)** ಲೋಡ್‌ಶೆಡ್ಡಿಂಗ್ ಆಗಲೀ ಮಾಡುವುದಿಲ್ಲ.

ಶಾಸಕರು ತಮ್ಮ ತಮ್ಮ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಗೆ ಬರುವ ಹಿರಿಯ ಅಧಿಕಾರಿಗಳೊಂದಿಗೆ ನಿರಂತರ ಸಂಪರ್ಕ ಇಟ್ಟುಕೊಳ್ಳಿ, ಎಲ್ಲಿ ಏನೇ ಸಮಸ್ಯೆ ಉದ್ಭವಿಸಿದರೂ, ತಕ್ಷಣ ಅವರ ಗಮನಕ್ಕೆ ತಂದು ಪರಿಹರಿಸಿ ಎಂದು ಮನವಿ ಮಾಡಿದರು. ಕಳೆದ ವರ್ಷ ರಾಜ್ಯದಲ್ಲಿ ಉತ್ತಮ ಮಳೆಯಾಗಿ ಎಲ್ಲಾ ಜಲಾಶಯಗಳು ಭರ್ತಿಯಾಗಿ ಬೇಸಿಗೆ ಯಲ್ಲೂ ಅಣೆಕಟ್ಟೆಗಳು ಶೇಕಡ 70ರಷ್ಟು ನೀರಿನ ಸಂಗ್ರಹ ಹೊಂದಿವೆ.

ಸಂಗ್ರಹಿತ ನೀರನ್ನು ಬೇಸಿಗೆಯಲ್ಲಿ ಕೃಷಿಗೆ ಮತ್ತು ವಿದ್ಯುತ್ ಉತ್ಪಾದನೆಗೆ ಬಳಸಿಕೊಳ್ಳಲು ಸರ್ಕಾರ ತೀರ್ಮಾನಿಸಿದೆ, ಹೀಗಾಗಿ ಕೃಷಿ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಪೂರೈಕೆಯಲ್ಲಿ ಯಾವುದೇ ಅಡಚಣೆ ಇಲ್ಲ ಎಂದರು.

# ಕೋಳಿ ಶೀತ ಜ್ವರಕ್ಕೆ ಆತಂಕ ಬೇಡ

**(1ನೇ ಪುಟದಿಂದ)** ಬಳ್ಳಾರಿಯಿಂದ ಹಾಗೂ ಚಿಕ್ಕಬಳ್ಳಾಪುರದಿಂದ ದಾವಣಗೆರೆಗೆ ಸಾಗಾಣಿಕೆಯಾಗುವ ಕೋಳಿಗಳನ್ನು ನಿರ್ಬಂಧಿಸಲು ಚೆಕ್ ಪೋಸ್ಟ್ ಗಳನ್ನು ಸ್ಥಾಪನೆ ಮಾಡಿ ಸಂಪೂರ್ಣ ನಿಗಾವಹಿಸಲು ಮತ್ತು ಎಲ್ಲಿಯಾದರೂ ಹಕ್ಕಿಗಳು ಮರಣ ಹೊಂದಿದಲ್ಲಿ, ತಕ್ಷಣ ಮಾಹಿತಿ ನೀಡಲು ಸಹಾಯವಾಣಿ ಸ್ಥಾಪಿಸಲಾಗುತ್ತಿದೆ ಎಂದರು.

ಜಿಲ್ಲೆಯಲ್ಲಿ ಒಟ್ಟು 172 ಮಾಂಸದ ಕೋಳಿ ಫಾರಂಗಳಲ್ಲಿ 97 ಕಾರ್ಯನಿರ್ವಹಿಸುತ್ತಿದ್ದು ಇವುಗಳಲ್ಲಿ 498825 ಅಂದಾಜು ಬ್ರಾಯ್ಲರ್ ಕೋಳಿಗಳಿವೆ. ಹಾಗೂ 31 ಮೊಟ್ಟೆ ಕೋಳಿ ಸಾಕಾಣಿಕೆ ಕೇಂದ್ರಗಳಲ್ಲಿ 2473435 ಕೋಳಿಗಳಿವೆ. ಈ ಕೇಂದ್ರಗಳಲ್ಲಿ ಕೋಳಿಗಳು ಮರಣ ಹೊಂದಿದಲ್ಲಿ ವೈಜ್ಞಾನಿಕವಾಗಿ ನಿರ್ವಹಣೆ ಮಾಡಲು ಎಲ್ಲಾ ಫಾರಂಗಳ ಮಾಲೀಕರಿಗೆ ಸೂಚನೆ ನೀಡಲಾಗಿದೆ. ಯಾವುದೇ ಫಾರಂಗಳಲ್ಲಿ ಕೋಳಿಗಳು ಮರಣ ಹೊಂದಿದಲ್ಲಿ ತಕ್ಷಣ ಪಶುಸಂಗೋಪನಾ ಇಲಾಖೆ ಗಮನಕ್ಕೆ ತಂದು, ಈ ಹಕ್ಕಿಜ್ವರ ಹರಡದಂತೆ ಕ್ರಮ ವಹಿಸಲು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಡಾ.ಸುರೇಶ್ ಬಿ.ಇಟ್ನಾಳ್ ಮಾತನಾಡಿ, ಜಿಲ್ಲೆಯಲ್ಲಿ ಕೋಳಿ, ಬಾತುಕೋಳಿ, ವಲಸೆ ಬರುವ ಹಕ್ಕಿಗಳಲ್ಲಿ ಅಸಹಜ ಸಾವು ಉಂಟಾದಲ್ಲಿ ಕೂಡಲೇ ಹತ್ತಿರದ ಪಶು ವೈದ್ಯಕೀಯ ಇಲಾಖೆಗೆ ಮಾಹಿತಿ ನೀಡಬೇಕು. ಕೋಳಿ ಶೀತ ಜ್ವರದ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸಲು ಎಲ್ಲಾ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ. ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಬರುವ ಕೋಳಿ ಮಾಂಸ ಮತ್ತು ಮೊಟ್ಟೆ ಮಾರಾಟ ಅಂಗಡಿಗಳಲ್ಲಿ ಉತ್ಪಾದನೆಯಾಗುವ ತ್ಯಾಜ್ಯವನ್ನು ಸೂಕ್ತ ರೀತಿಯಲ್ಲಿ ವಿಲೇವಾರಿ ಮಾಡಲು ಕ್ರಮವಹಿಸಲು ಸೂಚನೆ ನೀಡಲಾಗಿದೆ ಎಂದರು.

ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಪಿ.ಎನ್. ಲೋಕೇಶ್, ಪಶುಸಂಗೋಪನಾ ಇಲಾಖೆ ಉಪನಿರ್ದೇಶಕ ಡಾ. ಮಹೇಶ್ ಹಾಗೂ ವಿವಿಧ ಇಲಾಖೆ ಅಧಿಕಾರಿಗಳು ಉಪಸ್ಥಿತರಿದ್ದರು.

# ಡಾ.ಸ್ವಾಮಿ ಆರಾಧ್ಯ ಮಠಗೆ ಪಿಹೆಚ್‌ಡಿ



ಕೊಟ್ಟೂರು, ಮಾ. 4 - ಪಟ್ಟಣದ ಕೊಟ್ಟೂರೇಶ್ವರ ಕಾಲೇಜಿನ ಗಣಕ ಯಂತ್ರ ವಿಜ್ಞಾನ ವಿಭಾಗದ ಪ್ರಾಧ್ಯಾಪಕ ಡಾ. ಸ್ವಾಮಿ ಆರಾಧ್ಯ ಮಠ ಅವರಿಗೆ ಇತ್ತೀಚಿಗೆ ಬೆಳಗಾವಿಯಲ್ಲಿ ನಡೆದ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಘಟಿಕೋತ್ಸವದಲ್ಲಿ ಪಿಹೆಚ್‌ಡಿ ಪದವಿ ಪ್ರದಾನ ಮಾಡಲಾಯಿತು. ಹೊಸಪೇಟೆಯ ಪ್ರೌಢದೇವರಾಯ ತಾಂತ್ರಿಕ ಮಹಾವಿದ್ಯಾಲಯದ ಪ್ರಾಂಶುಪಾಲ ಡಾ.ಯು.ಎಂ.ರೋಹಿತ ಇವರ ಮಾರ್ಗದರ್ಶನದಲ್ಲಿ 'ಎಫಿಷಿಯೆಂಟ್ ಸಾಫ್ಟ್ ಕಂಪ್ಯೂಟಿಂಗ್ ಮೆಥಡ್ಸ್ ಫಾರ್ ಮಾಡಲಿಂಗ್ ಆಫ್ ಸ್ಮಾರ್ಟ್ ಸಿಟೀಸ್ ' ಎಂಬ ವಿಷಯದ ಬಗ್ಗೆ ಪ್ರಬಂಧ ಮಂಡಿಸಿದ್ದರು.

# ಮಲಬಾರ್ ಗೋಲ್ಡ್ ಮತ್ತು ಡೈಮಂಡ್ಸ್‌ನಿಂದ ವಿದ್ಯಾರ್ಥಿ ವೇತನ ವಿತರಣೆ



ದಾವಣಗೆರೆ, ಮಾ. 4 - ಮಲಬಾರ್ ಗೋಲ್ಡ್ ಮತ್ತು ಡೈಮಂಡ್ಸ್‌ನ ಪೋಷಕ ಸಂಸ್ಥೆಯಾಗಿರುವ ಮಲಬಾರ್ ಗ್ರೂಪ್ ಕರ್ನಾಟಕದ ದಾವಣಗೆರೆ ಮಲಬಾರ್ ಗೋಲ್ಡ್‌ನಿಂದ ಅರ್ಹ ವಿದ್ಯಾರ್ಥಿನಿಯರಿಗೆ ವಿದ್ಯಾರ್ಥಿ ವೇತನವನ್ನು ಇಂದು ವಿತರಿಸಲಾಯಿತು.

ಈ ಕಾರ್ಯಕ್ರಮವನ್ನು ಲೋಕಸಭಾ ಸದಸ್ಯರಾದ ಡಾ. ಪ್ರಭಾ ಮಲ್ಲಿಕಾರ್ಜುನ್ ಉದ್ಘಾಟಿಸಿದರು. ರೋಟರಿ ಕ್ಲಬ್ ಪ್ರಸಿಡೆಂಟ್ ಸುನಿತಾ, ಮೇಯರ್ ಚಮನ್‌ಸಾಬ್, ಎಕ್ಸ್ ಮುನ್ಸಿಪಾಲ್ ಕಾಲೇಜಿನ ಉಪನ್ಯಾಸಕರಾದ ದೇವಿಬಾಯಿ ಎಂ.ಯು. ಅವರುಗಳಿಂದ ವಿದ್ಯಾರ್ಥಿ ವೇತನವನ್ನು ವಿತರಿಸಲಾಯಿತು.

ಮಲಬಾರ್ ಗೋಲ್ಡ್ ಮತ್ತು ಡೈಮಂಡ್ಸ್ ದಾವಣಗೆರೆ ಶೋ ರೂಂನ ಮುಖ್ಯಸ್ಥ ಬೇಸಿಲ್ ರಾಜನ್ ಮತ್ತು ಸಿಬ್ಬಂದಿ ವರ್ಗದವರು ಈ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

# ಸರಕು ಪೂರೈಕೆಗೆ 'ಧರಣಿ ಶುಲ್ಕ'

**(1ನೇ ಪುಟದಿಂದ)** ಸರಕು ಪೂರೈಕೆ ಶುಲ್ಕ ಹೆಚ್ಚಾಗುತ್ತದೆ ಹಾಗೂ ಸರಕುಗಳನ್ನು ಪೂರೈಸಲು 15 ದಿನ ಹೆಚ್ಚಿನ ಸಮಯ ಬೇಕಾಗುತ್ತದೆ ಎಂದು ಅಮೆಜಾನ್‌ನಲ್ಲಿ ತಿಳಿಸಲಾಗುತ್ತಿದೆ. ಇದು ನಮ್ಮ ಅಂತರರಾಷ್ಟ್ರೀಯ ವರ್ಚಸ್ಸು ಎಂದು ಮುಖ್ಯಮಂತ್ರಿ ಹೇಳಿದ್ದಾರೆ.

# ಔರಂಗಜೇಬ್ ಹೊಗಳಿದ ಶಾಸಕ ಅಜ್ಮಿ

## ಅಮಾನತ್ತಿಗೆ ಮಹಾರಾಷ್ಟ್ರ ಮಹಾಯುತಿ ಸದಸ್ಯರ ಆಗ್ರಹ

ಮುಂಬೈ, ಮಾ. 4 - ಮೊಗಲ್ ಸಾಮ್ರಾಟ ಔರಂಗಜೇಬ್ ಹೊಗಳಿದ ಸಮಾಜವಾದಿ ಪಕ್ಷದ ಶಾಸಕ ಅಬು ಅಜ್ಮಿ ಅಮಾನತ್ತಿಗೆ ಕ್ರಮ ತೆಗೆದುಕೊಳ್ಳಬೇಕು ಎಂದು ಮಹಾರಾಷ್ಟ್ರದ ಆಡಳಿತಾರೂಢ ಮಹಾಯುತಿ ಸದಸ್ಯರು ಒತ್ತಾಯಿಸಿದ್ದಾರೆ.

ಮಹಾರಾಷ್ಟ್ರ ವಿಧಾನಸಭೆಯಲ್ಲಿ ಈ ವಿಷಯ ಪ್ರಸ್ತಾಪವಾಗಿ ಎರಡು ಬಾರಿ ಕಲಾಪ ಮುಂದೂಡಲಾಯಿತು. ಛತ್ರಪತಿ ಸಾಂಭಾಜಿ ಮಹಾರಾಜ್ ಅವರನ್ನು ಹಿಂಸಿಸಿದ ಹಾಗೂ ಬರ್ಬರವಾಗಿ ಹತ್ಯೆ ಮಾಡಿದ ಔರಂಗಜೇಬ್ ಹೊಗಳಿರುವ ಅಜ್ಮಿ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು ಎಂದು ಸದಸ್ಯರು ಆಗ್ರಹಿಸಿದ್ದಾರೆ.

ಲೋಕಸಭಾ ಸದಸ್ಯ ನರೇಶ್ ಮಾಸ್ಕೆ ನೀಡಿದ ದೂರಿನ ಆಧಾರದ ಮೇಲೆ ಮಹಾರಾಷ್ಟ್ರದ ಠಾಣೆಯಲ್ಲಿ ಅಜ್ಮೀರ್ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ.

ಔರಂಗಜೇಬ್ ಆಡಳಿತದಲ್ಲಿ ಭಾರತದ ಗಡಿ ಆಫ್ಘಾನಿಸ್ತಾನ ಹಾಗೂ ಮ್ಯಾನ್ಮಾರ್‌ವರೆಗೆ ತಲುಪಿತ್ತು. ವಿಶ್ವದ ಜಿಡಿಪಿಯಲ್ಲಿ ಭಾರತದ ಪಾಲು ಶೇಕಡಾ 24ರಷ್ಟಿತ್ತು. ಈ ಅವಧಿಯಲ್ಲಿ ಭಾರತವನ್ನು ಬಂಗಾರದ ಹಕ್ಕಿ ಎಂದು ಕರೆಯಲಾಗುತ್ತಿತ್ತು ಎಂದು ಅಜ್ಮಿ ಹೇಳಿದ್ದರು.


**ಮಹಡಿ ಮನೆ ಮಾರಾಟಕ್ಕಿದೆ**
ಹರಿಹರ ನಗರದ ಹರ್ಲಾಪುರ ಬಡಾವಣೆ, 1ನೇ ಮುಖ್ಯ ರಸ್ತೆ, 2ನೇ ಕ್ರಾಸ್‌ನಲ್ಲಿ 20x60 ಅಳತೆಯ ಆರ್‌ಸಿಸಿ ಕಟ್ಟಡದ ಮಹಡಿ ಮನೆ ಮಾರಾಟಕ್ಕಿದೆ. ಸಂಪರ್ಕಿಸಿ :
89704 95290, 99862 04090

**ಮನೆ ಬಾಡಿಗೆಗೆ / ಲೀಸ್‌ಗೆ**
ಆಂಜನೇಯ ಬಡಾವಣೆಯಲ್ಲಿ ಮೊದಲನೇ ಮಹಡಿ ದಕ್ಷಿಣಕ್ಕೆ, 2 ಬೆಡ್ ರೂಂ (ಸಸ್ಯಹಾರಿಗಳಿಗೆ ಮಾತ್ರ), ವಿನಾಯಕ ಬಡಾವಣೆಯಲ್ಲಿ, ಶಿವಕುಮಾರ ಸ್ವಾಮಿ ಬಡಾವಣೆಯಲ್ಲಿ 3-2 ಬೆಡ್ ರೂಂ ಮನೆಗಳು.
ಸ್ವಾಮಿ ಏಜೆಂಟ್, ವಿದ್ಯಾನಗರ
97421-44715

**ಬೇಕಾಗಿದ್ದಾರೆ**
ಬೆಂಗಳೂರಿನಲ್ಲಿ ಕಾರ್ ಡ್ರೈವರ್ ಕಮ್ ಸೆಕ್ಯೂರಿಟಿ, ಆಟೋಮೆಟಿಕ್ ಗೇರ್ ಅನುಭವ ಇರಬೇಕು. ಸಂಬಳ 16,000/- OT ಸಿಗುತ್ತದೆ. ವಸತಿ ಸೌಲಭ್ಯವಿದೆ.
97400 98047

**ಬೇಕಾಗಿದ್ದಾರೆ**
ಪಿಯುಸಿ ಆಗಿರುವ ಹುಡುಗರು/ ಹುಡುಗಿಯರು ಕೌಂಟರ್ ಸೇಲ್ಸ್‌ಮನ್ ಹುದ್ದೆಗೆ ಬೇಕಾಗಿದ್ದಾರೆ. ಬಯೋಡಾಟಾ, ಪರಿಚಯಸ್ಥರೊಂದಿಗೆ ಸಂಪರ್ಕಿಸಿ :
ಆರ್ಚೀಸ್ ಗ್ಯಾಲರಿ
ಶರಾವತಿ ಲೇಡಿಸ್ ಹಾಸ್ಟೆಲ್ ಎದುರು, ಮಾಮಾಸ್ ಜಾಯಿಂಟ್ ರಸ್ತೆ, ದಾವಣಗೆರೆ.
ಮೊ : 96324-33166

**ಮನೆ ಲೀಸ್‌ಗೆ ಇದೆ**
ಮಹಾಲಕ್ಷ್ಮಿ ಬಡಾವಣೆಯಲ್ಲಿ (ಶಿವಗಂಗೆ ಚೌಟ್ರಿಯಿಂದ 1 ಕಿಲೋಮೀಟರ್ ದೂರ) 30x50, 2 ಬೆಡ್ರೂಂ, ಪೂರ್ವ ಸೈಟ್, ಉತ್ತರ ಬಾಗಿಲು, ಬೋರ್‌ವೆಲ್ ಸೌಲಭ್ಯವಿದೆ.
(ಸಸ್ಯಹಾರಿಗಳಿಗೆ ಮಾತ್ರ)
98455 84489

**ಬಿಲ್ಲಿಂಗ್‌ಗೆ ಬೇಕಾಗಿದ್ದಾರೆ**
ಬಟ್ಟೆ ಅಂಗಡಿಯಲ್ಲಿ ಬಿಲ್ಲಿಂಗ್ ಮಾಡಲು ಪುರುಷ ಅಭ್ಯರ್ಥಿಗಳು ಬೇಕಾಗಿದ್ದಾರೆ. ಸಂಪರ್ಕಿಸಿ ;
90367-34919

**ಸೈಟುಗಳು ಮಾರಾಟಕ್ಕಿವೆ**
ವಿವೇಕಾನಂದ ಬಡಾವಣೆಯಲ್ಲ ಕೃಷಿ ಕೇಂದ್ರ ಹಿಂಭಾಗ 40x60 West, 30x54 North, 30x70 North.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಕಮರ್ಷಿಯಲ್ ಸೈಟುಗಳು ಮಾರಾಟಕ್ಕಿವೆ**
24.50x40 South, 24.50x40 ಅಕ್ಕ-ಪಕ್ಕ ಭಗೀರಥ ಸರ್ಕಲ್ ಹತ್ತಿರ 29x28 East-South Corner, ವಿದ್ಯಾನಗರ ಮೇನ್ ರೋಡಿಗಿದೆ.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಕೆಲಸಕ್ಕೆ ಬೇಕಾಗಿದ್ದಾರೆ**
ಸಮರ್ಥ ಸಲ್ಯೂಷನ್ & ಸರ್ವೀಸ್ ಬಾಪೂಜಿ ಆಸ್ಪತ್ರೆಯಲ್ಲಿ ಆಯಾ, ವಾರ್ಡ್ ಬಾಯ್ ಬೇಕಾಗಿದ್ದಾರೆ. ಆಕರಷಕ ಸಂಬಳ. PF, ESI ಸೌಲಭ್ಯವಿರುತ್ತದೆ.
99860 88996

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಮಹಿಳಾ ಮತ್ತು ಪುರುಷ ಅಭ್ಯರ್ಥಿಗಳು ಬೇಕಾಗಿದ್ದಾರೆ. ಪುರುಷ ಅಭ್ಯರ್ಥಿಗಳಿಗೆ ಊಟ ಮತ್ತು ವಸತಿ ಸೌಲಭ್ಯವಿದೆ. ಸಂಪರ್ಕಿಸಿ :
98442 94446

**ಹೆಲ್ಮೆಟ್‌ಗಳು ದೊರೆಯುತ್ತವೆ**
ನಮ್ಮಲ್ಲಿ ಎಲ್ಲಾ ತರಹದ ISI ಮಾರ್ಕ್ ಹೆಲ್ಮೆಟ್‌ಗಳು ಹೋಲ್‌ಸೇಲ್ ದೊರೆಯುತ್ತವೆ.
ಅಶೋಕಾ'ಸ್,
ಅಶೋಕ ಟಾಕೀಸ್ ಬಿಲ್ಡಿಂಗ್, ರೈಲ್ವೆ ಗೇಟ್ ಹತ್ತಿರ, ದಾವಣಗೆರೆ
VEGA, Steel Bird, Gliders

**ಮನೆ ಬಾಡಿಗೆಗೆ ಇದೆ**
#21, ಹೊಸ ಮಹಡಿ ಮನೆ ಬಾಡಿಗೆಗಿದೆ ದೇವರಾಜ್ ಅರಸ್ ಬಡಾವಣೆ, ಎ ಬ್ಲಾಕ್, 5ನೇ ಕ್ರಾಸ್, ದಾವಣಗೆರೆ.
99012 47050
72040 22829

**ಬೇಕಾಗಿದ್ದಾರೆ**
ಸೇವಾ ಸಿಂಧೂ ಆಫೀಸ್
ಕೆಲಸಕ್ಕೆ ಹುಡುಗಿಯರು ಬೇಕಾಗಿದ್ದಾರೆ.
89516 67605

**ಜಮೀನು ಮಾರಾಟಕ್ಕಿದೆ**
4 ಎಕರೆ 03 ಗುಂಟೆ ಫಸಲಿಗೆ ಬಂದಿರುವ ತೆಂಗಿನ ತೋಟ 2 ಎಕರೆ 09 ಗುಂಟೆ ಖಾಲಿ ಜಮೀನು ಬೋರ್‌ವೆಲ್ ಸೌಲಭ್ಯವಿದೆ. ಹೊಳಲ್ಕೆರೆ ತಾಲ್ಲೂಕು ಬಿ. ದುರ್ಗ ಹೋಬಳಿ ಹಿರೇಎಮ್ಮಿಗನೂರು (ಪರಿಶಿಷ್ಟ ಜಾತಿಗೆ ಸೇರಿದೆ)
91411 69457

**1st Floor Office for Rent**
ಮಳಿಗೆ ಆಫೀಸ್‌ಗೆ ಬಾಡಿಗೆಗಿದೆ
11x20
#628/14, Manasa Complex, Nittuvalli Road, Near Jayadeva Circle, Davangere.
84535 30199, 98454 56630

**ಸೈಟ್ ಮತ್ತು ಮನೆಗಳು ಮಾರಾಟಕ್ಕಿವೆ**
MCC 'B' 40x60 ಪಶ್ಚಿಮ, MCC 'B' 40x60 ಉತ್ತರ ಮನೆ, MCC 'B' 40x60 ಪೂರ್ವ ಸೈಟ್.
ಏಜೆಂಟರು
81231 15137

**ಕೆಲಸಕ್ಕೆ ಬೇಕಾಗಿದ್ದಾರೆ**
ವರ್ಕ್ ಫ್ರಮ್ ಹೋಮ್ (ಟೆಲಿ ಕಾಲಿಂಗ್) ಆಫೀಸ್ ವರ್ಕ್ (ಟೆಲಿ ಕಾಲಿಂಗ್) ವಿದ್ಯಾರ್ಹತೆ : SSLC Pass/Pail ವೇತನ 5000-8000
77602 57006

**ಮಳಿಗೆ ಮತ್ತು ಆಫೀಸ್ ಬಾಡಿಗೆಗೆ ದೊರೆಯುತ್ತವೆ**
ನರಸರಾಜ ರಸ್ತೆ, ಡೋರ್ ನಂ. 181/1 to 3E ಮತ್ತು 181/1 to 3F, ಮಳಿಗೆ 12x15, ಆಫೀಸ್ 15x25 ಅಡಿವುಳ್ಳ. ರವಿ ನರ್ಸಿಂಗ್ ಹೋಂ, ಡಾ|| ಎ. ಕೆಂಚಪ್ಪ ಆಸ್ಪತ್ರೆ ಪಕ್ಕ, ವಿಚಾರಿಸಿ. ಮಾಯಕೊಂಡ ಡಿ.ಟಿ.ಪಿ. ಸೆಂಟರ್,
98444 38007, 93425 85067

**WANTED**
Sales man Technical and hardware and surgical field
91649 23589, 76768 44100

**REQUIRED**
* Supervisor Male
* Tally Operator Male/Female
Minimum Age 30-40 years.
Working Hours 9.45 am to 7.45 pm
Walkin Interview :
SMS STEEL TRADERS
K.R. Road, Davanagere.
98800 64464, 96636 68784

**ಮನೆ ಬಾಡಿಗೆಗೆ ಇದೆ**
2 BHK ಕೆ.ಬಿ. ಬಡಾವಣೆ, ಅಜ್ಜಂಪುರ ಲೇಔಟ್, ದಾವಣಗೆರೆ.
ಸಸ್ಯಹಾರಿಗಳಿಗೆ ಮಾತ್ರ
ಸಂಪರ್ಕಿಸಿ :
98454 56639

**ಸೆಕ್ಯೂರಿಟಿ ಗಾರ್ಡ್ ಕೆಲಸಕ್ಕೆ ಬೇಕಾಗಿದ್ದಾರೆ**
ದಾವಣಗೆರೆ ಹಾಗೂ ರಾಮನಗರ ಲೋಕಿಕೆರೆ ರೋಡ್‌ನಲ್ಲಿ ಕೆಲಸಕ್ಕೆ ಬೇಕಾಗಿದ್ದಾರೆ. ಉತ್ತಮ ವೇತನದೊಂದಿಗೆ ESI, PF ಸೌಲಭ್ಯವಿರುತ್ತದೆ.
70012 87756

**WANTED**
Experienced Tally Operator. Part time job Attractive Salary
99728 25666

**WANTED**
Female front Executive for reputed veta Spoken English Centre.Contact with Resume
98450 40493, 97313 57714

**ಬೇಕಾಗಿದ್ದಾರೆ**
ಕ್ಲಿನಿಕ್ ನೋಡಿಕೊಳ್ಳುವುದಕ್ಕೆ ಮತ್ತು ಕಂಪ್ಯೂಟರ್ ಬಿಲ್ಲಿಂಗ್ ಅನುಭವವುಳ್ಳವರು.
ವಿದ್ಯಾರ್ಹತೆ : SSLC, LAB / X-Ray tech , Any Degree
ಸ್ಥಳ : 6ನೇ ಕ್ರಾಸ್ 8ನೇ ಮೇನ್, ಪಿ.ಜೆ. ಬಡಾವಣೆ, ಕೃಷ್ಣ ಬೇಕರಿ ಕೆಳಗಡೆ, ದಾವಣಗೆರೆ
75610 51239

**WANTED TEACHERS**
ANY DEGREE WITH EXCELLENT COMMUNICATION IN ENGLISH. DAVANAGERE.
99641 10736

**ಪ್ರವಾಸ**
21.03.2025 (8 ದಿನಗಳು) ದೆಹಲಿ, ಆಗ್ರಾ, ಪ್ರಯಾಗ್‌ರಾಜ್, ಅಯೋಧ್ಯೆ, ಕಾಶಿ ನೈಮಿಷಾರಣ್ಯ
08.04.2025 (6 ದಿನಗಳು) ಪುರಿ ಜಗನ್ನಾಥ, ಕಲ್ಕತ್ತಾ
22.04.2025 (8 ದಿನಗಳು) ಜಾರ್ಖಂಡ್ ವೈದ್ಯನಾಥ, ಕಾಶಿ, ಗಯಾ, ಅಯೋಧ್ಯೆ, ಪ್ರಯಾಗ್‌ರಾಜ್, (2 ಜ್ಯೋತಿರ್ಲಿಂಗ ಪುಣ್ಯ ದರ್ಶನ)
03.05.2025 (3 ದಿನಗಳು) ಶ್ರೀಶೈಲ-ಮಂತ್ರಾಲಯ
13.05.2025 (6 ದಿನಗಳು) ಶಿರಡಿ, ಪಂಡರಾಪುರ
ಮಲ್ಲಿಕಾರ್ಜುನ ಪ್ಯಾಕೇಜ್ ತುಮಕೂರು
84960 44942

**ಪತ್ರಕಳೆದಿದೆ**
ಬಿ. ಮಂಜುನಾಥ ಬಿನ್ ಬಸವರಾಜಪ್ಪ ಹೆಚ್. ಕಲಪನಹಳ್ಳಿ ಗ್ರಾಮದ ದಾವಣಗೆರೆ ತಾಲ್ಲೂಕು ಜಿಲ್ಲೆ. ನಾನು ನಮ್ಮ ಗ್ರಾಮದಲ್ಲಿ ಜೆರಾಕ್ಸ್ ಮಾಡಲು ಹೋದಾಗ ನಮ್ಮ ಅಜ್ಜಿಯವರ ಜಮೀನಿನ ಪಾಲುವಿಭಾಗ ಪತ್ರ ಸಂಖ್ಯೆ SR No. 3198/1962-63 ಸಂಖ್ಯೆಯ ಪತ್ರವು ಕಳೆದು ಹೋಗಿರುತ್ತದೆ.

**ಬೋರ್‌ವೆಲ್ ಪಾಯಿಂಟ್**
ಅಂತರ್ಜಲ ಸಂಶೋಧನೆ (Ground Water) ಬೋರ್‌ವೆಲ್ ಪಾಯಿಂಟ್‌ಗಾಗಿ ಸಂಪರ್ಕಿಸಿ :
ಎಂ.ಟಿ. ಬಸವರಾಜು ಎಂ.ಎಸ್ಸಿ ಭೂ ವಿಜ್ಞಾನಿಗಳು
94492 02888
86608 03384

**ಬೆಂಗಳೂರಿನಲ್ಲಿ ಬಿಲ್ಡಿಂಗ್ ಮೇಲ್ವಿಚಾರಕರು ಬೇಕಾಗಿದ್ದಾರೆ**
12 ಗಂಟೆಗಳ ಕೆಲಸ, ಇಂಗ್ಲೀಷ್ ಮತ್ತು ಬೇಸಿಕ್ ಕಂಪ್ಯೂಟರ್ ಜ್ಞಾನ ಅಗತ್ಯವಿದೆ. ಸಂಬಳ 15000/- ಬೈಕ್ ಓಡಿಸಬೇಕು. ವಸತಿ ಇದೆ.
97400 98047

**WANTED**
Staff need to work in modular factory
Salary 10k
AAKAR MODULAR
99803 39333

**ಬೇಕಾಗಿದ್ದಾರೆ**
1) ಆರ್ಡರ್ ಬುಕ್ಕಿಂಗ್ ಬಾಯ್ಸ್ - ಪಿಯುಸಿ/sslc
2) ಆಪೇ ಆಟೋ ಡ್ರೈವರ್ - ಲೈಸನ್ಸ್ ಹಾಗು ಅನುಭವವುಳ್ಳವರು
ಸ್ವವಿವರದೊಂದಿಗೆ ಸಂಪರ್ಕಿಸಿ :
ಎ.ಕೆ. ಟ್ರೇಡರ್ಸ್
ಬಾಪೂಜಿ ಆಸ್ಪತ್ರೆ ರಸ್ತೆ, ಪಿ.ಜೆ.ಬಡಾವಣೆ, ದಾವಣಗೆರೆ.

**ಮೆಮೋರಿ ಟ್ರೈನಿಂಗ್ ಸೆಂಟರ್**
ಓದಿದ್ದು ನೆನಪಿನಲ್ಲಿ ಉಳಿಯುತ್ತಿಲ್ಲವೇ ? ಸಂಪರ್ಕಿಸಿ :
ಮೆಮೋರಿ ಟ್ರೈನಿಂಗ್ ಸೆಂಟರ್
ಆಂಜನೇಯ ಬಡಾವಣೆ
77600 70828

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ. ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
80739 48857

**ಶ್ರೀ ನಂದಿನಿ ಮಿಲ್ಕ್ ಡೈರಿ**
7ನೇ ಕ್ರಾಸ್, 7ನೇ ಮೇನ್ , ಚೇತನಾ ಹೋಟೆಲ್ ರಸ್ತೆ, ಪಿ.ಜೆ.ಬಡಾವಣೆ, ದಾವಣಗೆರೆ. ಸ್ವೀಟ್ ಸ್ಟಾಲ್‌ಗಳಿಗೆ ಹಾಗೂ ಸಿಹಿ ಪದಾರ್ಥಗಳನ್ನು ತಯಾರಿಸಲು, ಶುಭ ಸಮಾರಂಭಗಳಿಗೆ ನಮ್ಮಲ್ಲಿ ಪರಿಶುದ್ಧ ಹಾಗೂ ತಾಜಾ ಕೋವಾ ದೊರೆಯುತ್ತದೆ. ಬೆಣ್ಣೆ ಹಾಗೂ ತುಪ್ಪಗಳಿಗೂ ಸಂಪರ್ಕಿಸಿ :
99169 33905

**ಸೈಟುಗಳು ಮಾರಾಟಕ್ಕಿವೆ**
SS B 40x66 ಪಶ್ಚಿಮ, SS B 35x70 ಪೂರ್ವ, 40x60 ದಕ್ಷಿಣ, SS B ಬನಶಂಕರಿ ಬಡಾವಣೆ 30x65 ಪೂರ್ವ.
ಏಜೆಂಟರು
81231 15137

**WANTED**
Banking Sector Tele Caller
(Female Only)
Qualfication : Any Degree
98448 58248
Interview Time : 11AM

**ಬೇಕಾಗಿದ್ದಾರೆ**
ಬೆಂಗಳೂರಿನಲ್ಲಿ ಮನೆ ಕೆಲಸ ಮಾಡಿಕೊಂಡು ಇರುವ ಲಿಂಗಾಯತ ಮಹಿಳೆ ಬೇಕಾಗಿದ್ದಾರೆ. ಸಂಪರ್ಕಿಸಿ :
98448 61197
99647 43661

**Avoid Mosquiteos**
Mosquito Nets for doors & windows
Sri Gowri Enterprises
#7C2, 4th cross Near Shaneshwara Temple Karur Industrial Area, P.B Road, Davanagere -577006
72049 94628

**Change of Name**
I, VARSHA SHANKAR WALI residing at No.1181, Kallamma Nilaya,6 th cross, Taralabalu Badavane, Vidyanagara, Davanagere. I have changed my name as VARSHA WALI (New Name) vide affidavit on 07/02/2025 Sworn before Notary H.M. Doddagowdar, Davangere. In future all my dealings and transactions will be in my new name.
Sd/- VARSHA WALI

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು, ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಆ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**CHANGE OF NAME**
I D. GOVINDARAJU (DESIREDDY GOVINDARAJU) PREVIOUSLY CALLED D. GOVINDARAJ (DESIREDDY GOVINDARAJ) RESIDENT OF 1599/25 RUTHU NILAYA C BLOCK JEEVAN BHIMA NAGARA, SARASWATHI LAYOUT, DAVANGERE - 577005 HAVE CHANGED MY NAME AS D. GOVINDARAJU VIDE AFFIDAVIT DATED 27-02-2025 SWORN BEFORE NOTARY B.G. REVANASIDDAPPA HENCE FORTH ALL MY TRANSACTIONS & DEALINGS WILL BE IN MY NEW NAME D. GOVINDARAJU

**TUITIONS**
Class 1-10
(State/CBSE / ICSE / IGCSE / Olympiad
PU 1-2 (PCMB)
Supplementary
98444 92888

**ವಾಟರ್ ಲೀಕೇಜ್**
(ವಾಟರ್ ಪ್ರೂಫಿಂಗ್)
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
95387 77582
ಕೆಲಸ 100% ಗ್ಯಾರಂಟಿ.

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, KSRTC ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ. 4 ಮತ್ತು 18 ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ|| ಎಸ್.ಎಂ. ಸೇಠಿ. ಫೋ. : 96322 95561
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ

**ಶ್ರೀ ಗುರು ಶಾಂತವೀರೇಶ್ವರ ಸೇವಾ ಸಮಿತಿ (ರಿ.)**
ವೀರಶೈವ/ಲಿಂಗಾಯತ ವಧು-ವರರ ಅನ್ವೇಷಣಾ ಕೇಂದ್ರ
(ಕಳೆದ 21ನೇ ವರ್ಷಗಳ ಸೇವೆಯಲ್ಲಿ)
ದಾವಣಗೆರೆ, ಶಿವಮೊಗ್ಗ, ಸಾಗರ, ಬೆಂಗಳೂರು ಹಾಗೂ 10 ಶಾಖಾ ಕಛೇರಿ ಹೊಂದಿರುವ ನಮ್ಮಲ್ಲಿ ಎಲ್ಲಾ ತರಹದ ವೀರಶೈವ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಸಿದ್ದವೀರಪ್ಪ ಬಡಾವಣೆ, ದಾವಣಗೆರೆ.
ಮೊ: 94481 59303, 80509 52637

**ಅಧಿಕೃತ ಚೀಟಿ ಸಂಸ್ಥೆ**
ರೂ. 5 ಲಕ್ಷ ಚೀಟಿ ಪ್ರಾರಂಭ 50 ಸದಸ್ಯರು 6,500/- ರಿಂದ 10,000 /- ರೂ ವರೆಗೆ,
ಸ್ಕಂದ ಚಿಟ್ ಫಂಡ್ಸ್- (ರಿ)
ದಾವಣಗೆರೆ.
78997 75159

# 15 ರಂದು ಸರ್ಕಾರಿ ಐಟಿಐ ಕಾಲೇಜಿನಲ್ಲಿ ಉದ್ಯೋಗ ಮೇಳ



## 3 ಸಾವಿರ ಉದ್ಯೋಗಗಳ ಭರ್ತಿಗೆ ಕ್ರಮ : ಸಂಸದೆ ಡಾ. ಪ್ರಭಾ ಮಲ್ಲಿಕಾರ್ಜುನ್

ದಾವಣಗೆರೆ, ಮಾ. 4 - ಎಸ್ಸೆಸ್ಸೆಲ್ಸಿಯಿಂದ ಪದವಿ, ಸ್ನಾತಕೋತ್ತರ ಪದವಿ ಸೇರಿದಂತೆ ಐಟಿಐ, ಡಿಪ್ಲೊಮಾ, ಇಂಜಿನಿಯರಿಂಗ್ ವೃತ್ತಿಪರ ಕೋರ್ಸ್‌ಗಳನ್ನು ಪಡೆದವರಿಗೆ ವಿವಿಧ ಕಂಪನಿಗಳಲ್ಲಿ ಅವಶ್ಯವಿರುವ 3 ಸಾವಿರ ಹುದ್ದೆಗಳ ಭರ್ತಿಗೆ ಇದೇ ದಿನಾಂಕ 15 ರಂದು ಜಿಲ್ಲಾಮಟ್ಟದ ಬೃಹತ್ ಉದ್ಯೋಗ ಮೇಳ ಏರ್ಪಡಿಸಿದ್ದು ಜಿಲ್ಲೆಯ ಯುವಕ, ಯುವತಿಯರು ಇದರ ಲಾಭ ಪಡೆಯ ಬೇಕೆಂದು ಲೋಕಸಭಾ ಸದಸ್ಯೆ ಡಾ. ಪ್ರಭಾ ಮಲ್ಲಿಕಾರ್ಜುನ್ ತಿಳಿಸಿದರು.

ಉದ್ಯೋಗ ಮೇಳದ ಪೋಸ್ಟರನ್ನು ತಮ್ಮ ಗೃಹ ಕಚೇರಿಯಲ್ಲಿ ಬಿಡುಗಡೆ ಮಾಡಿ ಅವರು ಮಾತನಾಡಿದರು.

ಜಿಲ್ಲಾ ಆಡಳಿತ, ಜಿಲ್ಲಾ ಪಂಚಾಯತ್, ಕೌಶಲ್ಯಾಭಿವೃದ್ದಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯಿಂದ ಹದಡಿ ರಸ್ತೆಯಲ್ಲಿನ ಸರ್ಕಾರಿ ಐಟಿಐ ಕಾಲೇಜು ಆವರಣದಲ್ಲಿ ಏರ್ಪಡಿಸಲಾಗಿದೆ.

ದಾವಣಗೆರೆ ನಗರ ಜವಳಿ ಕ್ಷೇತ್ರದಲ್ಲಿ ಪ್ರಸಿದ್ದಿಯನ್ನು ಪಡೆಯುವ ಮೂಲಕ ಮ್ಯಾಚೆಸ್ಟರ್ ಎಂದೇ ಹೆಸರು ಗಳಿಸಿತ್ತು. ಈಗ ಶಿಕ್ಷಣ ಕ್ಷೇತ್ರದಲ್ಲಿ ಹೆಸರು ಪಡೆದಿದೆ. ದಾವಣಗೆರೆ ಐಟಿಐನಿಂದ ಡಿಪ್ಲೊಮಾ, ಇಂಜಿನಿಯರಿಂಗ್, ಮೆಡಿಕಲ್ ಕ್ಷೇತ್ರದಲ್ಲಿ ಸಾಕಷ್ಟು ಅಭಿವೃದ್ದಿ ಹೊಂದಿದೆ. ಜೊತೆಗೆ ಕೃಷಿಯಲ್ಲಿಯೂ ಜಿಲ್ಲೆ ಸಾಕಷ್ಟು ಅಭಿವೃದ್ದಿ ಹೊಂದಿದೆ.

ಉನ್ನತ ಶಿಕ್ಷಣ ಪಡೆದವರು ಉದ್ಯೋಗಕ್ಕಾಗಿ ಹೊರ ದೇಶಗಳಿಗೆ ಹೋಗಲಿದ್ದು, ಇಲ್ಲಿನ ಮಾನವ ಸಂಪನ್ಮೂಲ ಬೇರೆ ಕಡೆ ಬಳಕೆಯಾಗುವ ಬದಲು ಇಲ್ಲಿಯೇ ಬಳಕೆಯಾಗುವುದರಿಂದ ಇನ್ನಷ್ಟು ಅಭಿವೃದ್ದಿ ಹೊಂದಲು ಸಾಧ್ಯವಾಗಲಿದೆ. ಇಂತಹ ಬೃಹತ್ ಉದ್ಯೋಗ ಮೇಳಗಳ ಮೂಲಕ ಜಿಲ್ಲೆಯ ಯುವಕ, ಯುವತಿಯರಿಗೆ ಅನುಕೂಲವಾಗಲಿದೆ ಎಂದರು.

ಜಿಲ್ಲಾ ಪಂಚಾಯತ್ ಯೋಜನಾ ನಿರ್ದೇಶಕರಾದ ರೇಷ್ಮಾ ಕೌಸರ್, ಕೌಶಲ್ಯಾಭಿವೃದ್ದಿ ಅಧಿಕಾರಿ ಶಿವಕುಮಾರ್, ಜಿಲ್ಲಾ ಉದ್ಯೋಗಾಧಿಕಾರಿ ಡಿ. ರವೀಂದ್ರ, ದವನ್ ಕಾಲೇಜಿನ ಕಾರ್ಯದರ್ಶಿ ವೀರೇಶ್ ಪಟೇಲ್, ದಾವಣಗೆರೆ ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸದಸ್ಯ ಎನ್.ಪಿ. ಪ್ರಶಾಂತ್, ಯುವ ಕಾಂಗ್ರೆಸ್ ಮುಖಂಡ ಶ್ರೀಕಾಂತ್ ಬಗರೆ ಸೇರಿದಂತೆ ವಿವಿಧ ಅಧಿಕಾರಿಗಳು ಉಪಸ್ಥಿತರಿದ್ದರು.

# ಅನುದಾನ ದುರ್ಬಳಕೆ ; ಎಸ್ಸಿ, ಎಸ್ಟಿ ಸಮುದಾಯಗಳಿಗೆ ಅನ್ಯಾಯ

## ರಾಜ್ಯ ಕಾಂಗ್ರೆಸ್ ಸರ್ಕಾರದ ವಿರುದ್ಧ ನಗರದಲ್ಲಿ ಬಿಜೆಪಿ ಪ್ರತಿಭಟನೆ



ದಾವಣಗೆರೆ, ಮಾ. 4- ಎಸ್‌ಸಿಎಸ್‌ಪಿ ಮತ್ತು ಟಿಎಸ್‌ಪಿಗೆ ಮೀಸಲಿಟ್ಟ ಅನುದಾನವನ್ನು ಪಂಚ ಗ್ಯಾರಂಟಿ ಯೋಜನೆಗಳಿಗೆ ದುರ್ಬಳಕೆ ಮಾಡಿಕೊಂಡು ಎಸ್ಸಿ, ಎಸ್ಟಿ ಸಮುದಾಯಗಳಿಗೆ ಸರ್ಕಾರ ಅನ್ಯಾಯ ಮಾಡಿದೆ ಎಂದು ಆರೋಪಿಸಿ ರಾಜ್ಯ ಕಾಂಗ್ರೆಸ್ ಸರ್ಕಾರದ ವಿರುದ್ಧ ಬಿಜೆಪಿ ಮುಖಂಡರು, ಕಾರ್ಯಕರ್ತರು ಇಂದು ಬೃಹತ್ ಪ್ರತಿಭಟನೆ ನಡೆಸಿದರು.

ನಗರದ ಬಿಜೆಪಿ ಜಿಲ್ಲಾ ಕಾರ್ಯಾಲಯದಿಂದ ಉಪ ವಿಭಾಗಾಧಿಕಾರಿ ಕಚೇರಿವರೆಗೆ ಪ್ರತಿಭಟನಾ ಮೆರವಣಿಗೆ ನಡೆಸಿ, ಉಪ ವಿಭಾಗಾಧಿಕಾರಿಗಳ ಮೂಲಕ ರಾಜ್ಯಪಾಲರು ಮತ್ತು ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಲಾಯಿತು.

ಬಿಜೆಪಿ ಎಸ್ಟಿ ಮೋರ್ಚಾ ರಾಜ್ಯಾಧ್ಯಕ್ಷ ಬಂಗಾರು ಹನುಮಂತು ಮಾತನಾಡಿ, ಚುನಾವಣೆಯಲ್ಲಿ ಗೆಲುವ ಸಾಧಿಸುವ ಹಿನ್ನೆಲೆಯಲ್ಲಿ ಪಂಚ ಗ್ಯಾರಂಟಿ ಯೋಜನೆಗಳನ್ನು ಘೋಷಣೆ ಮಾಡಿದ್ದ ರಾಜ್ಯ ಸರ್ಕಾರ ಬಜೆಟ್‌ನಲ್ಲಿ 56 ಸಾವಿರ ಕೋಟಿ ರೂ. ಹಣವನ್ನು ಗ್ಯಾರಂಟಿ ಯೋಜನೆಗಳಿಗೆ ಮೀಸಲಿಡಲಾಗಿದೆ ಎಂದು ಹೇಳಿತ್ತು. ಆದರೆ 2023 ರಲ್ಲಿ 11 ಸಾವಿರ ಕೋಟಿ, 2024 ರಲ್ಲಿ 14, 200 ಕೋಟಿ ಅನುದಾನವನ್ನು ಎಸ್‌ಸಿಪಿ, ಟಿಎಸ್‌ಪಿ ಯಿಂದ ಬಳಕೆ ಮಾಡಿಕೊಳ್ಳುವ ಮೂಲಕ ಎಸ್ಸಿ, ಎಸ್ಟಿ ಸಮುದಾಯಗಳಿಗೆ ಅನ್ಯಾಯ ಮಾಡಿದೆ ಎಂದು ದೂರಿದರು.

ಈ ಬಾರಿಯ ಬಜೆಟ್‌ನಲ್ಲೂ 14,800 ಕೋಟಿ ಅನುದಾನ ಬಳಕೆ ಮಾಡಿಕೊಳ್ಳುವ ಹುನ್ನಾರ ಹೊಂದಿದೆ. ಅನುದಾನ ಬಳಕೆ ಮಾಡಿಕೊಂಡಿದ್ದೇ ಆದಲ್ಲಿ ರಾಜ್ಯ ವ್ಯಾಪಿ ಉಗ್ರ ಹೋರಾಟ ನಡೆಸುವುದಾಗಿ ಎಚ್ಚರಿಸಿದರು.

ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ 89 ಕೋಟಿಯಷ್ಟು ಅನುದಾನ ದುರ್ಬಳಕೆಯಾಗಿದೆ ಎಂದು ಸ್ವತಃ ಮುಖ್ಯಮಂತ್ರಿಯವರೇ ಒಪ್ಪಿಕೊಂಡಿದ್ದಾರೆ. ಸಾಮಾಜಿಕ ನ್ಯಾಯದ ಹರಿಕಾರ ಎಂದು ಹೇಳಿಕೊಳ್ಳುವ ಸಿದ್ಧರಾಮಯ್ಯ ಅವರು ದಲಿತರ ಸಮಗ್ರ ಅಭಿವೃದ್ಧಿಗೆ ಇರುವ ಅನುದಾನಕ್ಕೆ ಕತ್ತರಿ ಹಾಕಿದ್ದಾರೆ. ಹಣ ದುರ್ಬಳಕೆಯಾಗುತ್ತಿದ್ದರೂ ಸಚಿವರಾದ ಪ್ರಿಯಾಂಕ ಖರ್ಗೆ, ಮಹಾದೇವಪ್ಪ ಮತ್ತಿತರರು ಯಾಕೆ ಚಕಾರ ಎತ್ತುತ್ತಿಲ್ಲ ಎಂದು ಪ್ರಶ್ನಿಸಿದರು.

ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಪಿ. ರಾಜೀವ್ ಅವರು, 2023-24 ನೇ ಸಾಲಿನಲ್ಲಿ ಸುಮಾರು 25 ಕೋಟಿ ಹಣವನ್ನು ಕಾಂಗ್ರೆಸ್ ಸರ್ಕಾರ ಬೇರೆ ಬೇರೆ ಯೋಜನೆಗಳಿಗೆ ಬಳಸಿಕೊಂಡಿದೆ. ಎಸ್ಸಿ, ಎಸ್ಟಿ ಸಬಲೀಕರಣ, ಶಿಕ್ಷಣ, ಉದ್ಯೋಗ, ಸ್ವಾವಲಂಬನೆ ಮೂಲಕ ಪ್ರತಿ ವ್ಯಕ್ತಿ ಮತ್ತು ಕುಟುಂಬವನ್ನು ಸಶಕ್ತಗೊಳಿಸಬೇಕು. ದಲಿತಕೇರಿ, ಕಾಲೋನಿಗಳಿಗೆ, ಆದಿವಾಸಿ ಹಾಡಿಗಳಿಗೆ ಮೂಲ ಸೌಕರ್ಯ ಕಲ್ಪಿಸಬೇಕೆಂದು ಒತ್ತಾಯಿಸಿದರು.

ಮಾಜಿ ಸಚಿವ ಎಸ್.ಎ. ರವೀಂದ್ರನಾಥ್, ವಿಧಾನ ಪರಿಷತ್ ಮಾಜಿ ಮುಖ್ಯ ಸಚೇತಕ ಡಾ.ಎ.ಹೆಚ್. ಶಿವಯೋಗಿಸ್ವಾಮಿ, ಜಿಲ್ಲಾಧ್ಯಕ್ಷ ರಾಜಶೇಖರ ನಾಗಪ್ಪ, ಮಾಜಿ ಶಾಸಕರಾದ ಎಸ್.ವಿ. ರಾಮಚಂದ್ರ, ಹೆಚ್.ಪಿ. ರಾಜೇಶ್, ಎಂ. ಬಸವರಾಜನಾಯ್ಕ, ಮುಖಂಡರಾದ ಬಿ.ಎಂ. ಸತೀಶ್ ಕೊಳೇನಹಳ್ಳಿ, ಹೆಚ್.ಸಿ. ಜಯಮ್ಮ, ಶ್ರೀನಿವಾಸ ದಾಸಕರಿಯಪ್ಪ, ಲೋಕಿಕೆರೆ ನಾಗರಾಜ್, ಚಂದ್ರಶೇಖರ್ ಪೂಜಾರ್, ರಮೇಶ್ ನಾಯ್ಕ, ಅನಿಲ್ ಕುಮಾರ್ ನಾಯ್ಕ, ಕಡ್ಲೇಬಾಳು ಧನಂಜಯ, ಆರ್.ಎಲ್. ಶಿವಪ್ರಕಾಶ್, ಅಣ್ಣೇಶ್ ಐರಣಿ, ಕೃಷ್ಣಪ್ಪ, ಶಿವಾನಂದ್, ಎಸ್.ಟಿ. ವೀರೇಶ್, ವಿಶ್ವಾಸ್, ಕೊಟ್ರೇಶ್ ಗೌಡ್ರು, ಬಾತಿ ಚಂದ್ರಶೇಖರ್, ಭಾಗ್ಯ ಪಿಸಾಳೆ, ಶ್ರೀನಿವಾಸ್, ಟಿಂಕರ್ ಮಂಜಣ್ಣ, ಗಂಗಾಧರ್, ಹಾಲೇಶ್, ತರಕಾರಿ ಶಿವು, ಗುಬ್ಬಿ ಬಸವರಾಜ್ ಮತ್ತಿತರರು ಪಾಲ್ಗೊಂಡಿದ್ದರು.

# ನಗರದಲ್ಲಿ ಇಂದು ದೈಹಿಕ ಶಿಕ್ಷಣ ಶಿಕ್ಷಕರ ಕ್ರೀಡಾಕೂಟ

ಜಿಲ್ಲಾಡಳಿತದಿಂದ ದೈಹಿಕ ಶಿಕ್ಷಣ ಶಿಕ್ಷಕರ ಜಿಲ್ಲಾ ಮಟ್ಟದ ಕ್ರೀಡಾಕೂಟ ಸಮಾರಂಭವು ಇಂದು ಬೆಳಿಗ್ಗೆ 10.30ಕ್ಕೆ ಜಿಲ್ಲಾ ಕ್ರೀಡಾಂಗಣದಲ್ಲಿ ಜರುಗಲಿದೆ.

ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಕ್ರೀಡಾಕೂಟದ ಉದ್ಘಾಟನೆ ನೆರವೇರಿಸಲಿದ್ದು, ಮುಖ್ಯ ಅತಿಥಿಗಳಾಗಿ ಡಾ. ಪ್ರಭಾ ಮಲ್ಲಿಕಾರ್ಜುನ್, ದಿನೇಶ್ ಕೆ. ಶೆಟ್ಟಿ, ಜಿ.ಎಂ. ಗಂಗಾಧರಸ್ವಾಮಿ, ಸುರೇಶ್ ಬಿ. ಇಟ್ನಾಳ್, ರೇಣುಕಾ, ವೀರೇಶ್ ಎಸ್, ಓಡೇನಪುರ, ಜಿ. ಕೊಟ್ರೇಶ್ ಮತ್ತಿತರರು ಪಾಲ್ಗೊಳ್ಳಲಿದ್ದಾರೆ.

# ಆರೋಗ್ಯ ಇದ್ದರೆ ಮಾತ್ರ ದಾನ, ಜ್ಞಾನದ ಶ್ರೇಷ್ಠತೆ ಸಾಧ್ಯ

## ಉಕ್ಕಡಗಾತ್ರಿ : ಆರೋಗ್ಯ ಮೇಳದಲ್ಲಿ ಜೆ.ಸಿ. ಮಾಧುಸ್ವಾಮಿ ಅಭಿಮತ



ಮಲೇಬೆನ್ನೂರು, ಮಾ. 4 - ಈ ಹಿಂದೆ ದಾನ, ಜ್ಞಾನ, ಶ್ರೇಷ್ಠ ಎಂಬ ಭಾವನೆಯಿತ್ತು. ಈಗ ಆರೋಗ್ಯವೂ ಅತಿ ಶ್ರೇಷ್ಠ ಎಂಬಂತಾಗಿದ್ದು, ಆರೋಗ್ಯ ಚೆನ್ನಾಗಿದ್ದರೆ ದಾನ, ಜ್ಞಾನ ಎಲ್ಲವೂ ಸಾಧ್ಯ ಎಂದು ಮಾಜಿ ಸಚಿವ ಜೆ.ಸಿ. ಮಾಧುಸ್ವಾಮಿ ಹೇಳಿದರು.

ಅವರು ಸುಕ್ಷೇತ್ರ ಉಕ್ಕಡಗಾತ್ರಿಯಲ್ಲಿ ಪವಾಡ ಪುರುಷ ಶ್ರೀ ಗುರು ಕರಿಬಸವೇಶ್ವರ ಅಜ್ಜಯ್ಯನ ಮಹಾಶಿವರಾತ್ರಿ ಜಾತ್ರಾ ಮಹೋತ್ಸವದ ಅಂಗವಾಗಿ ದಾವಣಗೆರೆಯ ಎಸ್.ಎಸ್. ಕೇರ್ ಟ್ರಸ್ಟ್ ವತಿಯಿಂದ ಜೆಜೆಎಂ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಬಾಪೂಜಿ ಆಸ್ಪತ್ರೆ ಹಾಗೂ ಕಾಲೇಜು ಆಫ್ ಡೆಂಟಲ್ ಸೈನ್ಸ್ ಇವರ ಸಹಯೋಗದೊಂದಿಗೆ ಮಂಗಳವಾರ ಹಮ್ಮಿಕೊಂಡಿದ್ದ ಬೃಹತ್ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ದೀಪ ಬೆಳಗಿಸಿ ಉದ್ಘಾಟಿಸಿ, ಮಾತನಾಡಿದರು.

ಶ್ರೀಮಂತರು ದೊಡ್ಡ, ದೊಡ್ಡ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದುಕೊಳ್ಳುತ್ತಾರೆ. ಬಡವರ, ನಿರ್ಗತಿಕರ ಆರೋಗ್ಯದ ಬಗ್ಗೆ ಕಾಳಜಿ ವಹಿಸುವ ಅಗತ್ಯತೆ ಇದ್ದು, ಈ ನಿಟ್ಟಿನಲ್ಲಿ ಉಚಿತ ಆರೋಗ್ಯ ಶಿಬಿರಗಳು ಕಾರ್ಯನಿರ್ವಹಿಸಬೇಕು.

ಬಡವರಿಗೆ ಆರೋಗ್ಯದ ಬಗ್ಗೆ ಅರಿವು ಮೂಡಿಸಿ, ಅವರು ಆರೋಗ್ಯ ತಪಾಸಣೆ ಮಾಡಿಸಿಕೊಳ್ಳುವಂತೆ ಮಾಡಬೇಕು. 'ಪರೋಪ ಕಾರಂ ಇದ್ದ ಶರೀರಂ' ಎಂಬ ವಾಣಿಯಂತೆ ಈ ಬೃಹತ್ ಆರೋಗ್ಯ ಶಿಬಿರವನ್ನು ಹಮ್ಮಿಕೊಂಡಿರುವುದು ಶ್ಲಾಘನೀಯ ಎಂದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಗದ್ದಿಗೆ ಟ್ರಸ್ಟ್ ಕಮಿಟಿ ಕಾರ್ಯದರ್ಶಿ ಎಫ್. ಸುರೇಶ್ ಮಾತನಾಡಿ, ಮನುಷ್ಯನ ಎಲ್ಲಾ ಭಾಗ್ಯಗಳನ್ನು ನೋಡಬೇಕೆಂದರೆ ಆರೋಗ್ಯ ಭಾಗ್ಯ ಬಹಳ ಮುಖ್ಯ ಎಂದರು.

ಟ್ರಸ್ಟ್ ಕಮಿಟಿ ಟ್ರಸ್ಟಿ ಜಿಗಳಿ ಇಂದೂಧರ್ ಮಾತನಾಡಿ ದರು. ಜೆಜೆಎಂ ಮೆಡಿಕಲ್ ಕಾಲೇಜಿನ ಸಹಾಯಕ ಪ್ರಾಧ್ಯಾಪಕ ಡಾ. ಪುನೀತ್, ಕಾಲೇಜು ಆಫ್ ಡೆಂಟಲ್ ಸೈನ್ಸ್ ಪ್ರಾಧ್ಯಾಪಕ ಡಾ. ಪ್ರಶಾಂತ್, ಎಸ್.ಎಸ್. ಕೇರ್ ಟ್ರಸ್ಟಿನ ಹರೀಶ್, ಶ್ರೀಮತಿ ತ್ರಿವೇಣಿ ಮಾಧುಸ್ವಾಮಿ, ಗದ್ದಿಗೆ ಟ್ರಸ್ಟ್ ಕಮಿಟಿಯ ಟ್ರಸ್ಟಿ ಗದಿಗೆಯ್ಯ ಪಾಟೀಲ್, ವಕೀಲ ನಂದಿತಾವರೆ ತಿಮ್ಮನಗೌಡ ಶ್ರೀಮತಿ ಶೋಭಾ ಇಂದೂಧರ್ ವೇದಿಕೆಯಲ್ಲಿದ್ದರು.

**ವಿಶೇಷ ಪೂಜೆ :** ಜೆ.ಸಿ. ಮಾಧುಸ್ವಾಮಿ ಮತ್ತು ಶ್ರೀಮತಿ ತ್ರಿವೇಣಿ ದಂಪತಿ ಶ್ರೀಗುರು ಕರಿಬಸವೇಶ್ವರ ಅಜ್ಜಯ್ಯನ ಗದ್ದಿಗೆಗೆ ವಿಶೇಷ ಪೂಜೆ ಸಲ್ಲಿಸಿದರು.

# ದ್ವಿತೀಯ ಪಿಯುಸಿ ಪರೀಕ್ಷೆ : ಒಬ್ಬ ವಿದ್ಯಾರ್ಥಿಗೆ 20 ಜನ ಸಿಬ್ಬಂದಿ



ಜಗಳೂರು, ಮಾ. 4 - ಪಟ್ಟಣದ ನಾಲಂದ ಪದವಿ ಪೂರ್ವ ಕಾಲೇಜು ಪರೀಕ್ಷಾ ಕೇಂದ್ರದಲ್ಲಿ ಇಂದು ನಡೆದ ದ್ವಿತೀಯ ಪಿಯು 'ಸಂಸ್ಕೃತ ಭಾಷಾ' ಪರೀಕ್ಷೆಯಲ್ಲಿ ಇಡೀ ಪರೀಕ್ಷಾ ಕೇಂದ್ರಕ್ಕೆ ಒಬ್ಬನೇ ಅಭ್ಯರ್ಥಿ ಕಾರ್ತಿಕ್ ಇಂದು ಪರೀಕ್ಷೆ ಬರೆದಿದ್ದು ವಿಶೇಷವಾಗಿತ್ತು. ಪಲ್ಲಾಗಟ್ಟೆ ಸರ್ಕಾರಿ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಯಾಗಿರುವ ಕಾರ್ತಿಕ್, ಕಾಲೇಜಿನಲ್ಲಿ ಸಂಸ್ಕೃತ ಭಾಷೆ ತೆಗೆದುಕೊಂಡಿದ್ದು, ಪರೀಕ್ಷಾ ಕೇಂದ್ರ ನಾಲಂದ ಕಾಲೇಜು ನೀಡಲಾಗಿದೆ. ಇಡೀ ಪರೀಕ್ಷಾ ಕೇಂದ್ರಕ್ಕೆ ಇಂದು ಪರೀಕ್ಷೆ ಬರೆದ ಏಕೈಕ ವಿದ್ಯಾರ್ಥಿ ಕಾರ್ತಿಕ್.

ಒಬ್ಬನೇ ವಿದ್ಯಾರ್ಥಿ ಇದ್ದರೂ ಸಹ ಮೇಲ್ವಿಚಾರಕರು ಮತ್ತು ಪರೀಕ್ಷಾ ಮೇಲ್ವಿಚಾರಕರು, ಪೊಲೀಸ್ ಸೇರಿದಂತೆ ಒಟ್ಟು 20 ಜನ ಸಿಬ್ಬಂದಿ ವರ್ಗದವರು ಕಾರ್ಯ ನಿರ್ವಹಿಸಿದ್ದು ಅಪರೂಪದ ಸಂಗತಿ.

ಈ ಬಗ್ಗೆ 'ಜನತಾವಾಣಿ' ಯೊಂದಿಗೆ ಮಾಹಿತಿ ಹಂಚಿಕೊಂಡ ಪ್ರಾಂಶುಪಾಲ ಬಿ. ಎನ್.ಎಂ. ಸ್ವಾಮಿ, ಇಂದು ಇಡೀ ಪರೀಕ್ಷಾ ಕೇಂದ್ರಕ್ಕೆ ಒಬ್ಬನೇ ಅಭ್ಯರ್ಥಿ ಇದ್ದರೂ ಸಹ, ಆತನಿಗೆ ಯಾವುದೇ ಒತ್ತಡ ಆಗದಂತೆ ಸಹಜ ವಾತಾವರಣ ದಲ್ಲಿ ಯಶಸ್ವಿಯಾಗಿ ಪರೀಕ್ಷೆ ನಡೆಸಲಾ ಯಿತು. ಎಂದಿನಂತೆ ನಾವು ಸುಮಾರು 20 ಜನ ಸಿಬ್ಬಂದಿ ವರ್ಗದವರು ಕಾರ್ಯ ನಿರ್ವಹಿಸಿದೆವು ಎಂದು ತಿಳಿಸಿದರು.

# ಕರುಣಾ ಟ್ರಸ್ಟ್‌ನಿಂದ ಉಚಿತ ಮಜ್ಜಿಗೆ ವಿತರಣೆಗೆ ಚಾಲನೆ



ದಾವಣಗೆರೆ, ಮಾ. 4- ಬಡವರು, ನಿರ್ಗತಿಕರು, ಅಶಕ್ತರಿಗೆ ಯಾರೂ ನೆರವಾಗುತ್ತಾರೋ ಅಂತವರಿಗೂ ಒಳಿತಾಗುತ್ತದೆ. ದಾಸೋಹ ಸೇವೆಯಿಂದ ದೇವರು ಸಹ ಸಂತೃಪ್ತನಾಗುತ್ತಾನೆ. ದಾಸೋಹ ನಡೆಸುವ ಮನೆ ಕೈಲಾಸವಾಗಿರುತ್ತದೆ ಎಂದು ವಿರಕ್ತಮಠದ ಡಾ. ಶ್ರೀ ಬಸವಪ್ರಭು ಸ್ವಾಮೀಜಿ ಹೇಳಿದರು.

ನಗರದ ಜಯದೇವ ವೃತ್ತದ ಬಳಿ ಕರುಣಾ ಜೀವ ಕಲ್ಯಾಣ ಟ್ರಸ್ಟ್ ದಾನಿಗಳ ನೆರವಿನೊಂದಿಗೆ ಹಮ್ಮಿಕೊಂಡಿದ್ದ ಒಂದು ತಿಂಗಳ ಉಚಿತ ಮಜ್ಜಿಗೆ ವಿತರಣಾ ಕಾರ್ಯಕ್ರಮಕ್ಕೆ ಇಂದು ಚಾಲನೆ ನೀಡಿ ಅವರು ಮಾತನಾಡಿದರು.

ಹಸಿದವರಿಗೆ ಅನ್ನ ಹಾಕುವುದು ನೀರು, ಮಜ್ಜಿಗೆ ನೀಡಿ ಸಹಾಯ ಮಾಡುವವರು ಮಾತ್ರ ಹೃದಯಿಗಳು. ನಾವೆಲ್ಲರೂ ಸಹ ಇತರರಿಗೆ ಸಹಾಯ ಮಾಡುವ ಮೂಲಕ ಮಾತ್ರ ಹೃದಯಿಗಳಾಗೋಣ ಎಂದು ಆಶಿಸಿದರು.

ಇದೇ ವೇಳೆ ಸಮಾಜ ಸೇವಕರಾದ ಮಂಗಳಮುಖಿ ಸವಳಂಗದ ಮಂಜಮ್ಮ ಅವರನ್ನು ಗೌರವಿಸಲಾಯಿತು. ವರದಿಗಾರರ ಕೂಟದ ಅಧ್ಯಕ್ಷ ನಾಗರಾಜ್ ಎಸ್.ಬಡದಾಳ್ ಮಾತನಾಡಿದರು.

ಕರುಣಾ ಜೀವ ಕಲ್ಯಾಣ ಟ್ರಸ್ಟ್ ಅಧ್ಯಕ್ಷ ಡಾ. ಹೆಚ್.ಎನ್.ಮಲ್ಲಿಕಾರ್ಜುನ್ ಅಧ್ಯಕ್ಷತೆ ವಹಿಸಿದ್ದರು. ಕಾರ್ಯದರ್ಶಿ ಶಿವನಕೆರೆ ಬಸವಲಿಂಗಪ್ಪ,ಹೆಚ್.ಆರ್. ಉದಯಕುಮಾರ್, ಬಸವರಾಜ್, ಜಯಣ್ಣ ಮತ್ತಿತರರು ಉಪಸ್ಥಿತರಿದ್ದರು. ದೃಷ್ಟಿ ಕಣ್ಣಿನ ಆಸ್ಪತ್ರೆಯ ಡಾ. ಎಂ.ಹೆಚ್. ರವೀಂದ್ರನಾಥ್ ಮೊದಲ ದಿನದ ಮಜ್ಜಿಗೆ ವಿತರಣೆಯ ದಾನಿಗಳಾಗಿದ್ದರು.

# ಎಸ್ಸೆಸ್ ಕುಟುಂಬದಿಂದ ಕ್ರೀಡಾಪಟುಗಳಿಗೆ ಪ್ರೋತ್ಸಾಹ



ದಾವಣಗೆರೆ, ಮಾ. 4- ಜಿಲ್ಲೆಯ ಎಲ್ಲಾ ಕ್ರೀಡಾಪಟುಗಳಿಗೆ ಶಾಮನೂರು ಕುಟುಂಬದವರು ಪ್ರೋತ್ಸಾಹ ನೀಡುತ್ತಾ ಬಂದಿದ್ದಾರೆ ಎಂದು ಜಿಲ್ಲಾ ಕ್ರೀಡಾಪಟುಗಳ ಸಂಘದ ಅಧ್ಯಕ್ಷ ದಿನೇಶ್ ಕೆ. ಶೆಟ್ಟಿ ತಿಳಿಸಿದರು.

ಇಲ್ಲಿನ ಜಿಲ್ಲಾ ಕ್ರೀಡಾಂಗಣದಲ್ಲಿ ಕಳೆದ ಮೂರು ದಿನಗಳಿಂದ ಹಮ್ಮಿಕೊಂಡಿದ್ದ ಜನಪ್ರಿಯ ಪ್ರೀಮಿಯರ್ ಲೀಗ್ ಬಹುಮಾನ ವಿತರಣಾ ಸಮಾರಂಭದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ದಾವಣಗೆರೆಯಲ್ಲಿ ಎಲ್ಲಾ ಕ್ರೀಡಾಪಟುಗಳಿಗೂ ಉತ್ತೇಜನ ನೀಡುತ್ತಿರುವ ಶಾಮನೂರು ಶಿವ ಶಂಕರಪ್ಪನವರು ಮತ್ತು ಎಸ್‌ಎಸ್ ಮಲ್ಲಿಕಾರ್ಜುನ್ ಅವರು ಅನೇಕ ಕ್ರೀಡಾಪಟುಗಳಿಗೆ ಉದ್ಯೋಗ ನೀಡುವ ಮೂಲಕ ಪ್ರೋತ್ಸಾಹಿಸಿದ್ದರು ಎಂದರು.

ಮಲ್ಲಿಕಾರ್ಜುನ್ ಅವರು ಸಚಿವರಾಗಿದ್ದಾಗ ಕ್ರೀಡಾಪಟುಗಳಿಗೆ ಮೀಸಲಾತಿ ಕಲ್ಪಿಸುವ ಭರವಸೆ ನೀಡಿ, ಅದನ್ನು ಅನುಷ್ಠಾನಗೊಳಿಸಿದ ಕೀರ್ತಿ ಅವರಿಗೆ ಸಲ್ಲುತ್ತದೆ ಎಂದರು.

ಈ ಸಂದರ್ಭದಲ್ಲಿ ಜಿಲ್ಲಾ ಅಮೆಚೂರ್ ಕಬಡ್ಡಿ ಸಂಸ್ಥೆಯ ಎಂ.ನಾಗರಾಜ್, ದೊಡ್ಡಪ್ಪ, ಪ್ರಕಾಶ್ ಗೌಡ, ಕುರುಡಿ ಗಿರೀಶ್, ಸುರಭಿ ಶಿವಮೂರ್ತಿ, ಚಂದ್ರಣ್ಣ, ಕಬಡ್ಡಿ ಮಲ್ಲಿಕಾರ್ಜುನ್, ಶ್ರೀಶೈಲ, ಚಂದ್ರು, ರಾಕಿ, ಅನಿಲ್ ಹಾಗು ಕ್ರೀಡಾ ಪ್ರೋತ್ಸಾಹಕರು ಉಪಸ್ಥಿತರಿದ್ದರು.

ಈ ಪಂದ್ಯಾವಳಿಯಲ್ಲಿ ದಾವಣಗೆರೆಯ ಹ್ಯಾಪಿ ಗ್ರೂಪ್ 27-25 ಅಂಕಗಳಿಂದ ಎನ್.ಡಿ.ಗ್ರೂಪ್ ಬೇತೂರು ರಸ್ತೆ ಇವರನ್ನು ಮಣಿಸಿ ಪ್ರಥಮ ಸ್ಥಾನವನ್ನು ಪಡೆದರೆ, ಎನ್.ಡಿ.ಗ್ರೂಪ್ ಬೇತೂರು ರಸ್ತೆ ದ್ವಿತೀಯ ಸ್ಥಾನ ಪಡೆಯಿತು. ವಿ.ಆರ್.ಎನ್ ಗ್ರೂಪ್ ತೃತೀಯ ಸ್ಥಾನ, ಸ್ಟೋನ್ ಡಿಕೆಎಸ್ ತಂಡ ನಾಲ್ಕನೇ ಸ್ಥಾನಕ್ಕೆ ತೃಪ್ತಿ ಪಡೆದುಕೊಂಡವು.

# ಇಂದಿನ ಕಾನೂನು ಅಧಿಕಾರಿಗಳಿಗೋ ? ರಾಜಕಾರಣಿಗಳಿಗೋ ? ಜನಸಾಮಾನ್ಯರಿಗೋ ?

ಓದುಗರ ಪತ್ರ

ಮಾನ್ಯರೇ,

ಕಲಿಯುಗದ ಸಮಾಜದಲ್ಲಿ ನಾವುಗಳು ನೋಡುತ್ತಿರುವುದು ಲೋಕೋಭಿನ್ನರುಚಿ. ನಮ್ಮ ಸಂವಿಧಾನ ನಮ್ಮೆಲ್ಲರಿಗೂ ಸಮಾನತೆ ಕಲ್ಪಿಸಿದೆ ಎನ್ನುವ ವಿಚಾರವನ್ನು ನೀವೂ ನಂಬುತ್ತೀರಾ? ನಂಬುವುದಾದರೆ ಹೇಗೆ ನಂಬುತ್ತೀರಿ.

ನಮ್ಮ ರಾಜಕಾರಣಿಗಳು ಸಾರ್ವಜನಿಕ ಕಾರ್ಯಕ್ರಮದಲ್ಲಿ ಬೊಬ್ಬೆ ಹೊಡೆಯುತ್ತಾರೆ. ಸಮ ಸಮಾಜದ ಚಿಂತನೆ ನಮ್ಮ ಸರ್ಕಾರದ ಕನಸು, ಪ್ರತಿಯೊಬ್ಬರನ್ನು ಉದ್ಧರಿಸುವ ಭಾಗ್ಯಗಳನ್ನು ನಾವು ನೀಡುತ್ತಿದ್ದೇವೆ, ಆದರೆ ಬಸವಣ್ಣನವರ ಕಾಯಕ ಪ್ರಜ್ಞೆಯನ್ನು ಇಲ್ಲಿ ಕಾಣಲು ಸಾಧ್ಯವೇ, ನೀವೇ ಯೋಚಿಸಿ.!

ಕಲ್ಯಾಣ ಕಾರ್ಯಕ್ರಮಗಳು ಪ್ರತಿ ವರ್ಗಕ್ಕೂ ಮೂಲ ಸೌಕರ್ಯ ನೀಡುವ ಕಾರ್ಯಕ್ರಮಗಳಾಗಬೇಕು. ನಮ್ಮ ಆಲೋಚನೆಗೆ ಬಂದಿರುವುದು ನಿಮಗೂ ಬಂದಿದೆ ಎಂದುಕೊಳ್ಳುತ್ತೇನೆ. ಕಲ್ಯಾಣ ಕರ್ನಾಟಕವನ್ನು ಮುನ್ನಡೆಸುವ ಉನ್ನತ ವರ್ಗದ ಅಧಿಕಾರಿಗಳು ನೂರಕ್ಕೆ ತೊಂಬತ್ತೊಂಬತ್ತು ಮಂದಿ ಭ್ರಷ್ಟರು ಎನ್ನುವುದು, ನಮ್ಮ ನಿಮ್ಮೆಲ್ಲರ ವಾದವಲ್ಲವೇ.? ನಮ್ಮದು ಭ್ರಷ್ಟರೇ ತುಂಬಿರುವ ಸಮಾಜ ಎನ್ನುವುದಾದರೆ, ಸಂವಿಧಾನ ಯಾರ ಪರವಾಗಿದೆ.?

ಶೇ.99ರಷ್ಟು ಭ್ರಷ್ಟರನ್ನು ನಾವು, ನೀವೆಲ್ಲರೂ ಪೋಷಿಸುತ್ತಿದ್ದೇವೆ ಅಲ್ಲವೇ. ಇತ್ತೀಚೆಗೆ ಸಿರಿಗೆರೆ ಶ್ರೀಮಠದ ತರಳಬಾಳು ಹುಣ್ಣಿಮೆಯಲ್ಲಿ ಸುಪ್ರೀಂ ಕೋರ್ಟಿನ ನಿವೃತ್ತ ನ್ಯಾಯಮೂರ್ತಿಗಳು ಹೇಳುವ ಮಾತನ್ನು ಆಲಿಸಿದರೆ. ಭ್ರಷ್ಟ ಅಧಿಕಾರಿಗಳನ್ನು ನಾವುಗಳು ವೈಭವಿಕರಿಸುತ್ತಿದ್ದೇವೆ ಮತ್ತು ಬೆಂಬಲಿಸುತ್ತಿದ್ದೇವೆ. ಹೌದಲ್ಲವೇ.

ಇಲ್ಲಿಯವರೆಗೂ ಸಾವಿರಾರು ಉನ್ನತ ವರ್ಗದ ಅಧಿಕಾರಿಗಳ ಮನೆಗೆ ರೈಡ್ ಆಗಿ ಕೋಟ್ಯಾಂತರ ರೂ. ಸಂಪತ್ತನ್ನು ಲೋಕಾಯುಕ್ತ ಅಧಿಕಾರಿಗಳು ಅಕೌಂಟ್‌ನಲ್ಲಿ ಇಟ್ಟು ಕೋರ್ಟಿಗೆ ಚಾರ್ಜ್‌ಶೀಟ್ ಸಲ್ಲಿಸಿದ ಮೇಲೆಯೂ ಇವರಿಗೆ ಶಿಕ್ಷೆ ಆಗಿರುವುದನ್ನು ಎಲ್ಲಿಯಾದರೂ ನಾವುಗಳು ನೋಡಿರುವ ಉದಾಹರಣೆಗಳಿವೆಯೇ.? ಇದು ಸಮ ಸಮಾಜದ ಚಿಂತನೆಯೋ ನೀವೇ ಯೋಚಿಸಿ.

ಸಂವಿಧಾನ ಅಧಿಕಾರಿಗಳ ಪರವೋ ಅಥವಾ ಜನ ಸಾಮಾನ್ಯರ ಪರವೋ. ಸಮಾಜದಲ್ಲಿ ನಾವು ಬದಲಾಗಬೇಕೋ, ಕಾನೂನು ಬದಲಾಗಬೇಕೋ..? ಎಂತಹ ಸಮಾಜದಲ್ಲಿ ನಾವು ಬದುಕುತ್ತಿದ್ದೇವಲ್ಲ. ಮಕ್ಕಳಿಗೆ ಇಂತಹ ಸಮಾಜದಲ್ಲಿ ಎಂತಹ ಸಂಸ್ಕಾರ ಕಲಿಸಬೇಕು.

ಈ ಭ್ರಷ್ಟ ವ್ಯವಸ್ಥೆಯನ್ನು ನಮ್ಮಿಂದ ಕಿತ್ತೊಗೆಯಲು ಸಾಧ್ಯವಿಲ್ಲ ಎನ್ನುವ ಚಿಂತನೆ ಒಂದೆಡೆಯಾದರೆ. ಇವರನ್ನು ಶಿಕ್ಷಿಸಲು ವಿಶ್ವ ಶಕ್ತಿಯಿಂದ ಮಾತ್ರ ಸಾಧ್ಯ ಎನ್ನುವುದು ನಮ್ಮ ವಿಚಾರಧಾರೆ.

ಭ್ರಷ್ಟ ಸಮಾಜದಲ್ಲಿ ನಾವಿದ್ದೇವೆ ಎನ್ನುವುದಾದರೆ, ರಾಜಕಾರಣಿಗಳನ್ನು ಭ್ರಷ್ಟರನ್ನಾಗಿಸಿದ್ದು ಯಾರು.? ಚುನಾವಣಾ ನೀತಿ ಸಂಹಿತೆ ಕೇವಲ ಸಂವಿಧಾನದ ಸಂಹಿತೆಯಾಗಿದೆಯೋ ಅಥವಾ ಎಲ್ಲರ ನೀತಿ ಸಂಹಿತೆಯಾಗಿದೆಯೋ.?

ಇಂದು ನಾವುಗಳು ಭ್ರಷ್ಟತೆಯ ಮಧ್ಯೆ ಒಂದಿಷ್ಟು ಅಪರೂಪದ ಸಂಸ್ಕಾರವಂತರನ್ನು ನೋಡುತ್ತಿದ್ದೇವೆ. ಇವರುಗಳೇ ನಮ್ಮ ಆದರ್ಶ. ನಮ್ಮ ಪವಿತ್ರ ರಾಜ್ಯ ಸರ್ಕಾರವನ್ನು ಮುನ್ನಡೆಸುವ ಜನ ಪ್ರತಿನಿಧಿಗಳು ನಮ್ಮಗಳ ಮೂಗಿಗೆ ತುಪ್ಪ ಹಚ್ಚುವ ರೀತಿಯೇ ನಯನ ಮನೋಹರ ವಾಗಿದೆ. ಸತ್ವಯುತ ಪ್ರಜೆಗಳಾದ ನಮ್ಮನ್ನು ಎಂತಹ ಪ್ರಜೆಗಳನ್ನಾಗಿಸುತ್ತಿದ್ದಾರೆ. ಆಯ್ಕೆ ನಿಮ್ಮದು.!

ಒಬ್ಬೊಬ್ಬ ರಾಜಕಾರಣಿ ಸೂರ್ಯ ಮುಳುಗದ ಸಾಮ್ರಾಜ್ಯದಷ್ಟು ಬೇನಾಮಿ ಆಸ್ತಿ ಗಳಿಸಿ ವಿಜೃಂಭಿಸುತ್ತಿದ್ದಾರೆ. ಇವರು ಯಾವ ರೀತಿ ನಮ್ಮ ಆದರ್ಶ ಎನ್ನುವುದನ್ನು ನಾವುಗಳೇ ಆತ್ಮಾವಲೋಕನ ಮಾಡಿಕೊಳ್ಳುವ ಸಮಯ ಬಂದಿದೆ. ಹಾಗಾಗಿ ಸಮಾಜಮುಖಿಯಾಗಿ ಆಲೋಚಿಸಿ ಮುಂದಿನ ಬಾರಿಯಾದರೂ ನಮ್ಮನ್ನು ಮುನ್ನಡೆಸುವ ಉತ್ತಮ ಜನ ಪ್ರತಿನಿಧಿಯನ್ನು ಆರಿಸೋಣ. ಈ ನೆಲದ ಕಾನೂನು ಜನಸಾಮಾನ್ಯನ ಆಶಯಕ್ಕೆ ಧಕ್ಕೆ ಯಾಗದಿರಲಿ ಎಂಬುದು ನಮ್ಮಯ ಆಶಯ.

**- ದಿದ್ದಿಗೆ ಮಹದೇವಪ್ಪ,**
ಸಮಾನ ಮನಸ್ಕರು, 99726 99813

# 'ಶರಣ ಸಿರಿ' ಪ್ರಶಸ್ತಿ ಪ್ರದಾನ, ಯುವ ವೇದಿಕೆ ಪದಾಧಿಕಾರಿಗಳ ಪದಗ್ರಹಣ

ದಾವಣಗೆರೆ, ಮಾ. 4- ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಜಿಲ್ಲಾ ಘಟಕದ ವತಿಯಿಂದ ಇದೇ ದಿನಾಂಕ 6 ರಂದು ಗುರುವಾರ ಬೆಳಿಗ್ಗೆ 11 ಗಂಟೆಗೆ ನಗರದ ಕುವೆಂಪು ಕನ್ನಡ ಭವನದಲ್ಲಿ 'ಶರಣ ಸಿರಿ' ಪ್ರಶಸ್ತಿ ಪ್ರದಾನ, ದಾವಣಗೆರೆ ಜಿಲ್ಲಾ ಯುವ ವೇದಿಕೆಯ ನೂತನ ಪದಾಧಿಕಾರಿಗಳ ಪದಗ್ರಹಣ ಸಮಾರಂಭ ಏರ್ಪಡಿಸಲಾಗಿದೆ ಎಂದು ಪರಿಷತ್ ಜಿಲ್ಲಾಧ್ಯಕ್ಷ ಕೆ.ಬಿ.ಪರಮೇಶ್ವರಪ್ಪ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಸಾಣೇಹಳ್ಳಿ ಡಾ. ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಸಾನ್ನಿಧ್ಯ ವಹಿಸಿ, ಪ್ರಶಸ್ತಿ ಪ್ರದಾನ ಮಾಡಲಿದ್ದು, ಶರಣ ಸಾಹಿತ್ಯ ಪರಿಷತ್ ರಾಜ್ಯಾಧ್ಯಕ್ಷ ಡಾ. ಸಿ.ಸೋಮಶೇಖರ್ ಅಧ್ಯಕ್ಷತೆ ವಹಿಸಲಿದ್ದಾರೆ ಎಂದರು.

ಇದೇ ವೇಳೆ 'ಬಸವಣ್ಣನವರ ಬಹುಮುಖ ವ್ಯಕ್ತಿತ್ವ' ಕುರಿತು ಶಿವಮೊಗ್ಗ ಶಂಕರಘಟ್ಟದ ಸಂಸ್ಕೃತಿ ಚಿಂತಕ ಡಾ. ಬಸವರಾಜ ನೆಲ್ಲಿಸರ ಉಪನ್ಯಾಸ ನೀಡಲಿದ್ದಾರೆ. ಪರಿಷತ್ ಗೌರವ ಸಲಹೆಗಾರ ಹೆಚ್.ಕೆ.ಲಿಂಗರಾಜ್ ದತ್ತಿ ದಾಸೋಹಿಗಳ ಪರಿಚಯ ಮಾಡಿಕೊಡಲಿದ್ದಾರೆ.

ರಾಜ್ಯ ಯುವ ವೇದಿಕೆ ಸಂಚಾಲಕ ಪ್ರಕಾಶ್ ಎಸ್. ಅಂಗಡಿ ಸೇವಾ ದೀಕ್ಷಾ ಬೋಧನೆ ಮಾಡಲಿದ್ದು, ಡಾ. ಶಿವರಾಜ್ ಕಬ್ಬೂರು ಮತ್ತು ತಂಡದವರು ಸೇವಾ ದೀಕ್ಷೆ ಸ್ವೀಕಾರ ಮಾಡಲಿದ್ದಾರೆ. ಕದಳಿ ಮಹಿಳಾ ವೇದಿಕೆ ಪ್ರಮೀಳಾ ನಟರಾಜ್, ಗಾಯತ್ರಿ ವಸ್ತ್ರದ್ ಮತ್ತಿತರರು ಪಾಲ್ಗೊಳ್ಳಲಿದ್ದಾರೆ ಎಂದು ಹೇಳಿದರು.

ಚಿತ್ರದುರ್ಗ ಜಿಲ್ಲೆ ಭೀಮಸಮುದ್ರದ ಲಿಂ. ಶ್ರೀಮತಿ ಹಾಲಮ್ಮ ಮತ್ತು ಲಿಂ. ಮಲ್ಲಿಕಾರ್ಜುನಪ್ಪ ಅವರ ಸ್ಮರಣಾರ್ಥ ಜಿಲ್ಲಾ ಶರಣ ಸಾಹಿತ್ಯ ಪರಿಷತ್ ವತಿಯಿಂದ 'ಶರಣ ಸಿರಿ' ಪ್ರಶಸ್ತಿ ನೀಡಲಾಗುತ್ತಿದ್ದು, ಚನ್ನಗಿರಿ ತಾಲ್ಲೂಕು ಶರಣ ಸಾಹಿತ್ಯ ಪರಿಷತ್ ಗೌರವಾಧ್ಯಕ್ಷ ಹೆಚ್.ಎಸ್. ಮಲ್ಲಿಕಾ ರ್ಜುನಪ್ಪ ಅವರಿಗೆ ಈ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದರು.

ಪತ್ರಿಕಾಗೋಷ್ಠಿಯಲ್ಲಿ ಪರಿಷತ್ ಪದಾಧಿಕಾರಿಗಳಾದ ಬಿ.ಟಿ.ಪ್ರಕಾಶ್, ಭರಮಪ್ಪ ಮೈಸೂರು, ಆರ್. ಸಿದ್ದೇಶಪ್ಪ, ಜಿ.ಎಂ.ಕುಮಾರಪ್ಪ ಉಪಸ್ಥಿತರಿದ್ದರು.

॥ ಶ್ರೀ ದೇವರಹಟ್ಟಿ ಬಸವಣ್ಣ ಪ್ರಸನ್ನ ॥
ಶ್ರೀ ದೇವರಹಟ್ಟಿ ಬಸವಣ್ಣ ದೇವಸ್ಥಾನ ಟ್ರಸ್ಟ್ (ರಿ.)
ದೇವರಹಟ್ಟಿ ಗ್ರಾಮ, ದಾವಣಗೆರೆ ತಾಲ್ಲೂಕು, ಜಿಲ್ಲೆ



ದಾವಣಗೆರೆ ತಾಲ್ಲೂಕು ಕಸಬಾ ಹೋಬಳಿ ದೇವರಹಟ್ಟಿ ಗ್ರಾಮದಲ್ಲಿರುವ ಶ್ರೀ ದೇವರಹಟ್ಟಿ ಬಸವಣ್ಣ ದೇವಸ್ಥಾನ ಟ್ರಸ್ಟ್, ದೇವರಹಟ್ಟಿ (ರಿ.ನಂ. 351/2018-19) ಇವರ ವತಿಯಿಂದ
ಶ್ರೀ ದೇವರಹಟ್ಟಿ ಬಸವಣ್ಣನ ರಥೋತ್ಸವ
ಇಂದು 05-03-2025 ರ ಬುಧವಾರ
ಸಂಜೆ 6-30 ಗಂಟೆಗೆ ವಿಜೃಂಭಣೆಯಿಂದ ನೆರವೇರಲಿದೆ.
ನಾಳೆ ದಿನಾಂಕ 06.03.2025ರ ಗುರುವಾರ ಸಂಜೆ 4 ಗಂಟೆಯಿಂದ ಬೆಲ್ಲದ ಬಂಡಿ ಮತ್ತು ಹೋರಿಗಳ ಮೆರವಣಿಗೆ ಜಾತ್ರೆ ಇರುತ್ತದೆ. ಸಂಜೆ 7.30 ಕ್ಕೆ 'ಬಸವಣ್ಣನ ಓಕಳಿ' ಹಾಗೂ 'ಗಂಗಾಪೂಜೆ' ಕಾರ್ಯಕ್ರಮದ ನಂತರ ದೇವರು ಗುಡಿ ತುಂಬುವುದು. ನಾಡಿದ್ದು ದಿನಾಂಕ 07.03.2025 ರ ಶುಕ್ರವಾರ ಬೆಳಿಗ್ಗೆ 9 ಗಂಟೆಗೆ 'ಪಲ್ಲಕ್ಕಿ ಸೇವೆ' ನಡೆಯಲಿದೆ. ಸರ್ವ ಭಕ್ತಾದಿಗಳು ಈ ಎಲ್ಲಾ ಕಾರ್ಯಕ್ರಮಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ, ಶ್ರೀ ಸ್ವಾಮಿಯ ಕೃಪೆಗೆ ಪಾತ್ರರಾಗಬೇಕೆಂದು ಶ್ರೀ ದೇವರಹಟ್ಟಿ ಬಸವಣ್ಣ ದೇವಸ್ಥಾನ ಟ್ರಸ್ಟ್‌ನವರು ವಿನಂತಿಸಿದ್ದಾರೆ.




ಮಲೇಬೆನ್ನೂರು ಪಟ್ಟಣದಲ್ಲಿ ಮಂಗಳವಾರ ಸಂಜೆ ವೈಭವದೊಂದಿಗೆ ಜರುಗಿದ ಶ್ರೀ ಬಸವೇಶ್ವರ ದೇವರ ರಥೋತ್ಸವ...

# ಸಾವಿಗಾಗಿ ಹೋರಾಟ ನಡೆಸಿ ಗೆದ್ದ ಕರಿಬಸಮ್ಮ

## ಈ ನಿವೃತ್ತ ಶಿಕ್ಷಕಿ ಬಗ್ಗೆ ಪ್ರಪಂಚಕ್ಕೆ ತಿಳಿಯಬೇಕಿದೆ: ತೆಲುಗು ಚಿತ್ರ ನಟಿ ರೋಜಾ ರಮಣಿ

ದಾವಣಗೆರೆ, ಮಾ.4- ದಯಾಮರಣಕ್ಕಾಗಿ ಹೋರಾಟ ನಡೆಸಿ ಗೆದ್ದ ನಿವೃತ್ತ ಶಿಕ್ಷಕಿ ಕರಿಬಸಮ್ಮ ನವರ ಬಗ್ಗೆ ಪ್ರಪಂಚಕ್ಕೇ ತಿಳಿಯ ಬೇಕಿದೆ. ಇವರೊಬ್ಬ ಅಪರೂಪದಲ್ಲಿ ಅಪರೂಪದ ಮಹಿಳೆ ಎಂದು ತೆಲುಗು ಚಿತ್ರರಂಗದ ಹೆಸರಾಂತ ನಟಿ ರೋಜಾ ರಮಣಿ ಹೇಳಿದ್ದಾರೆ.

ಮಂಗಳವಾರ ರಾತ್ರಿ ಕರಿಬಸಮ್ಮ ನವರನ್ನು ಭೇಟಿ ಮಾಡಿ, ಕುಶಲೋಪರಿ ವಿಚಾರಿಸಿದ ನಂತರ ಅವರು ತಮ್ಮನ್ನು ಭೇಟಿಯಾದ 'ಜನತಾವಾಣಿ' ಯೊಂದಿಗೆ ಮಾತನಾಡಿದರು.

ಮೂರು ದಿನಗಳ ಹಿಂದಷ್ಟೇ ರಾತ್ರಿ ಕರಿಬಸಮ್ಮನವರ ಕುರಿತ ಸಂದರ್ಶನವೊಂದನ್ನು ಖಾಸಗಿ ವಾಹಿನಿಯಲ್ಲಿ ನೋಡಿದೆ. ನಿಜಕ್ಕೂ ಆಶ್ಚರ್ಯವಾಯಿತು. ಇಂತವರೂ ಭೂಮಿ ಮೇಲೆ ಇದ್ದಾರೆಯೇ? ಎನಿಸಿತು. ಆ ಕ್ಷಣದಿಂದಲೇ ಅವರನ್ನು ನೋಡುವ ತುಡಿತ ಹೆಚ್ಚಿತು.

ಅಂದೇ ನನ್ನ ಪತಿಯ ಬಳಿ



ಪ್ರಸ್ತಾಪಿಸಿದೆ. ಅವರೂ ಸಹ ಭೇಟಿ ಮಾಡಲು ಒಪ್ಪಿಗೆ ಇತ್ತರು. ನಂತರ ಹೈದರಾಬಾದ್‌ನಿಂದ ಬೆಂಗಳೂರಿಗೆ ಬಂದು, ಅಲ್ಲಿಂದ ದಾವಣಗೆರೆಗೆ ಬಂದು ಅವರನ್ನು ಭೇಟಿ ಮಾಡಿದೆ. ತುಂಬಾ ಖುಷಿಯಾಗುತ್ತಿದೆ ಎಂದು ಹೇಳಿದರು.

ಮಾಜಿ ಪ್ರಧಾನಿ ಪ್ರಧಾನಿ ಇಂದಿರಾಗಾಂಧಿ, ಹಾಲಿ ಪ್ರಧಾನಿ ನರೇಂದ್ರ ಮೋದಿ ಸೇರಿದಂತೆ ಸಾಕಷ್ಟು ಸೆಲೆಬ್ರಟಿಗಳನ್ನು ನೋಡಿದ್ದೇನೆ. ಆದರೆ ಈ ರೀತಿಯ ಮಹಿಳೆಯನ್ನು ಜೀವನದಲ್ಲಿ ಇದೇ ಪ್ರಥಮ ಬಾರಿಗೆ ನೋಡುತ್ತಿದ್ದೇನೆ ಎಂದರು.

ಅನಾರೋಗ್ಯ, ಮಾನಸಿಕ ಕಿರಿಕಿರಿ, ಕ್ಯಾನ್ಸರ್ ನಂತಹ ಕಾಯಿಲೆಯ ನಡುವೆಯೂ ಅವರ ವಿಲ್ ಪವರ್ ಅತ್ಯುತ್ತಮವಾಗಿದೆ. 85 ಸಾಮಾನ್ಯವಾಗಿ ಜನರು ತಮ್ಮ ಬೇಡಿಕೆಗಾಗಿ ಸರ್ಕಾರದ ವಿರುದ್ಧ ಪ್ರತಿಭಟನೆ ಮಾಡುತ್ತಾರೆ. ಆದರೆ ಇವರು ಸಾವಿನ ಕುರಿತು ಸರ್ಕಾರದೊಂದಿಗೆ ಹೋರಾಟ ನಡೆಸಿ ಗೆದ್ದಿದ್ದಾರೆ. ನಿಜಕ್ಕೂ ಇವರು ಗ್ರೇಟ್ ಎಂದು ಪ್ರಶಂಸಿಸಿದರು.

ಅಂದ ಹಾಗೆ ನಟಿ ರೋಜಾ ರಮಣಿ ಅವರು ಭಾರತೀಯ ನಟಿ. ಪ್ರಧಾನವಾಗಿ ಮಲಯಾಳಂ, ತಮಿಳು, ತೆಲುಗು ಹಾಗೂ ಕನ್ನಡ ಚಿತ್ರಗಳಲ್ಲಿ ನಟಿಸಿದ್ದಾರೆ. ಬಾಲ ನಟಿಯಾಗಿ 1967ರಲ್ಲಿ ತೆಲುಗಿನಲ್ಲಿ ಭಕ್ತ ಪ್ರಹ್ಲಾದ ಚಿತ್ರದಲ್ಲಿ ನಟಿಸಿದ್ದರು. ಇದಕ್ಕಾಗಿ ಅವರು ಅತ್ಯುತ್ತಮ ಬಾಲನಟಿ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿಯನ್ನು ಪಡೆದರು.

ಅವರು 1970 ಮತ್ತು 1980 ರ ದಶಕದ ಆರಂಭದಲ್ಲಿ ಜನಪ್ರಿಯರಾಗಿದ್ದ ಇವರು ಡಬ್ಬಿಂಗ್ ಕಲಾವಿದೆಯಾಗಿ 400ಕ್ಕೂ ಹೆಚ್ಚು ಚಿತ್ರಗಳಲ್ಲಿ ಕೆಲಸ ಮಾಡಿದ್ದಾರೆ. ಅಭಿನಯ ಮತ್ತು ಧ್ವನಿ ಡಬ್ಬಿಂಗ್‌ಗಾಗಿ 50 ಕ್ಕೂ ಹೆಚ್ಚು ಪ್ರಶಸ್ತಿಗಳನ್ನು ಪಡೆದಿದ್ದಾರೆ.

## ನೀಲಾನಹಳ್ಳಿಯಲ್ಲಿ ಇಂದು ಆಂಜನೇಯ ಸ್ವಾಮಿ ತೇರು, ಕಾರಣಿಕ



ದಾವಣಗೆರೆ ಸಮೀಪದ ನೀಲಾನಹಳ್ಳಿ ಗ್ರಾಮದ ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನದಲ್ಲಿ ಇಂದು ಬೆಳಿಗ್ಗೆ ಶ್ರೀ ಸ್ವಾಮಿ ರಥೋತ್ಸವ ಹಾಗೂ ಸಂಜೆ ಕಾರಣಿಕ ನಡೆಯಲಿದೆ ಎಂದು ದೇವಸ್ಥಾನದ ಕನ್ವೀನರ್ ಎನ್.ಎಂ. ಆಂಜನೇಯ ಗುರೂಜಿ ತಿಳಿಸಿದ್ದಾರೆ.

ಇಂದು ಬೆಳಿಗ್ಗೆ 10.10ಕ್ಕೆ ನೂತನ ತೇರಿನ ರಥೋತ್ಸವ ನಡೆಯಲಿದೆ. ಬೆಳಿಗ್ಗೆ 11.30 ರಿಂದ ಮಧ್ಯಾಹ್ನ 1.30 ರವರೆಗೆ ಭಕ್ತಾದಿಗಳು ಹರಕೆ ತೀರಿಸುವುದು. ಸಂಜೆ 4.30ಕ್ಕೆ ಬೇಟೆ ಆಡುವುದು. ನಂತರ 5.30ಕ್ಕೆ ಮುಳ್ಳುಗದ್ದುಗೆ ಏರುವುದು. ಸಂಜೆ 6.30ಕ್ಕೆ ಕಾರಣಿಕ ನುಡಿಯುವುದು. ರಾತ್ರಿ 7.30ಕ್ಕೆ ಭೂತ ಸೇವೆ, ನಂತರ 8.30ಕ್ಕೆ ಓಕಳಿ ಕಾರ್ಯ ಹಾಗೂ 9.30ಕ್ಕೆ ಗಂಗೆ ಪೂಜೆ ನೆರವೇರುವುದು.

## ನಗರದಲ್ಲಿ ಇಂದು ಮಜ್ಜಿಗೆ ವಿತರಣೆ

ಕರುಣಾ ಜೀವ ಕಲ್ಯಾಣ ಟ್ರಸ್ಟ್‌ನಿಂದ ನಡೆಸುತ್ತಿರುವ ಮಜ್ಜಿಗೆ ವಿತರಣಾ ಕಾರ್ಯಕ್ರಮಕ್ಕೆ ಮೋತಿ ಮಕ್ಕಳ ಆರೋಗ್ಯ ಕೇಂದ್ರ, ಎಂ.ಎಸ್.ಶಿವಣ್ಣ ಸ್ಮರಣಾರ್ಥ, ಹೆಚ್.ಬಿ.ಕರಿಬಸಮ್ಮನವವರು ಇಂದಿನ ದಾನಿಗಳಾಗಿದ್ದಾರೆ. ಈ ಸತ್ಕಾರ್ಯಕ್ಕೆ ದಾನ ಮಾಡ ಬಯಸುವವರು 9110455199 ಈ ಸಂಖ್ಯೆಗೆ ಸಂಪರ್ಕಿಸಬಹುದು.

# ಅಥಣಿ ಕಾಲೇಜಿನ ಆವರಣದಲ್ಲಿ ಗಂಧರ್ವ ಲೋಕ ಸೃಷ್ಟಿಸಿದ ಕಲಾವಿದರು

ದಾವಣಗೆರೆ, ಮಾ. 4 - ನಗರದಲ್ಲಿ ಮೊನ್ನೆ ಏರ್ಪಾಡಾಗಿದ್ದ 'ಶಿವರಾತ್ರಿ ಉತ್ಸವ'ದಲ್ಲಿ ಸ್ಥಳೀಯ120ಕ್ಕೂ ಹೆಚ್ಚು ಕಲಾವಿದರು, ವೈವಿಧ್ಯಮಯ ನೃತ್ಯ, ಸಂಗೀತ ಪ್ರಸ್ತುತಿಗಳ ಮೂಲಕ ಗಂಧರ್ವ ಲೋಕವನ್ನೇ ಧರೆಗಿಳಿಸಿದರು.

ಮಧ್ಯ ಕರ್ನಾಟಕದಲ್ಲೇ ಅತೀ ಎತ್ತರದ ಶಿವನ ಮೂರ್ತಿ ಎಂಬ ಕೀರ್ತಿಗೆ ಪಾತ್ರವಾಗಿರುವ ನಗರದ ಎಸ್.ಎಸ್. ಬಡಾವಣೆಯ ಅಥಣಿ ಕಾಲೇಜಿನ ಆವರಣದ ಪ್ರಶಾಂತ ವಾತಾವರಣದಲ್ಲಿ ಸಂಜೆ 7 ರಿಂದ ರಾತ್ರಿ 12 ಗಂಟೆಯವರೆಗೂ ಸತತವಾಗಿ ಒಂದಾದ ಮೇಲೊಂದು ಭರತನಾಟ್ಯ, ಭಕ್ತಿ ನೃತ್ಯ, ಭಕ್ತಿ ಸಂಗೀತ, ಶ್ಲೋಕ, ಪಠಣ, ವಚನ ಗಾಯನ ನಡೆಯುತ್ತಾ ಹೋದಾಗ ನೆರೆದ 5000ಕ್ಕೂ ಹೆಚ್ಚು ಪ್ರೇಕ್ಷಕರು ಮಕ್ಕಳ ಪ್ರತಿಭಾ ಪ್ರದರ್ಶನಕ್ಕೆ ಭರ್ಜರಿ ಚಪ್ಪಾಳೆ ಹಾಕಿದರು.



### ಚಿರಂತನದಿಂದ ವೈವಿಧ್ಯಮಯ ನೃತ್ಯ

ಚಿರಂತನ ಅಕಾಡೆಮಿ ನೇತೃತ್ವದಲ್ಲಿ ಅಥಣಿ ಕಾಲೇಜು, ಬಿ.ಎಸ್. ಚನ್ನಬಸಪ್ಪ ಪ್ರಥಮ ದರ್ಜೆ ಕಾಲೇಜು ಇವರ ಸಹಯೋಗದೊಂದಿಗೆ ನಡೆದ ಈ ಅದ್ದೂರಿ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಹಿರಿಯ ಕೈಗಾರಿಕೋದ್ಯಮಿ ಡಾ. ಅಥಣಿ ಎಸ್. ವೀರಣ್ಣ ಅವರು ದಾವಣಗೆರೆ ಪ್ರತಿಭೆಗಳಿಗೆ ಈ ರೀತಿ ವೇದಿಕೆ ಸೃಷ್ಟಿಸಿರುವುದರ ಬಗ್ಗೆ ಮೆಚ್ಚುಗೆ ಸೂಚಿಸಿದರು. ಚಿರಂತನ ಸಂಸ್ಥೆಯ ಪ್ರಯತ್ನಗಳನ್ನು ಶ್ಲಾಘಿಸಿದರು.

ಮತ್ತೋರ್ವ ಅತಿಥಿಯಾಗಿ ಆಗಮಿಸಿದ್ದ ಪ್ರಜಾವಾಣಿ ಸ್ಥಾನಿಕ ಸಂಪಾದಕ ಸಿದ್ದಯ್ಯ ಹಿರೇಮಠ್ ಅವರು ಮಾತನಾಡಿ, ಶಿವರಾತ್ರಿಯ ಮಹತ್ವವನ್ನು ತಿಳಿಸಿ, ಭಕ್ತಿ, ನೃತ್ಯ, ಸಂಗೀತದ ಮುಖಾಂತರ ಜಾಗರಣೆ ಆಯೋಜಿಸಿರುವ ಈ ಪ್ರಯತ್ನ ಸಫಲವಾಗಿದೆ ಎಂದು ಹೇಳಿದರು.

ಗಣ್ಯರಾದ ದೇವರಮನಿ ಶಿವಕುಮಾರ್, ಎ.ವಿ. ಪ್ರಸಾದ್, ಎಸ್.ಬಿ.ಸಿ. ಕಾಲೇಜಿನ ಪ್ರಾಂಶುಪಾಲ ಡಾ. ಕೆ. ಷಣ್ಮುಖಪ್ಪ, ಶ್ರೀಮತಿ ಎಂ.ಎಸ್. ಅಲಕಾನಂದ ಹಾಗೂ ಚಿರಂತನ ಅಧ್ಯಕ್ಷೆ ಶ್ರೀಮತಿ ದೀಪಾ ಎನ್. ರಾವ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಮಾಧವ್ ಪ್ರಸಾದ್ ಪದಕಿ ಕಾರ್ಯಕ್ರಮ ನಿರೂಪಿಸಿದರು. ಶಿವರಾತ್ರಿಯಂದು 120ಕ್ಕೂ ಹೆಚ್ಚು ಕಲಾವಿದರು ತಮ್ಮ ಸಂಗೀತ, ನೃತ್ಯದ ಮುಖಾಂತರ ಶಿವನ ಭಕ್ತಿಯನ್ನು ಸಾರುವ 40ಕ್ಕೂ ಹೆಚ್ಚು ಪ್ರದರ್ಶನಗಳನ್ನು ನೀಡಿದ್ದು ವಿಶೇಷವಾಗಿತ್ತು.

# ರಾಜಕಾರಣಿಗಳ ಅನರ್ಹತೆ ಕಡಿತಗೊಳಿಸಿದ ವಿವರ ಕೇಳಿದ ಸುಪ್ರೀಂ ಕೋರ್ಟ್

ನವದೆಹಲಿ, ಮಾ. 4 - ರಾಜಕಾರಣಿಗಳ ಅನರ್ಹತೆಯನ್ನು ಕಡಿತಗೊಳಿಸಿದ ಇಲ್ಲವೇ ತೆಗೆದು ಹಾಕಿದ ಬಗ್ಗೆ ವಿವರ ಸಲ್ಲಿಸುವಂತೆ ಚುನಾವಣಾ ಆಯೋಗಕ್ಕೆ ಸುಪ್ರೀಂ ಕೋರ್ಟ್ ತಿಳಿಸಿದೆ.



ಅಪರಾಧಿಕ ಪ್ರಕರಣಗಳ ಶಿಕ್ಷೆ ಕಾರಣದಿಂದ ಅನರ್ಹತೆಗೆ ಗುರಿಯಾಗಿರುವ ರಾಜಕಾರಣಿಗಳ ಅನರ್ಹತೆಯ ಅವಧಿಯನ್ನು ಕಡಿಮೆ ಮಾಡಲು ಇಲ್ಲವೇ ರದ್ದುಗೊಳಿಸಲು ಚುನಾವಣಾ ಆಯೋಗಕ್ಕೆ ಅಧಿಕಾರ ಇದೆ.

1951ರ ಜನಪ್ರತಿನಿಧಿ ಕಾಯ್ದೆಯ ಸೆಕ್ಷನ್ 11ರ ಅನ್ವಯ ನೀಡಲಾದ ಈ ಅಧಿಕಾರವನ್ನು ಬಳಸಿಕೊಂಡಿರುವ ಕುರಿತು ಎರಡು ವಾರಗಳಲ್ಲಿ ವಿವರ ಸಲ್ಲಿಸುವಂತೆ ನ್ಯಾಯಮೂರ್ತಿಗಳಾದ ದೀಪಂಕರ ದತ್ತ ಹಾಗೂ ಮನಮೋಹನ್ ಅವರನ್ನು ಒಳಗೊಂಡ ಪೀಠ ತಿಳಿಸಿದೆ.

ಅಪರಾಧದ ಸ್ವರೂಪ ಹಾಗೂ ಶಿಕ್ಷೆಗೆ ಅನುಗುಣವಾಗಿ ರಾಜಕಾರಣಿಗಳು ಗುರಿಯಾಗುವ ಅನರ್ಹತೆಯ ಅವಧಿ ಬೇರೆ ಬೇರೆ ಸ್ವರೂಪದ್ದಾಗಿದೆ.

ಎರಡು ಅಥವಾ ಹೆಚ್ಚಿನ ವರ್ಷಗಳ ಶಿಕ್ಷೆಗೆ ಗುರಿಯಾಗುವ ವ್ಯಕ್ತಿಗಳು ಬಿಡುಗಡೆಯ ನಂತರದ ಆರು ವರ್ಷಗಳವರೆಗೆ ಸ್ಪರ್ಧಿಸಲು ಅನರ್ಹರಾಗಿರುತ್ತಾರೆ. ಅವರು ಜಾಮೀನು ಪಡೆದರೂ ಅಥವಾ ಮೇಲ್ಮನವಿಯ ನಿರೀಕ್ಷೆಯಲ್ಲಿದ್ದರೂ ಅನರ್ಹತೆ ಅನ್ವಯವಾಗುತ್ತದೆ.

ಆದರೆ ಚುನಾವಣಾ ಆಯೋಗವು ಕೆಲ ಕಾರಣಗಳೊಂದಿಗೆ ಈ ಅನರ್ಹತೆಯ ಅವಧಿಯನ್ನು ಇಳಿಸಬಹುದು ಇಲ್ಲವೇ ರದ್ದುಗೊಳಿಸಬಹುದು.

## ಸಿಬಿಐನಿಂದ 26ರೈಲ್ವೆ ಅಧಿಕಾರಿಗಳ ಬಂಧನ

ನವದೆಹಲಿ, ಮಾ. 4 – ರೈಲ್ವೆ ಇಲಾಖಾ ಪ್ರಶ್ನೆ ಪತ್ರಿಕೆ ಸೋರಿಕೆಗೆ ಸಂಬಂಧಿಸಿದಂತೆ ಸಿಬಿಐ 26 ಅಧಿಕಾರಿಗಳನ್ನು ಬಂಧಿಸಿದೆ ಹಾಗೂ 1.17 ಕೋಟಿ ರೂ.ಗಳನ್ನು ವಶಪಡಿಸಿಕೊಂಡಿದೆ.

ಉತ್ತರ ಪ್ರದೇಶದ ಮುಘಲ್ ಸರಾಯಿಯಲ್ಲಿ ಮುಖ್ಯ ಲೋಕೋ ಪೈಲಟ್ ಹುದ್ದೆಯ ಬಡ್ತಿಗಾಗಿ ನಡೆಸಲಾಗುತ್ತಿದ್ದ ಪರೀಕ್ಷೆಯಲ್ಲಿ ಪ್ರಶ್ನೆಪತ್ರಿಕೆ ಸೋರಿಕೆ ಮಾಡಲಾಗಿದೆ ಎಂದು ಸಿಬಿಐ ಅಧಿಕಾರಿಗಳು ತಿಳಿಸಿದ್ದಾರೆ.

ಮಂಗಳವಾರ ಈ ಪರೀಕ್ಷೆ ನಡೆಯಬೇಕಿತ್ತು. ಆದರೆ, ಸೋರಿಕೆ ಕಾರಣದಿಂದಾಗಿ ಪರೀಕ್ಷೆಯನ್ನು ಮುಂದೂಡಲಾಗಿದೆ.

Aaraike Hospitals
HCG The Specialist in Cancer Care
adding life to years
HCG ಕ್ಯಾನ್ಸರ್ ಕೇರ್‌ನಿಂದ ನಮ್ಮ ಅನುಭವಿ ಆಂಕೊಲಾಜಿಸ್ಟ್ ಅನ್ನು ನಿಮ್ಮ ನಗರದಲ್ಲಿ ಭೇಟಿ ಮಾಡಿ
ಆರೈಕೆ ಸೂಪರ್ ಸ್ಪೆಷಾಲಿಟಿ ಹಾಸ್ಪಿಟಲ್



ವಿಳಾಸ
ಆರೈಕೆ ಸೂಪರ್ ಸ್ಪೆಷಾಲಿಟಿ ಹಾಸ್ಪಿಟಲ್
ಕ್ರೀಡಾಂಗಣದ ಎದುರು, ಹವಾಯಿ ರಸ್ತೆ, ದಾವಣಗೆರೆ - 577001
ಭೇಟಿ ಸಮಯ
DATE : 6 Mar 2025, Thursday
TIME : 10:00 AM - 11:30 AM
Dr Krithikaa Sekar
Consultant Radiation Oncologist
HCG Cancer Centre, KR Road
Bangalore, Karnataka
For Appointment, Contact
7829434249
www.hcgoncology.com
AHMEDABAD | BENGALURU | BHAVNAGAR | CHENNAI | CUTTACK | HUBBALLI | INDORE | JAIPUR | KALABURAGI | KENYA | KOLKATA | MUMBAI | MYSORE | NAGPUR | NASHIK | ONGOLE | RAJKOT | RANCHI | SHIMOGA | VADODARA | VIJAYAWADA | VIZAG

WANTED
FULL TIME
ACCOUNTANT
WITH 3 YEARS EXPERIENCE
IN TALLY ACCOUNTING
APPLY WITH BIO-DATA
IMMEDIATELY
SHANTHALA
CHAMARAJPET,
DAVNANGERE
Contact No : 96861 95328
96861 95323

## ದೇವರಹಟ್ಟಿ : ಇಂದು ರಥೋತ್ಸವ



ದಾವಣಗೆರೆ ಸಮೀಪದ ಶ್ರೀ ದೇವರಹಟ್ಟಿ ಬಸವ ಣ್ಣನ ರಥೋತ್ಸವವು ಇಂದು ಸಂಜೆ 6.30 ಗಂಟೆಗೆ ನೆರವೇರಲಿದೆ. ನಾಳೆ ಗುರುವಾರ ಸಂಜೆ 4 ಕ್ಕೆ ಬೆಲ್ಲದ ಬಂಡಿ ಮತ್ತು ಹೋರಿ ಗಳ ಮೆರವಣಿಗೆ ಜಾತ್ರೆ, ಸಂಜೆ 7.30ಕ್ಕೆ ಬಸವಣ್ಣನ ಓಕಳಿ, ಗಂಗಾ ಪೂಜೆ ಕಾರ್ಯಕ್ರಮದ ನಂತರ ದೇವರ ಗುಡಿ ತುಂಬುವುದು. ನಾಡಿದ್ದು ದಿನಾಂಕ 7ರ ಶುಕ್ರವಾರ ಬೆಳಿಗ್ಗೆ 9 ಗಂಟೆಗೆ ಪಲ್ಲಕ್ಕಿ ಸೇವೆ ನಡೆಯಲಿದೆ.

## ಹಳ್ಳಿಹಾಳ್ : ನಾಳೆ ಮುರುಡ ಬಸವೇಶ್ವರ ತೇರು



ಮಲೇಬೆನ್ನೂರು ಸಮೀಪದ ಹಳ್ಳಿಹಾಳ್ ಗ್ರಾಮದ ಶ್ರೀ ಮುರುಡ ಬಸವೇಶ್ವರ ದೇವರ ರಥೋತ್ಸವವು ನಾಳೆ ಗುರುವಾರ ಸಂಜೆ 4 ಗಂಟೆಗೆ ಜರುಗಲಿದೆ. ಇಂದು ಬೆಳಿಗ್ಗೆ 9 ಗಂಟೆಗೆ ಉಚ್ಛಾಯ ನಡೆಯಲಿದೆ. ನಾಳೆ ಗುರುವಾರ ಸಾಯಂಕಾಲ 4 ಗಂಟೆಗೆ ರಥೋತ್ಸವ ಜರುಗಲಿದೆ. ದಿನಾಂಕ 7ರ ಶುಕ್ರವಾರ ಸಂಜೆ 5 ಗಂಟೆಗೆ ಓಕಳಿಯೊಂದಿಗೆ ಜಾತ್ರೆಗೆ ತೆರೆ ಬೀಳಲಿದೆ ಎಂದು ಗ್ರಾಮದ ಹೆಚ್. ವೀರನಗೌಡ ಮತ್ತು ಯು. ಎನ್. ಶಿವನಗೌಡ ತಿಳಿಸಿದ್ದಾರೆ.



ನಾಯಿ ಕಳೆದಿದೆ
Shihtzu ತಳಿಯ 11 ತಿಂಗಳ ನಾಯಿ ಮರಿ ದಿನಾಂಕ 02.03.2025 ರಂದು 4.45ರ ಸುಮಾರಿಗೆ ಬಾಪೂಜಿ ಕಣ್ಣಿನ ಆಸ್ಪತ್ರೆ ಹತ್ತಿರದಲ್ಲಿ ಕಾಣೆಯಾಗಿದೆ.
ಅವಳ ಬಗ್ಗೆ ಏನಾದರೂ ಮಾಹಿತಿ ಸಿಕ್ಕರೆ ದಯವಿಟ್ಟು
9901332242, 7795840401 ಮೊಬೈಲ್ ಸಂಖ್ಯೆಗೆ ಸಂಪರ್ಕಿಸಿ.
ಹುಡುಕಿ ಕೊಟ್ಟವರಿಗೆ ಸೂಕ್ತ ಬಹುಮಾನ ನೀಡಲಾಗುವುದು.

ESTD : 2009
SA
SCIENCE ACADEMY (R.)
(A UNIQUE CENTRE FOR P.U. CLASSES)
#307/2B, I FLOOR, 2ND MAIN, P.J. EXTN, NEAR STADIUM, DAVANGERE - 4
ADMISSION STARTED FOR
II PUC (PCMB) SUMMER CLASSES
Classes starts from : 6th March 2025
(6th march 2025 to 15th May 2025)
&
CET-NEET CRASH COURSE
Classes starts from : 20th March 2025
Subject Experts will engage the classes
Newly well prepared study materials will be given.
Unit tests, Cumulative tests & Grand tests conducted periodically
Only Few Seats are Available, Join early.
For more Details contact : Office: 08192 - 457761, Mobile: 9980368779. 9066621827, 9481181446.





ಹೃದಯಪೂರ್ವಕ ಕೃತಜ್ಞತೆಗಳು
ದಿನಾಂಕ : 02.03.2025ನೇ ಭಾನುವಾರದಂದು ನಡೆದ ಹಾವೇರಿ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ. ಹಾವೇರಿ. ರಾಣೇಬೆನ್ನೂರು ತಾಲ್ಲೂಕಿನ ಮತದಾರ ಕ್ಷೇತ್ರದಿಂದ ಸ್ಪರ್ಧಿಸಿರುವ ನನಗೆ ಅತೀ ಹೆಚ್ಚು ಮತ ನೀಡಿ ಆಶೀರ್ವಾದ ಮಾಡಿದಂತಹ ತಾಲ್ಲೂಕಿನ ಎಲ್ಲಾ ಹಾಲು ಉತ್ಪಾದಕ ಸಹಕಾರ ಸಂಘಗಳ ಪ್ರತಿನಿಧಿಗಳಿಗೆ ಹಾಗೂ ನಮ್ಮ ನಾಯಕರು, ವಿಧಾನಸಭಾ ಅಧ್ಯಕ್ಷರಾದ ಮಾಜಿ ಶ್ರೀ ಕೆ.ಬಿ. ಕೋಳಿವಾಡ ಸಾಹೇಬರಿಗೆ ಹಾಗೂ ಬ್ಯಾಡಗಿ ವಿಧಾನಸಭಾ ಕ್ಷೇತ್ರದ ಜನಪ್ರಿಯ ಶಾಸಕಾರದ ಶ್ರೀ ಬಸವರಾಜ ಶಿವಣ್ಣನವರಿಗೆ ಮತ್ತು ರಾಣೇಬೆನ್ನೂರು ತಾಲ್ಲೂಕಿನ ಜನಪ್ರಿಯ ಶಾಸಕರಾದ ಶ್ರೀ ಪ್ರಕಾಶ ಕೆ. ಕೋಳಿವಾಡ ಇವರಿಗೆ ಮತ್ತು ಪ್ರತ್ಯಕ್ಷ, ಪರೋಕ್ಷವಾಗಿ ನನ್ನ ಗೆಲುವಿಗೆ ಕಾರಣರಾದ ನಮ್ಮ ಪಕ್ಷದ ಎಲ್ಲಾ ಮುಖಂಡರಿಗೂ, ಕಾರ್ಯಕರ್ತರಿಗೂ ಹೃದಯಪೂರ್ವಕ ಧನ್ಯವಾದಗಳು...
ಮಂಜನಗೌಡ ಹನುಮಂತಗೌಡ ಪಾಟೀಲ
ನೂತನ ನಿರ್ದೇಶಕರು, ಹಾವೇರಿ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ.
ಹಾವೇರಿ ಫೋ. : 98442 46266, 96323 35266

॥ ಶ್ರೀ ಉಜ್ಜಿನಿ ಮರುಳಸಿದ್ದೇಶ್ವರ ಪ್ರಸನ್ನ ॥
ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ



ಶರಣೆ ಎ. ಆರ್. ದೇವಮ್ಮ ಮತ್ತು ಮಕ್ಕಳು
ವಿನಾಯಕ ಬಡಾವಣೆ, ವಿದ್ಯಾನಗರ, ದಾವಣಗೆರೆ,
ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ 25-02-2025 ನೇ ಮಂಗಳವಾರ ಬೆಳಿಗ್ಗೆ
ನನ್ನ ಪೂಜ್ಯ ಪತಿಯವರಾದ
ಆನೆಕೊಂಡದ ರೇವಕ್ಕಳರ
ಶರಣ ಎ.ಆರ್. ಬಸವರಾಜಪ್ಪನವರು
ಲಿಂಗೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
ಕೈಲಾಸ ಶಿವಗಣಾರಾಧನೆಯನ್ನು
ದಿನಾಂಕ:05.03.2025ನೇ ಬುಧವಾರ ಬೆಳಿಗ್ಗೆ 10.30 ಗಂಟೆಗೆ ಮೃತರ ಸ್ವಗೃಹ, #1969/25, 'ಮಹಾದೇವ ನಿಲಯ' 1ನೇ ಕ್ರಾಸ್, 3ನೇ ಮೇನ್, ತರಳಬಾಳು ಕೃಷಿ ವಿಜ್ಞಾನ ಕೇಂದ್ರದ ಹಿಂಭಾಗ, ವಿನಾಯಕ ಬಡಾವಣೆ, ವಿದ್ಯಾನಗರ, ದಾವಣಗೆರೆ. ಇಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಲಿಂಗೈಕ್ಯರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ. ಮೊ : 98861 00088
ದುಃಖತಪ್ತರು : ರೇವಕ್ಕಳ ವಂಶಸ್ಥರು ಹಾಗೂ ಬಂಧು ಮಿತ್ರರು.
ವಿ.ಸೂ.: ಆಹ್ವಾನ ಪತ್ರಿಕೆ ಕಳುಹಿಸಲಾಗಿದ್ದು, ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.

KA/SK/DVG-028/2024-2026. O/P @ B.V. Nagar P.O. **JANATHAVANI -** Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas